Notification is hereby issued that Land bearing survey numbers and extent specified in Schedule shall be declared as habitation area within the boundary of of **Haralahalli** village for conversion of **Haralahalli A.K Badavane** unrecorded habitation in to hamlet/part of the said revenue village.

Now , therefore in exercise of the power conferred by section 6 of the said Act, notice is hereby given for the information of all the persons likely to be affected thereby that the proposal will be taken into consideration on or after thirty days from the date of publication of the notification in the official Gazette.

Any objection or suggestion which may be received by the state Government from any person with respect to the said proposal before the date Specified above will be considered by the state Government. Objection or suggestion may be addressed to the Deputy Commissioner, **Davanagere** District.

SCHEDULE

Land bearing survey numbers and extent specified below in column(3) of the table shall be declared ashabitation area of **Haralahalli A.K Badavane** village of **Honnali** Taluk of **Davanagere** District convert the same to form hamlet within the boundary of **Haralahalli** Revenue village and same will herein after be named as called **Haralahalli A.K Badavane** of **Haralahalli** village in **Honnali** Taluk of **Davanagere** District.

TABLE

Name of the revenue village in Which unrecorded habitation is located	New name of the unrecorded habitation	Survey number	Total extent			Boundaries			
			Acre	Gunta	Anna	North	South	East	West
(1)	(2)	(3)	(4)			(5)			
Haralahalli	Haralahalli A.K Badavane	69/1	0	18	-	L. Sy No 70	L. Sy No 69/2	L. Sy No 15	L Road
		69/2	0	17	-	L. Sy No 69/1	L. Sy No 69/3	L. Sy No 15	L Road
		69/3	0	18	-	L. Sy No 69/2	L. Sy No 69/4	L. Sy No 15	L Road
Total extent of unrecorded habitation			**1**	**13**	**-**				

It is hereby declared that the extent of land indicated in the columns(4) above with survey numbers specified in column (3) on which the said unrecorded habitation

located is proposed to be converted as habitation area(Gramatana) of **Haralahalli A.K Badavane** hamlet/part of **Haralahalli** village in **Honnali** Taluk of **Davanagere** District.

The proposal specified above shall come into effect from such date as the State Government may specify by Notification proposed to be issued under section 5 of the Karnataka Land Revenue Act, 1964 (Karnataka Act No. 12 of 1964)

By order in the name of the
Governor of Karnataka

(Maruthi M.P)
Director,
Cell for creation of revenue villages
and Ex-officio Additional Secretary to Govt.
Revenue Department

ಕರ್ನಾಟಕ ಸರ್ಕಾರ

No.:RC-CFS/76/2026-RC
E- 2084344

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು 560001
ದಿನಾಂಕ:23-02-2026

ಪ್ರಾಥಮಿಕ ಅಧಿಸೂಚನೆ

ಕರ್ನಾಟಕ ಭೂಕಂದಾಯ ಅಧಿನಿಯಮ 1964ರ (1964ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಭೂಕಂದಾಯ ನಿಯಮಗಳು, 1966ರ 3ನೇ ನಿಯಮ(i)ರಿಂದ(iv) ನೇ ಖಂಡಿಕೆಗಳಲ್ಲಿ ನಿರ್ದಿಷ್ಟಪಡಿಸಿದ ಜನಸಂಖ್ಯೆ, ಕಂದಾಯ ಭೂಮಿಯ ಗಡಿಪ್ರದೇಶ ಮತ್ತು ಆಡಳಿತಾತ್ಮಕ ಅನುಕೂಲ, ಇಂತಹ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಅಸ್ತಿತ್ವದಲ್ಲಿರುವ ಸಣ್ಣ ಸಮೂಹ ಗ್ರಾಮದ ಭಾಗವಾಗಿ **ದಾವಣಗೆರೆ** ಜಿಲ್ಲೆಯ **ಹೊನ್ನಾಳಿ** ತಾಲ್ಲೂಕಿನ **ಹರಳಹಳ್ಳಿ** ಗ್ರಾಮದ ಗಡಿಯೊಳಗೆ ದಾಖಲಾಗದ ಜನವಸತಿ ಪ್ರದೇಶವನ್ನು ಸೇರಿಸುವುದರ ಮೂಲಕ ನಿವಾಸಿ ಪ್ರದೇಶದ ವ್ಯಾಪ್ತಿಯನ್ನು ಮಾರ್ಪಡಿಸುವ ಉದ್ದೇಶವನ್ನು ಕರ್ನಾಟಕ ರಾಜ್ಯ ಸರ್ಕಾರವು ಹೊಂದಿದೆ. ಗ್ರಾಮದ ಸಣ್ಣ ಜನವಸತಿ ಸಮೂಹದ ಮೂಲಕ ಅಭಿಯೋಗವಾದ ಪ್ರದೇಶವನ್ನು ಕೆಳಗಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾಗಿದೆ.

ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಸರ್ವೇ ನಂಬರುಗಳು ಮತ್ತು ವ್ಯಾಪ್ತಿಯನ್ನು ಹೊಂದಿರುವ ಭೂಮಿಯನ್ನು ದಾಖಲಾಗದ ಜನವಸತಿ **ಹರಳಹಳ್ಳಿ, ಎ.ಕೆ.ಬಡಾವಣೆ** ಎಂಬ ಉಪಗ್ರಾಮ ಪರಿವರ್ತನೆಗಾಗಿ **ಹರಳಹಳ್ಳಿ** ಸರಹದ್ದಿನೊಳಗಿನ ಜನವಸತಿ ಪ್ರದೇಶವನ್ನು ಸದರಿ ಕಂದಾಯ ಗ್ರಾಮದ ಸಣ್ಣ ಜನವಸತಿ ಸಮೂಹ ಭಾಗ ಎಂದು ಘೋಷಿಸತಕ್ಕ ಅಧಿಸೂಚನೆಯನ್ನು ಈ ಮೂಲಕ ಹೊರಡಿಸಲಾಗಿದೆ.

ಆದ್ದರಿಂದ, ಸದರಿ ಅಧಿನಿಯಮದ 6ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯು ಪ್ರಕಟಣೆಯಾದ ದಿನಾಂಕದಿಂದ 30(ಮೂವತ್ತು) ದಿನಗಳ ತರುವಾಯ ಪ್ರಸ್ತಾವನೆಯನ್ನು ಪರಿಗಣಿಸಲಾಗುವದು. ಇದರಿಂದ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ನೋಟಿಸನ್ನು ನೀಡಲಾಗಿದೆ. ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವ ಮೊದಲು ಸದರಿ ಪ್ರಸ್ತಾವನೆಯ ಕುರಿತು

ಯಾವುದೇ ವ್ಯಕ್ತಿಗಳಿಂದ ಸ್ವೀಕೃತಿಯಾಗುವ ಆಕ್ಷೇಪಣೆ ಅಥವಾ ಸಲಹೆಯನ್ನು **ದಾವಣಗೆರೆ** ಜಿಲ್ಲೆಯ ಜಿಲ್ಲಾಧಿಕಾರಿಗೆ ಸಲ್ಲಿಸಬಹುದು.

ಅನುಸೂಚಿ

ಕೋಷ್ಟಕದ (3)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಸರ್ವೆ ನಂಬರುಗಳು ಹಾಗೂ ವಿಸ್ತೀರ್ಣದ ಜಮೀನುಗಳನ್ನು ಹೊಂದಿರುವ **ದಾವಣಗೆರೆ** ಜಿಲ್ಲೆಯ **ಹೊನ್ನಾಳಿ** ತಾಲ್ಲೂಕಿನ **ಹರಳಹಳ್ಳಿ, ಎ.ಕೆ.ಬಡಾವಣೆ** ಗ್ರಾಮದ ಜನವಸತಿ ಪ್ರದೇಶವೆಂದು ಘೋಷಿಸತಕ್ಕದ್ದು, ಮತ್ತು ಅದನ್ನು **ಹರಳಹಳ್ಳಿ,** ಕಂದಾಯ ಗ್ರಾಮದ ಸರಹದ್ದಿನೊಳಗೆ ಸಣ್ಣ ವಸತಿ ಸಮೂಹ ವ್ಯಾಪ್ತಿಯನ್ನು ರಚಿಸಲು ಪರಿವರ್ತಿಸತಕ್ಕದ್ದು ಹಾಗೂ ಅದನ್ನು ಇನ್ನು ಮುಂದೆ **ದಾವಣಗೆರೆ** ಜಿಲ್ಲೆಯ **ಹೊನ್ನಾಳಿ** ತಾಲ್ಲೂಕಿನ **ಹರಳಹಳ್ಳಿ, ಎ.ಕೆ.ಬಡಾವಣೆ** ಉಪಗ್ರಾಮ ಎಂಬುದಾಗಿ ಹೆಸರಿಸತಕ್ಕದ್ದು,

ಕೋಷ್ಟಕ

ದಾಖಲಾಗದ ಜನವಸತಿ ಇರುವ ಕಂದಾಯಗ್ರಾಮ/ಗ್ರಾಮಗಳ ಹೆಸರು	ದಾಖಲಾಗದ ಜನವಸತಿಯ ಈಗಿನ ಹೆಸರು	ಅದು ಇರುವಂಥ ಸರ್ವೆ ನಂಬರುಗಳು	ಅದು ಇರುವಂಥ ಭೂಮಿಯ ಒಟ್ಟು ವ್ಯಾಪ್ತಿ			ಸರಹದ್ದುಗಳು			
			ಎಕರೆ	ಗುಂಟೆ	ಆಣೆ	ಉತ್ತರಕ್ಕೆ	ದಕ್ಷಿಣಕ್ಕೆ	ಪೂರ್ವಕ್ಕೆ	ಪಶ್ಚಿಮಕ್ಕೆ
(1)	(2)	(3)	4			5			
ಹರಳಹಳ್ಳಿ	ಹರಳಹಳ್ಳಿ, ಎ.ಕೆ.ಬಡಾವಣೆ	69/1	0	18	-	ಲಾ ಸ.ನಂ 70	ಲಾ ಸ.ನಂ 69/2	ಲಾ ಸ.ನಂ 15	ಲಾ ದಾರಿ
		69/2	0	17	-	ಲಾ ಸ.ನಂ 69/1	ಲಾ ಸ.ನಂ 69/3	ಲಾ ಸ.ನಂ 15	ಲಾ ದಾರಿ
		69/3	0	18	-	ಲಾ ಸ.ನಂ 69/2	ಲಾ ಸ.ನಂ 69/4	ಲಾ ಸ.ನಂ 15	ಲಾ ದಾರಿ
ಜನವಸತಿ ಪ್ರದೇಶದಒಟ್ಟು ವಿಸ್ತೀರ್ಣ			1	13	-	-			

(3) ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿದ ಸರ್ವೆ ನಂಬರುಗಳೊಂದಿಗೆ ಮೇಲಿನ (4) ನೇ ಕಾಲಂನಲ್ಲಿ ಸೂಚಿಸಿರುವ ಭೂಮಿಯ ವ್ಯಾಪ್ತಿಯಲ್ಲಿ ಇರುವ ದಾಖಲಾಗದ ಜನವಸತಿಯನ್ನು **ದಾವಣಗೆರೆ** ಜಿಲ್ಲೆಯ **ಹೊನ್ನಾಳಿ** ತಾಲ್ಲೂಕಿನ **ಹರಳಹಳ್ಳಿ,** ಗ್ರಾಮದ **ಹರಳಹಳ್ಳಿ, ಎ.ಕೆ.ಬಡಾವಣೆ** ಸಣ್ಣ ವಸತಿ ಸಮೂಹ ಭಾಗದ ಜನವಸತಿ ಪ್ರದೇಶ (ಗ್ರಾಮಠಾಣಾ) ಎಂಬುದಾಗಿ ಪರಿವರ್ತಿಸಲಾಗಿದೆ ಎಂದು ಈ ಮೂಲಕ ಘೋಷಿಸಿದೆ.

ಮೇಲೆ ನಿರ್ದಿಷ್ಟಪಡಿಸಿದ ಪ್ರಸ್ತಾವನೆಯು, ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 12) 5ನೇ ಪ್ರಕರಣದಡಿ ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಬೇಕಾದ ಇದರ ಅಂತಿಮ ಅಧಿಸೂಚನೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಾರುತಿ ಎಂ.ಪಿ)
ನಿರ್ದೇಶಕರು,
ಕಂದಾಯ ಗ್ರಾಮಗಳ ರಚನಾ ಕೋಶ
ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ
ಕಂದಾಯ ಇಲಾಖೆ.

PR-191

ಕರ್ನಾಟಕ ಸರ್ಕಾರ

ಸಂಖ್ಯೆ:ಟಿಡಿ 91 ಟಿಡಿಒ 2019

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀಧಿ
ಬೆಂಗಳೂರು, ದಿನಾಂಕ:23.02.2026

ಅಧಿಸೂಚನೆ

ಸರ್ಕಾರದ ಅಧಿಸೂಚನೆ ಸಂಖ್ಯೆ:ಟಿಡಿ 91 ಟಿಡಿಒ 2019, ದಿನಾಂಕ:19.12.2023ರಲ್ಲಿ ಜಾರಿಗೊಳಿಸಲಾಗಿರುವ The Karnataka State Road Safety Authority Rules, 2023ನ್ನು ಯಥಾವತ್ತಾಗಿ ಕನ್ನಡಕ್ಕೆ ಭಾಷಾಂತರಿಸಿ ಇದರೊಂದಿಗೆ ಪ್ರಕಟಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪುಷ್ಪ ವಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಕರ್ನಾಟಕ ಸರ್ಕಾರ

ಸಂಖ್ಯೆ:ಟಿಡಿ 91 ಟಿಡಿಒ 2019

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:19.12.2023

ಅಧಿಸೂಚನೆ

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 45) ರ 39ನೇ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ನಿಯಮಗಳು, 2023ರ ಕರಡನ್ನು ಅಧಿಸೂಚನೆ ಸಂಖ್ಯೆ: ಟಿಡಿ 91 ಟಿಡಿಒ 2019, ದಿನಾಂಕ: 14.09.2023 ರಲ್ಲಿ ಕರ್ನಾಟಕ ರಾಜ್ಯಪತ್ರ ವಿಶೇಷ ಸಂಚಿಕೆಯ ಸಂಖ್ಯೆ: 427ರ ಪ್ರಕಾರ ದಿನಾಂಕ: 14.09.2023 ರ ಭಾಗ IV ಎ ನಲ್ಲಿ, ಪ್ರಕಟಿಸಲಾಗಿದ್ದು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಇದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಂದ ಆಕ್ಷೇಪಣೆಗಳು ಅಥವಾ ಸಲಹೆಗಳನ್ನು ಆಹ್ವಾನಿಸಿರುವುದರಿಂದ,

ಸದರಿ ರಾಜ್ಯಪತ್ರವನ್ನು ದಿನಾಂಕ: 14.09.2023 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ.

ಮತ್ತು ಈ ಬಗ್ಗೆ ಸ್ವೀಕರಿಸಿದ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಶೀಲಿಸಿರುವುದರಿಂದ, ಆದ್ದರಿಂದ, ಈಗ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 45)ರ 39ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮುಂದಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ: (1) ಈ ನಿಯಮಗಳನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ನಿಯಮಗಳು, 2023 ಎಂದು ಕರೆಯತಕ್ಕದ್ದು,

(2) ಈ ನಿಯಮಗಳು, ಅಧಿಕೃತ ರಾಜ್ಯಪತ್ರದಲ್ಲಿ ಅವುಗಳ ಅಂತಿಮ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು: (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) **"ಅಧಿನಿಯಮ"** ಎಂದರೆ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಧಿನಿಯಮ, 2017 (2017ರ ಅಧಿನಿಯಮ, 45);

(ಬಿ) **"ಉಪಕರ"** ಎಂದರೆ, 13ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಲಾದ ಮತ್ತು ಸಂಗ್ರಹಿಸಲಾದ ಉಪಕರ;

(ಸಿ) **"ಸಂಚಿತ ನಿಧಿ"** ಎಂದರೆ, ಭಾರತ ಸಂವಿಧಾನದ 266ನೇ ಅನುಚ್ಛೇದದ ಮೇರೆಗೆ ನಿಯಮಿಸಲಾದಂಥ ನಿಧಿ;

(ಡಿ) **"ಹಣಕಾಸು ವಿವರ ಪಟ್ಟಿಗಳು",** ಎಂದರೆ, ಈ ನಿಯಮಗಳಿಗೆ ಅನುಸಾರವಾಗಿ ನಿಧಿಯಾಧಾರಿತ ಎರಡು ಬಾರಿ ನಮೂದಾದ ಪ್ರಾಪ್ತ ಲೆಕ್ಕ ಪದ್ಧತಿಯ ಮೇರೆಗೆ ಸಿದ್ಧಪಡಿಸಿದ ವಾರ್ಷಿಕ ಲೆಕ್ಕದ ವರದಿಗಳು;

(ಇ) **"ನಮೂನೆ"** ಎಂದರೆ ಈ ನಿಯಮಗಳಿಗೆ ಸೇರಿಸಲಾದ ನಮೂನೆ;

(ಎಫ್) **"ಆದಾಯ ಮತ್ತು ಖರ್ಚುವೆಚ್ಚದ ಲೆಕ್ಕ"** ಎಂದರೆ ಲೆಕ್ಕದ ಅವಧಿಯಲ್ಲಿ ಖರ್ಚು ವೆಚ್ಚಗಳಿಗಿಂತ ಹೆಚ್ಚಾಗಿ ಆದಾಯದ ಹೆಚ್ಚಳವನ್ನು ತೋರಿಸುವ (ಅಥವಾ ವಿಪರ್ಯಯವಾಗಿ) ಖಾತಾ ಬಾಕಿಗಳಿಂದ ಪಡೆದ ಆದಾಯ ಮತ್ತು ವೆಚ್ಚದ ಎಲ್ಲ ಬಾಬ್ತುಗಳನ್ನು ತೋರಿಸುವ ಹಣಕಾಸು ವಿವರಣಪಟ್ಟಿ;

(ಜಿ) **"ಹೊಣೆಗಾರಿಕೆ"** ಎಂದರೆ ಪ್ರಾಧಿಕಾರವು ಸಂದಾಯ ಮಾಡಲು ಅಥವಾ ಮರು ಸಂದಾಯ ಮಾಡಲು ಜವಾಬ್ದಾರಿಯಾಗಿರುವ ಬಾಬ್ತುಗಳು ಮತ್ತು ಸರ್ಕಾರದ ಪರವಾಗಿ ಸಂಗ್ರಹಿಸಲಾದ ಸಾಲಗಳು, ಠೇವಣಿಗಳು ಮತ್ತು ಉಪಕರಗಳನ್ನು ಒಳಗೊಳ್ಳುತ್ತದೆ ಮತ್ತು ಪ್ರಾಧಿಕಾರವು ಸಂದಾಯ ಮಾಡಬೇಕಾದ ಬಾಕಿಯಿರುವ ಸಂದಾಯ ಮತ್ತು ಎಲ್ಲ ಬಾಕಿಗಳನ್ನು ಲೆಕ್ಕಪತ್ರಗಳಲ್ಲಿ ಇಡತಕ್ಕದ್ದು;

(ಹೆಚ್) **"ಸಂದಾಯಗಳು"** ಎಂದರೆ ವರ್ಷದ ಅವಧಿಯಲ್ಲಿ ವಾಸ್ತವಿಕವಾಗಿ ಸಂದಾಯ ಮಾಡಲಾದ ಮತ್ತು ಲೆಕ್ಕ ಮಾಡಿದ ಮೊಬಲಗು;

(ಐ) **"ಜಮೆಗಳು"** ಎಂದರೆ, ವರ್ಷದ ಅವಧಿಯಲ್ಲಿ ವಾಸ್ತವವಾಗಿ ಸ್ವೀಕರಿಸಲಾದ ಮತ್ತು ಲೆಕ್ಕ ಮಾಡಲಾದ ಮೊಬಲಗುಗಳು;

(ಜೆ) **"ಜಮೆಗಳು ಮತ್ತು ಸಂದಾಯಗಳ ಲೆಕ್ಕ"** ಎಂದರೆ, ಲೆಕ್ಕದ ಅವಧಿಯಲ್ಲಿ ನಗದು ಮತ್ತು ಬ್ಯಾಂಕ್ ಶಿಲ್ಕುಗಳು, ನಗದು ಒಳಹರಿವು (ವಾಸ್ತವಿಕ ಜಮೆಗಳು) ಮತ್ತು ನಗದು ಹೊರಹರಿವಿನ (ವಾಸ್ತವಿಕ ಸಂದಾಯಗಳು) ಸಂಕ್ಷಿಪ್ತ ರೂಪದಲ್ಲಿರುವ ಹಣಕಾಸು ವಿವರಣ ಪಟ್ಟಿ;

(ಕೆ) **"ಮೀಸಲು ನಿಧಿ"** ಎಂದರೆ, ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 132 ವೆಚ್ಚ-11/2020, ದಿನಾಂಕ: 27ನೇ ಅಕ್ಟೋಬರ್ 2020 ರಲ್ಲಿ ನಿಯಮಿಸಲಾದಂಥ ನಿಧಿ;

(ಎಲ್) **"ರಾಜಸ್ವ ವೆಚ್ಚ (ಅಥವಾ ಖರ್ಚು)"** ಎಂದರೆ, ಸೇವೆ ಅಥವಾ ಪ್ರಯೋಜನ ಲಭ್ಯವಾದ ಅಥವಾ ಪಡೆಯಲಾದ ವಿನಿಮಯದಲ್ಲಿ ವಹಿಸಲಾದ ವೆಚ್ಚಗಳು ಅಥವಾ ಸೃಜಿಸಲಾದ ಹೊಣೆಗಳು. ಆದರೆ ಸ್ಥಿರಾಸ್ತಿಗಳು ಅಥವಾ ಅದಕ್ಕೆ ಸಂಬಂಧಿಸಿದ ಸೇರ್ಪಡೆಗಳ ನಿರ್ಮಾಣ ಅಥವಾ ಸ್ವಾಧೀನದ ಪರಿಣಾಮವಾದ ಅಥವಾ ಸ್ಥಿರಾಸ್ತಿಗಳ ಬಾಳಿಕೆ ವಿಸ್ತರಣೆಯ ಪರಿಣಾಮವಾದ ವೆಚ್ಚವನ್ನು ಒಳಗೊಳ್ಳುವುದಿಲ್ಲ. ರಾಜಸ್ವ ವೆಚ್ಚವು ಆಸ್ತಿಗಳ ಹೊರಹರಿವು ಅಥವಾ ನಷ್ಟಗಳ ರೂಪದಲ್ಲಿ ಲೆಕ್ಕದ ಅವಧಿಯಲ್ಲಿ ಆರ್ಥಿಕ ಪ್ರಯೋಜನದಲ್ಲಿನ ಇಳಿತಾಯವನ್ನು ಸಹ ಒಳಗೊಳ್ಳುತ್ತದೆ.

(ಎಂ) **"ರಾಜಸ್ವ ಸಂದಾಯ"** ಎಂದರೆ, ರಾಜಸ್ವ ವೆಚ್ಚದ ನಿರ್ವಹಣೆಯಲ್ಲಿನ ಸಂದಾಯ ಮತ್ತು ಆದ್ದರಿಂದ, ಬಂಡವಾಳ ಸಂದಾಯ ಅಥವಾ ಅಸಾಧಾರಣ ಸಂದಾಯವನ್ನು ಹೊರತುಪಡಿಸಿದ ಸಂದಾಯ; (ಎನ್) **"ರಾಜಸ್ವ ಜಮೆ"** ಎಂದರೆ, ಬಂಡವಾಳ ಜಮೆ ಅಥವಾ ಅಸಾಧಾರಣ ಜಮೆಯನ್ನು ಹೊರತು ಪಡಿಸಿದ ಜಮೆ;

(ಒ) **"ಪ್ರಕರಣ**" ಎಂದರೆ ಅಧಿನಿಯಮದ ಪ್ರಕರಣ; ಮತ್ತು

(ಪಿ) **"ತೆರಿಗೆ"** ಎಂದರೆ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 35) ಉಪಬಂಧಗಳ ಮೇರೆಗೆ ವಿಧಿಸಲಾದ ಮೋಟಾರು ವಾಹನಗಳ ತೆರಿಗೆ.

(2) ಇದರಲ್ಲಿ ಬಳಸಿದ ಮತ್ತು ಪರಿಭಾಷಿಸಿರದ, ಆದರೆ ಅಧಿನಿಯಮದಲ್ಲಿ ಪರಿಭಾಷಿಸಿದ ಎಲ್ಲ ಇತರೆ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಿರುವಂತಹದ್ದೇ ಅರ್ಥವನ್ನು ಹೊಂದಿರತಕ್ಕದ್ದು.

3. ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು.- ಪ್ರಾಧಿಕಾರವು, ಅಧಿನಿಯಮದ 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಪ್ರಕಾರ್ಯಗಳ ಜೊತೆಗೆ ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(i) ಪ್ರಾಧಿಕಾರ ಮತ್ತು ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳ ಕಾರ್ಯಕಲಾಪಗಳಿಗೆ ವಿನಿಯಮಗಳನ್ನು ರೂಪಿಸುವುದು;

(ii) ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಗಳ ವರದಿಯಲ್ಲಿ ಎತ್ತಲಾದ ವಿಷಯಗಳನ್ನು ಪರಿಶೀಲಿಸುವುದು ಮತ್ತು ವಿನಿಯಮಿಸುವುದು ಮತ್ತು ಈ ಬಗ್ಗೆ

ಮಾರ್ಗದರ್ಶನ ಮತ್ತು ನಿರ್ದೇಶನಗಳನ್ನು ನೀಡುವುದು;

(iii) ರಸ್ತೆ ಸುರಕ್ಷತೆಗೆ ಸಂಬಂಧಪಟ್ಟ ಚಟುವಟಿಕೆಗಳಲ್ಲಿ ಸುಧಾರಣೆ ತರಲು ಮತ್ತು ಅದರ ನಿರ್ವಹಣೆಗಾಗಿ ಕಾಲಕಾಲಕ್ಕೆ ಪ್ರಾಧಿಕಾರವು ನಿಯಮಿಸಲಾದಂತೆ ಹಿತಾಸಕ್ತಿದಾರ ಏಜೆನ್ಸಿಗಳು ಅಥವಾ ನಿಗಮಿತ ನಿಕಾಯಗಳು ಅಥವಾ ಸರ್ಕಾರೇತರ ಸಂಸ್ಥೆಗಳು ಅಥವಾ ಲಾಭರಹಿತ ಸಂಸ್ಥೆಗಳು ಅಥವಾ ಯಾವುದೇ ಇತರೆ ಏಜೆನ್ಸಿಗಳನ್ನು ತೊಡಗಿಸಿಕೊಳ್ಳುವುದು;

(iv) ರಸ್ತೆ ಸುರಕ್ಷತೆ ಮತ್ತು ಸಂಚಾರ ದಟ್ಟಣೆ ನಿರ್ವಹಣೆಯಲ್ಲಿ ಸಮರ್ಪಕ ಸಮರಿಟ್ಯನ್ಸ್ (Samaritans) (ನಿಜ ಪರೋಪಕಾರಿಗಳು), ಉತ್ತಮ ಪದ್ಧತಿಗಳನ್ನು ಉತ್ತೇಜಿಸುವುದು ಮತ್ತು ಅಂತರಾಷ್ಟ್ರೀಯ ಸಂಸ್ಥೆಗಳನ್ನು ಸಮನ್ವಯಗೊಳಿಸುವುದು;

(v) ರಸ್ತೆ ಸುರಕ್ಷತಾ ಕ್ರಮಗಳಲ್ಲಿ ಅದರ ಕಾರ್ಯಕ್ಷಮತೆಯನ್ನು ಆಧರಿಸಿ ಜಿಲ್ಲಾ ಸಮಿತಿಗಳನ್ನು ಪ್ರೋತ್ಸಾಹಿಸುವುದು;

(vi) ಪ್ರಾಜೆಕ್ಟ್ ಪ್ರಸ್ತಾವಗಳು, ಉದ್ದೇಶಿತ ಗುರಿಗಳ ಮೌಲ್ಯಮಾಪನವಾದ ಮೇಲೆ ಹಿತಾಸಕ್ತಿದಾರ ಇಲಾಖೆಗಳಿಗೆ ಹಣಕಾಸು ಒದಗಿಸುವುದು ಮತ್ತು ನಿಯತ ಅಂತರಗಳಲ್ಲಿ ಪ್ರಗತಿಯಲ್ಲಿರುವ ಪ್ರಾಜೆಕ್ಟ್‌ಗಳನ್ನು ಪರಿಶೋಧಿಸುವುದು;

(vii) ಹಿತಾಸಕ್ತಿದಾರ ಇಲಾಖೆಗಳ ಮುಖಾಂತರ ಕಾರ್ಯಗತಗೊಳಿಸಲಾದ ಕಾಮಗಾರಿಗಳು ಅಥವಾ ಪ್ರಾಜೆಕ್ಟ್‌ಗಳ ಗುಣಮಟ್ಟವನ್ನು ಮೇಲ್ವಿಚಾರಣೆ ಮಾಡು ಮತ್ತು ಪ್ರಾಜೆಕ್ಟ್ ಪೂರ್ಣಗೊಂಡ ದಿನಾಂಕದಿಂದ ಅರವತ್ತು ದಿನಗಳೊಳಗೆ ನಿಧಿ ಬಳಕೆ ಪ್ರಮಾಣ ಪತ್ರದೊಂದಿಗೆ ಸಾಧಿಸಲಾದ ಧ್ಯೇಯೋದ್ದೇಶಗಳು, ಕೈಗೊಳ್ಳಲಾದ ಕಾಮಗಾರಿಗಳು ಮತ್ತು ಅದರ ಅಳೆಯಬಹುದಾದ ಪರಿಣಾಮವನ್ನು ಒಳಗೊಂಡಿರುವ ಸವಿವರವಾದ ವರದಿಯನ್ನು ಸಂಗ್ರಹಿಸುವುದು; ದೀರ್ಘಾವಧಿಯ ಪ್ರಾಜೆಕ್ಟ್‌ಗಳು ಅಥವಾ ಕ್ರಮಗಳ ಸಂದರ್ಭದಲ್ಲಿ, ನಿಯತ ಇಂದೀಕರಣವನ್ನು ಕಾಲಕಾಲಕ್ಕೆ ಮತ್ತು ಅಧಿನಿಯಮ ಮತ್ತು ಇದರಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಮೇರೆಗೆ ಪ್ರಾಧಿಕಾರವು ನಿರ್ದಿಷ್ಟಪಡಿಸಲಾದಂಥ ನಮೂನೆಯಲ್ಲಿ ಮತ್ತು ಮಾರ್ಗಸೂಚಿಗಳಲ್ಲಿ ಆಯಾಯ ಹಿತಾಸಕ್ತಿದಾರ ಇಲಾಖೆಯು ಒದಗಿಸತಕ್ಕದ್ದು;

(viii) ರಸ್ತೆ ಸುರಕ್ಷತೆಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಜಾರಿಗೊಳಿಸುವುದನ್ನು ಸುಧಾರಿಸುವುದು; ಮತ್ತು

(ix) ಅಧಿನಿಯಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಯಾವುದೇ ಇತರೆ ಮಾರ್ಗಸೂಚಿಗಳನ್ನು ರೂಪಿಸುವುದು.

4. ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು.- ಮೋಟಾರು ವಾಹನಗಳ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ, 59) ರ 215ನೇ ಪ್ರಕರಣದ (3) ಮತ್ತು (4)ನೇ ಉಪ-ಪ್ರಕರಣದ ಮೇರೆಗೆ ಉಪಬಂಧಗಳನ್ನು ಪಾಲಿಸುವ ಸಲುವಾಗಿ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು, ಜಿಲ್ಲಾ ಮಟ್ಟದಲ್ಲಿ ಕಾಲಕಾಲಕ್ಕೆ ನಿರ್ದಿಷ್ಟಪಡಿಸಲಾದಂತೆ ಈ ನಿಯಮಗಳ ಅನುಷ್ಠಾನಕ್ಕೆ ಸಂಬಂಧಪಟ್ಟ ಎಲ್ಲ ಪ್ರಕಾರ್ಯಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು. ಇದು ಮುಂದಿನ ಪ್ರಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು, ಎಂದರೆ:-

(ಎ) ಜಿಲ್ಲೆಯಲ್ಲಾಗುವ ರಸ್ತೆ ಅಪಘಾತಗಳನ್ನು ನಿಯತಕಾಲಿಕವಾಗಿ ಪರಿಶೀಲಿಸುವುದು.

(ಬಿ) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ನಿಯಮಗಳ ಅನುಷ್ಠಾನವನ್ನು ಮತ್ತು ಅದರ ಅಡಿಯಲ್ಲಿ ರೂಪಿಸಲಾದ ಗುರಿಗಳನ್ನು ಮೇಲ್ವಿಚಾರಣೆ ಮಾಡುವುದು.

(ಸಿ) ರಸ್ತೆ ಸುರಕ್ಷತಾ ವಿಷಯಗಳ ಸಂಬಂಧದಲ್ಲಿ ಕಾಲಕಾಲಕ್ಕೆ ಹೊರಡಿಸಬಹುದಾದ ಭಾರತ ಸರ್ಕಾರ ಎಸ್‌ಸಿಸಿಒಆರ್‌ಎಸ್, ಮತ್ತು ರಾಜ್ಯ ಸರ್ಕಾರದ ನಿರ್ದೇಶನಗಳನ್ನು ಅನುಷ್ಠಾನಗೊಳಿಸುವುದು.

(ಡಿ) ಜಿಲ್ಲೆಯಲ್ಲಿನ ಪ್ರಾಧಿಕಾರದ ತೀರ್ಮಾನಗಳನ್ನು ಅನುಷ್ಠಾನಗೊಳಿಸುವುದು.

(ಇ) ಜಿಲ್ಲೆಯಲ್ಲಿ ಸಂಭವಿಸುವ ರಸ್ತೆ ಅಪಘಾತಗಳ ವಿವರಗಳ ಬಗ್ಗೆ ಪತ್ತೆ ಹಚ್ಚುವುದು ಮತ್ತು ಪ್ರಾಧಿಕಾರಕ್ಕೆ ನಿಯತವಾಗಿ ಇಂದೀಕರಿಸುವುದು, ಅವು ಕೆಳಕಂಡವುಗಳನ್ನು ಒಳಗೊಳ್ಳುತ್ತವೆ:

(i) ವಾಹನದ ವಿವರಗಳು

(ii) ಅಪಘಾತದ (crashes)ಕಾರಣ

(iii) ಸ್ಥಳ ತನಿಖೆ, ಸಾಕ್ಷ್ಯ ಯಾವುದಾದರೂ ಇದ್ದರೆ ಅದರ ವಿವರಗಳು

(iv) ಅಪರಾಧಿಗಳ ವಿವರಗಳು (ಯಾವುವಾದರೂ ಇದ್ದರೆ)

(v) ಬಾಧಿತ/ರ ವಿವರಗಳು ಮತ್ತು ಬಾಧಿತನ ಇತ್ತೀಚಿನ ಸ್ಥಿತಿ

(vi) ಉಂಟಾದ ಗಾಯದ ವಿಧಗಳು

(vii) ಪ್ರಥಮ ಮಾಹಿತಿ ವರದಿಯನ್ನೇನಾದರು (ಎಫ್ಐಆರ್) ದಾಖಲಿಸಿದ್ದರೆ ಅದು.

(ಎಫ್) (i) ಜಿಲ್ಲಾ ಜಾಲತಾಣ ಪೋರ್ಟಲ್ (ವ್ಯಾಪಕವಾಗಿ ಪ್ರಚಾರಲ್ಲಿರುವ)

(ii) MoRTH ಪೋರ್ಟಲ್ :(http://morthroadsafety.nic.in/edisha/index.aspx) ನಲ್ಲಿ ಸಾರ್ವಜನಿಕರಿಗೆ ಸ್ಥಳೀಯವಾಗಿ ಲಭ್ಯವಾಗುವಂತೆ ಮಾಸಿಕ ಆಧಾರದಲ್ಲಿ ರಸ್ತೆ ಅಪಘಾತ ದತ್ತಾಂಶವನ್ನು ಪ್ರಕಟಿಸುವುದು.

(ಜಿ) ಜಿಲ್ಲಾ ರಸ್ತೆ ಸುರಕ್ಷತಾ ಯೋಜನೆಯನ್ನು ಅಭಿವೃದ್ಧಿಪಡಿಸುವುದು.

(ಹೆಚ್) ಜಿಲ್ಲೆಯಲ್ಲಿನ ಎಲ್ಲ ಸಾಮೂಹಿಕ ಮಾರಣಾಂತಕ ಅಪಘಾತಗಳಿಗಾಗಿ (crashes) ಮೋಟಾರು ವಾಹನಗಳ ಅಧಿನಿಯಮ, 1988ರ 135ನೇ ಪ್ರಕರಣದ ಮೇರೆಗೆ ವಿಧಿವಿಜ್ಞಾನ ಅಪಘಾತ(crashes) ಪರಿಶೀಲನೆಯನ್ನು ಖಚಿತಪಡಿಸುವುದು.

(ಐ) ಪ್ರತಿಕ್ರಿಯೆ ಸಮಯವನ್ನು ಮತ್ತು ಆಸ್ಪತ್ರೆಗಳಿಗೆ ಸಕಾಲಕ್ಕೆ ತಲುಪಿಸುವ ಸಮಯವನ್ನು ಸುಧಾರಿಸುವಲ್ಲಿ ಸಹಾಯ ಮಾಡಲು ಆಂಬ್ಯುಲೆನ್ಸ್ಗಳ ವ್ಯವಸ್ಥಿತ ಏರ್ಪಾಟನ್ನು ಖಚಿತಪಡಿಸುವುದು.

(ಜೆ) ಜಿಲ್ಲೆಯಲ್ಲಿನ ಹಿಂದಿನ ಪ್ರಕರಣ ಹೊರೆಯ ಪ್ರಕಾರ ಸಾಕಷ್ಟು ವಿಭಿನ್ನ ಬಗೆಯ ತುರ್ತು ವಾಹನ (ಆಂಬ್ಯುಲೆನ್ಸ್) ವಿಧಗಳ ಲಭ್ಯತೆಯನ್ನು ಖಚಿತಪಡಿಸಿಕೊಳ್ಳುವುದು.

(ಕೆ) ಜಿಲ್ಲೆಯಲ್ಲಿನ ಮಾರಣಾಂತಕ ಅಪಘಾತಗಳಿಗೆ ತುರ್ತು ವೈದ್ಯಕೀಯ ಯೋಜನೆಯನ್ನು ಸಿದ್ಧಪಡಿಸುವುದು.

(ಎಲ್) ಪೂರ್ವ ಪ್ರಕಟಣಾ ಅಧಿಸೂಚನೆ ವ್ಯವಸ್ಥೆಯನ್ನು ರೂಪಿಸುವ ಮುಖಾಂತರ ಆಸ್ಪತ್ರೆಗಳು ಮತ್ತು ಆಂಬ್ಯುಲೆನ್ಸ್ಗಳನ್ನು ನಡುವಿನ ಸಂಪರ್ಕವನ್ನು ಖಚಿತಪಡಿಸುವುದು. ತುರ್ತಿನ ಸಂದರ್ಭದಲ್ಲಿ ಹಾಸಿಗೆಗಳ ಲಭ್ಯತೆವಿರುವುದನ್ನು ಕಂಡುಕೊಳ್ಳಲು ಆಸ್ಪತ್ರೆಗಳ ನಡುವಿನ ಸಂಪರ್ಕವನ್ನು ಖಚಿತಪಡಿಸುವುದು.

(ಎಂ) ರಸ್ತೆ ಸುರಕ್ಷತಾ ನಿಧಿಗಳನ್ನು ಇಡುವುದಕ್ಕಾಗಿ, ಅಗತ್ಯತೆ/ಗಳಿಗೆ ಮತ್ತು ವಿತರಣೆಗೆ ನೋಡಲ್ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದು ಮತ್ತು ಅಗತ್ಯವಿದ್ದಾಗ ಪ್ರಾಧಿಕಾರದೊಂದಿಗೆ ಪರಸ್ಪರ ಸಂವಹನ ನಡೆಸುವುದು.

(ಎನ್) ಪ್ರಾಧಿಕಾರಕ್ಕೆ ನಿಯತ ಮಾಹಿತಿಯನ್ನು ಒದಗಿಸುವುದು ಮತ್ತು ಪ್ರಮುಖ ಅಪಘಾತ ಸಂಭವಿಸಬಹುದಾದ ಪ್ರದೇಶಗಳು/ ಕಪ್ಪು ಚುಕ್ಕೆ ಹೊಂದಿರುವ ಅಪಘಾತ ಸ್ಥಳಗಳು, ಮೊದಲಾದವುಗಳನ್ನು ಗುರುತಿಸುವುದಕ್ಕೆ ಸಂಬಂಧಿಸಿದಂತೆ ಅದರಲ್ಲೂ ವಿಶೇಷವಾಗಿ ರಸ್ತೆ ಸುರಕ್ಷತಾ ಕ್ರಮಗಳನ್ನು ಮತ್ತು 4ಇ(4E) ಗಳು ಎಂದರೆ ಇಂಜಿನಿಯರಿಂಗ್, ಶಿಕ್ಷಣ, ಜಾರಿ ಮತ್ತು ತುರ್ತಿನ ಪ್ರಾಮುಖ್ಯತೆಗೆ ಸಂಬಂಧಿಸಿದಂತೆ ಭಾಗಗಳಲ್ಲಿ ಸಹ ಶಿಫಾರಸ್ಸು ಮಾಡುವುದು.

(ಒ) ರಸ್ತೆ ಅಪಘಾತಕ್ಕೆ ಒಳಗಾದವರಿಗೆ ನೆರವಾಗಲು ಉತ್ತಮ ಸಮರಟಿನ್ಗಳನ್ನು (Samaritens) ಉತ್ತೇಜಿಸುವುದು.

5. ಅಧಿನಿಯಮದ 13ನೇ ಪ್ರಕರಣದ (3)ನೇ ಉಪ-ಪ್ರಕರಣ, 12ನೇ ಪ್ರಕರಣದ (1)ನೇ ಉಪ-ಪ್ರಕರಣದ (ಇ) ಖಂಡ, 12ನೇ ಪ್ರಕರಣದ (3) ಮತ್ತು (4) ನೇ ಉಪ-ಪ್ರಕರಣದ, 18, 19, 28 ಮತ್ತು 29ನೇ ಪ್ರಕರಣದ ಮೇರೆಗೆ ನಿಧಿಗೆ ಉಪಕರ, ಫೀಜು ಮತ್ತು ದಂಡಗಳನ್ನು ಸಂಗ್ರಹಿಸುವ ಮತ್ತು ಇರಸಾಲು ಮಾಡುವ ರೀತಿ.-

(i) ಅಧಿನಿಯಮದ 13ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕಾಲಕಾಲಕ್ಕೆ ಮೋಟಾರು ವಾಹನಗಳ ವಿವಿಧ ವರ್ಗಕ್ಕೆ ರಾಜ್ಯ ಸರ್ಕಾರವು ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ದರದಲ್ಲಿ ಮೋಟಾರು ವಾಹನಗಳ ತೆರಿಗೆ ಜೊತೆಗೆ ಪ್ರತಿಯೊಂದು ಮೋಟಾರು ವಾಹನದ ನೋಂದಣಿಯ ಸಮಯದಲ್ಲಿ ರಾಜ್ಯದಲ್ಲಿ ನೋಂದಣಿ ಪ್ರಾಧಿಕಾರವು ಸಂಗ್ರಹಿಸಿದ ಒಂದು ಬಾರಿಯ ಉಪಕರ;

(ii) ಅಧಿನಿಯಮದ 12(ಇ) ಪ್ರಕರಣದ ಮೇರೆಗೆ ಚಾಲನಾ ಪರವಾನಗಿ ಮತ್ತು ನೋಂದಣಿ ಪ್ರಮಾಣಪತ್ರ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡುವ ಮೂಲಕ ಸಂಗ್ರಹಿಸಲಾದ ಶುಲ್ಕದ ಮೊತ್ತ;

(iii) 12(3) ನೇ ಪ್ರಕರಣದ ಮೇರೆಗೆ ಮೋಟಾರು ವಾಹನಗಳ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 59) ರ 200ನೇ ಪ್ರಕರಣದ ಮೇರೆಗೆ ಹಿಂದಿನ ವರ್ಷದಲ್ಲಿ ಸಂಗ್ರಹಿಸಲಾದ ರಾಜಿ ಶುಲ್ಕದ ಶೇ. 50 ಕ್ಕೆ ಸಮನಾದ ಜುಲ್ಮಾನೆ ಮೊತ್ತ;

(iv) ಪ್ರಾಧಿಕಾರವು 18 ಮತ್ತು 19ನೇ ಪ್ರಕರಣದ ಮೇರೆಗೆ ವಸೂಲಿ ಮಾಡಿದ ವೆಚ್ಚಗಳು;

(v) ಅಧಿನಿಯಮದ 28 ಮತ್ತು 29ನೇ ಪ್ರಕರಣಗಳ ಮೇರೆಗೆ ಸಕ್ಷಮ ನ್ಯಾಯಾಲಯಗಳು ಸಂಗ್ರಹಿಸಿದ ರಾಜಿ ಶುಲ್ಕ; ಮತ್ತು

(vi) 12(4) ನೇ ಪ್ರಕರಣದ ಮೇರೆಗೆ ಸರ್ಕಾರವು ಅಧಿಸೂಚಿಸಬಹುದಾದಂಥ ಇತರೆ ಹಣಕಾಸು ಮೂಲಗಳನ್ನು 7ನೇ ನಿಯಮದ ಪ್ರಕಾರ ಅಥವಾ ಕರ್ನಾಟಕ ಆರ್ಥಿಕ ಸಂಹಿತೆಯ ಪ್ರಕಾರ ಈ ಬಗ್ಗೆ ನಿರ್ವಹಿಸಲಾದ ರಿಜಿಸ್ಟರಿನಲ್ಲಿ ನಮೂದು ಮಾಡುವ ಮೂಲಕ ರಾಜ್ಯ ಸರ್ಕಾರವು ನಿರ್ದೇಶಿಸಲಾದಂತೆ ನಿಧಿ ಖಾತೆಗೆ ಅಥವಾ ಸಂಚಿತ ನಿಧಿಗೆ ಇರಸಾಲು ಮಾಡತಕ್ಕದ್ದು.

(2) ಪ್ರತಿಯೊಂದು ದಿನದಂದು ಸಂಗ್ರಹಿಸಲಾದ ಉಪಕರ, ಶುಲ್ಕ ಮತ್ತು ದಂಡಗಳ ಮೊತ್ತವನ್ನು ಲೆಕ್ಕಕ್ಕೆ ಸೇರಿಸಲಾಗುವುದು ಮತ್ತು ಸ್ವೀಕರಿಸಲಾದ ಎಲ್ಲ ಹಣವನ್ನು ಕೆಎಫ್‌ಸಿಯ 4ನೇ ಅನುಚ್ಛೇದದ ಪ್ರಕಾರ ಅನುಚಿತ ವಿಳಂಬವಿಲ್ಲದೆ ಪೂರ್ಣವಾಗಿ ಸಂಚಿತ ನಿಧಿಗೆ ಇರಸಾಲು ಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ನಿರ್ದೇಶನಗಳ ಅನುಸಾರ ತದನಂತರ ಮೀಸಲು ನಿಧಿಗೆ ಅಥವಾ ನಿಯಮಿಸಲಾದ ಖಾತೆಗೆ ವರ್ಗಾಯಿಸುವುದು.

6. ಶುಲ್ಕಗಳು, ಜಲ್ಮಾನೆಗಳು ಮತ್ತು ದಂಡಗಳ ಸಂಗ್ರಹಣೆ (1) ಮೋಟಾರು ವಾಹನಗಳ ಅಧಿನಿಯಮ, 1988 (1988ರ ಕೇಂದ್ರ ಅಧಿನಿಯಮ 59)ರ ಮೇರೆಗೆ ಶುಲ್ಕಗಳನ್ನು ಸಂಗ್ರಹಿಸಲು ಸಕ್ಷಮ ಪ್ರಾಧಿಕಾರಗಳು ಈ ಮುಂದಿನ ರೀತಿಯಲ್ಲಿ ಹಾಗೆ ಮಾಡಬಹುದು; ಎಂದರೆ:-

(ಎ) ಕೇಂದ್ರ ಮೋಟಾರು ವಾಹನಗಳ ನಿಯಮಗಳು, 1989ರ 32ನೇ ನಿಯಮ ಮತ್ತು 81ನೇ ನಿಯಮದ ಮೇರೆಗೆ ಲೈಸೆನ್ಸ್ ನೀಡಿಕೆ/ ನೋಂದಾಯಿತ ಪ್ರಾಧಿಕಾರವು ಸ್ಮಾರ್ಟ್‌ಕಾರ್ಡ್ ರೂಪದಲ್ಲಿ ಚಾಲನಾ ಪರವಾನಗಿ ಮತ್ತು ವಾಹನ ನೋಂದಣಿ ಪ್ರಮಾಣಪತ್ರವನ್ನು ನೀಡುವಾಗ ಸಂಗ್ರಹಿಸಿದ ಶುಲ್ಕವನ್ನು, ಸರ್ಕಾರವು ಕಾಲಕಾಲಕ್ಕೆ ನಿಯಮಿಸಿದ ದರಗಳಲ್ಲಿ, ಮಾರಾಟಗಾರನ ಸೇವಾ ಶುಲ್ಕವನು

ಕಡಿತ ಮಾಡಿದ ನಂತರ ಸಂಗ್ರಹಿಸಲಾದ ಬಾಕಿ ಮೊತ್ತವನ್ನು ರಾಜಸ್ವ ಜಮೆ ಶೀರ್ಷಿಕೆ 0041-00-800-03 ಕ್ಕೆ ಇರಸಾಲು ಮಾಡತಕ್ಕದ್ದು.

(ಬಿ) 1988ರ ಕೇಂದ್ರ ಅಧಿನಿಯಮ, 59ರ 200ನೇ ಪ್ರಕರಣದ ಮೇರೆಗೆ ಸಾರಿಗೆ ಇಲಾಖೆಯ ಅಧಿಕಾರಿಗಳು ಸಂಚಾರ ದಟ್ಟಣೆ ಅಪರಾಧಗಳಿಗಾಗಿ ಸಂಗ್ರಹಿಸಿದ ಜುಲ್ಮಾನೆಗಳು ಮತ್ತು ದಂಡಗಳನ್ನು ಲೆಕ್ಕ ಶೀರ್ಷಿಕೆ 0041-00-800-0-01ಕ್ಕೆ ಇರಸಾಲು ಮಾಡತಕ್ಕದ್ದು.

(ಸಿ) 1988ರ ಕೇಂದ್ರ ಅಧಿನಿಯಮ 59ರ 200ನೇ ಪ್ರಕರಣದ ಮೇರೆಗೆ ಪೊಲೀಸ್ ಇಲಾಖೆಯ ಅಧಿಕಾರಿಗಳು ಸಂಚಾರ ದಟ್ಟಣೆ ಅಪರಾಧಗಳಿಗಾಗಿ ಸಂಗ್ರಹಿಸಿದ ಜುಲ್ಮಾನೆಗಳು ಮತ್ತು ದಂಡಗಳನ್ನು ಲೆಕ್ಕ ಶೀರ್ಷಿಕೆ 0055-00-103-0-04 ಕ್ಕೆ ಇರಸಾಲು ಮಾಡತಕ್ಕದ್ದು.

(ಡಿ) ಮುಂದುವರೆದು, ಅಧಿನಿಯಮದ ಮೇರೆಗೆ ಸಂಗ್ರಹಿಸಲು ಅಧಿಕೃತವಾದ ಪ್ರಾಧಿಕಾರದ ಮುಂದಿನ ರಾಜಸ್ವಗಳನ್ನು ಆರ್ಥಿಕ ಇಲಾಖೆಯು ಅಧಿಸೂಚಿಸಿದ ಲೆಕ್ಕ ಶೀರ್ಷಿಕೆಗಳಿಗೆ ಇರಸಾಲು ಮಾಡತಕ್ಕದ್ದು, ಎಂದರೆ:-

i. 28 ಮತ್ತು 29ನೇ ಪ್ರಕರಣಗಳ ಮೇರೆಗೆ ಸಕ್ಷಮ ನ್ಯಾಯಾಲಯಗಳು ಸಂಗ್ರಹಿಸಿದ ಜುಲ್ಮಾನೆಗಳು;

ii. ಅಧಿನಿಯಮದ 30ನೇ ಪ್ರಕರಣದ ಮೇರೆಗೆ ಅಪರಾಧಗಳ ರಾಜಿಗಾಗಿ ನಿರ್ದಿಷ್ಟಪಡಿಸಿದ ಅಧಿಕಾರಿಗಳು ಅಥವಾ ಪ್ರಾಧಿಕಾರಗಳು ಸಂಗ್ರಹಿಸಿದ ರಾಜಿ ಶುಲ್ಕ;

iii. ಅಧಿನಿಯಮ 18ನೇ ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ವಸೂಲಿ ಮಾಡಿದ ವೆಚ್ಚಗಳು; ಮತ್ತು

iv. ಅಧಿನಿಯಮದ 19ನೇ ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ವಸೂಲಿ ಮಾಡಿದ ವೆಚ್ಚಗಳು.

(2) ರಾಜ್ಯ ಸರ್ಕಾರವು ಪ್ರಾಧಿಕಾರದ ನಿಧಿಗೆ ಅನುದಾನಗಳೆಂದು ಹಾಗೆ ಇರಸಾಲು ಮಾಡಿದ ಮೊತ್ತಕ್ಕೆ ಸಮನಾದ ಮೊತ್ತವನ್ನು ಬಿಡುಗಡೆ ಮಾಡತಕ್ಕದ್ದು.

7. ನಿಧಿಯನ್ನು ನಿಹಿತಗೊಳಿಸುವುದು ಮತ್ತು ನಿರ್ವಹಣೆ.- (1) ನಿಧಿಯನ್ನು ಪ್ರಾಧಿಕಾರದಲ್ಲಿ ನಿಹಿತಗೊಳಿಸತಕ್ಕದ್ದು ಮತ್ತು ಅದನ್ನು ಪ್ರಾಧಿಕಾರವು ನಿರ್ವಹಿಸತಕ್ಕದ್ದು.

(2) ಪ್ರಾಧಿಕಾರವು ನಿಧಿ ಅಥವಾ ನಿಧಿಗಳನ್ನು ನಿರ್ವಹಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

(3) ನಿಧಿ ಅಥವಾ ನಿಧಿಗಳನ್ನು 9ನೇ ನಿಯಮದಲ್ಲಿ ನಿಯಮಿಸಲಾದ ಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ಬಳಸತಕ್ಕದ್ದು.

(4) ಸಿಬ್ಬಂದಿ ಮತ್ತು ಇತರೆ ನೌಕರರ ಸಂಬಳ ಮತ್ತು ಭತ್ಯೆಗಳೂ ಸೇರಿದಂತೆ ಪ್ರಾಧಿಕಾರದ ಎಲ್ಲ ಆಡಳಿತಾತ್ಮಕ ವೆಚ್ಚಗಳನ್ನು ಪ್ರಾಧಿಕಾರದ ನಿಧಿಯಿಂದ ಭರಿಸತಕ್ಕದ್ದು.

(5) ಪ್ರಾಧಿಕಾರವು 7ನೇ ನಿಯಮದಲ್ಲಿ ಹೇಳಲಾದ ಕಾರ್ಯವಿಧಾನದ ಪ್ರಕಾರ ಮಹಾಲೇಖಪಾಲರು (ಎ ಮತ್ತು ಇ) ವಾರ್ಷಿಕವಾಗಿ ಮಾಡಬೇಕಾದ ಮೀಸಲು ನಿಧಿಗೆ ಮತ್ತು ಲೆಕ್ಕದ ಹೊಂದಾಣಿಕೆಗೆ ಸರ್ಕಾರಿ ಜಮೆಗಳ ವರ್ಗಾವಣೆಯನ್ನು ಸಮನ್ವಯಗೊಳಿಸುವುದಕ್ಕೆ ಜವಾಬ್ದಾರಿಯಾಗಿರತಕ್ಕದ್ದು.

(6) ಪ್ರಾಧಿಕಾರವು ನಿಧಿಯ ವ್ಯವಹಾರಗಳ ಸರಿಯಾದ ಲೆಕ್ಕಪತ್ರಗಳನ್ನು ನಿರ್ವಹಿಸಲು ಮತ್ತು ಮಹಾಲೇಖಪಾಲರು ಅಗತ್ಯಪಡಿಸಬಹುದಾದಂತೆ ಅವುಗಳಿಗೆ ಸಂಬಂಧಪಟ್ಟಂಥ ಎಲ್ಲ ಲೆಕ್ಕಪತ್ರಗಳು ಮತ್ತು ವಿವರಪಟ್ಟಿಕೆಗಳನ್ನು ನಿಖರವಾಗಿ ಸಲ್ಲಿಸಲು ಜವಾಬ್ದಾರಿಯಾಗಿರತಕ್ಕದ್ದು.

(7) ಪ್ರಾಧಿಕಾರವು, ಅಧಿನಿಯಮದ 27ನೇ ಪ್ರಕರಣದ ಮೇರೆಗೆ ಅಗತ್ಯಪಡಿಸಲಾದಂತೆ ಪ್ರತೀ ವರ್ಷ ತಪ್ಪದೇ ಅದರ ಲೆಕ್ಕಪತ್ರಗಳನ್ನು ಪರಿಶೋಧಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು

ಮತ್ತು ಪರಿಶೋಧಿತ ಲೆಕ್ಕಪತ್ರಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಅದನ್ನು ಮಂಡಿಸುವಂತೆ ಮಾಡಲು ರಾಜ್ಯ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(8) ಪ್ರಾಧಿಕಾರವು, ಲೆಕ್ಕಪರಿಶೋಧನಾ ವರದಿಯ ಆಧಾರದ ಮೇಲೆ ಸರ್ಕಾರವು ಆದೇಶಿಸಬಹುದಾದಂಥ ಸುಧಾರಣಾತ್ಮಕ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

8. ನಿಧಿಯ ಬಳಕೆ.- (1) ನಿಧಿಯನ್ನು ಅಧಿನಿಯಮದ 15ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಈ ಮುಂದಿನ ಎಲ್ಲ ಅಥವಾ ಯಾವುದಾದರೂ ಉದ್ದೇಶಗಳಿಗಾಗಿ ಆಯವ್ಯಯ ಪ್ರಕ್ರಿಯೆಯ ಮೂಲಕ ಉಪಯೋಗಿಸತಕ್ಕದ್ದು.

(2) ಪ್ರಾಧಿಕಾರವು ನಿಧಿಯನ್ನು ಬಳಸುವ ಎಲ್ಲ ಉದ್ದೇಶಗಳು ರಾಜ್ಯದಲ್ಲಿನ ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವುದಕ್ಕೆ ಅನುಗುಣವಾಗಿ ವಂತಿಗೆ ಕೊಡಲು ಸಮರ್ಥವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(3) ಪ್ರಾಧಿಕಾರವು ಅದನ್ನು ಸಾಬೀತುಪಡಿಸುವ ಧ್ಯೇಯೋದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅದರ ನಿಧಿಯನ್ನು ವಿನಿಯೋಗಿಸುವುದಕ್ಕೆ ಯೋಜಿಸತಕ್ಕದ್ದು ಮತ್ತು ನಿಧಿಯು ಸರ್ಕಾರದ ಹಣಕಾಸಿನ ಅನಿವಾರ್ಯತೆಗಳಿಗೆ ಅನುಸಾರವಾಗಿ ವ್ಯತ್ಯಸ್ವವಾಗಬಹುದಾದ ಬಜೆಟ್ ಹಂಚಿಕೆಗಳನ್ನೇ ಏಕ ಮಾತ್ರವಾಗಿ ಅವಲಂಬಿತವಾಗತಕ್ಕದ್ದಲ್ಲ ಎಂದು ಖಚಿತಪಡಿಸಿಕೊಳ್ಳತಕ್ಕದ್ದು. ನಿಧಿಯ ವಿನಿಯೋಗವು ಧ್ಯೇಯೋದ್ದೇಶ ಪ್ರೇರಿತವಾಗಿರತಕ್ಕದ್ದು ಮತ್ತು ಆಯವ್ಯಯ ಪ್ರೇರಿತವಾಗಿರತಕ್ಕದ್ದಲ್ಲ.

(4) ಪ್ರಾಧಿಕಾರವು, ನಿರೀಕ್ಷಿತ ಫಲಿತಾಂಶಗಳನ್ನು ಸಾಧಿಸುವಲ್ಲಿ ಅಗತ್ಯವಾದ ಅದರ ಧ್ಯೇಯೋದ್ದೇಶಗಳು, ಸಾಧನೆಗಳು, ಅನಿವಾರ್ಯತೆಗಳು ಮತ್ತು ಸುಧಾರಣಾತ್ಮಕ ಕ್ರಮಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಧ್ಯಮಾವಧಿ ವಿತ್ತೀಯ ಯೋಜನೆ ಮತ್ತು ಶೂನ್ಯ ಆಧಾರಿತ ಹಣದ ಏರ್ಪಾಡನ್ನು ಅನುಸರಿಸತಕ್ಕದ್ದು.

(5) ಪ್ರಾಧಿಕಾರವು, ರಾಜ್ಯ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿದ ಸರ್ಕಾರಿ ಆದೇಶಗಳು, ಮಾರ್ಗಸೂಚಿಗಳು ಮತ್ತು ಅಧಿಸೂಚನೆಗಳ ಪ್ರಕಾರ ನಿಧಿಗಳನ್ನು ಬಳಸುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.

9. ಖಜಾನೆಯಿಂದ ಬಿಲ್ಲುಗಳನ್ನು ಡ್ರಾ ಮಾಡುವುದು.- ರಸ್ತೆ ಸುರಕ್ಷತಾ ಆಯುಕ್ತರು, ಸಕ್ಷಮ ಪ್ರಾಧಿಕಾರವು ಈ ಮುಂದಿನ ಖಜಾನೆ-2 ರಲ್ಲಿನ ರೋಲ್ ಮ್ಯಾಪಿಂಗ್ಸ್ ಬರೆದುಕೊಟ್ಟ ನಂತರ, ಖಜಾನೆಯಿಂದ ಬಿಲ್ಲುಗಳನ್ನು ಡ್ರಾ ಮಾಡತಕ್ಕದ್ದು, ಎಂದರೆ:-

(ಎ) ಆರ್ಥಿಕ ಇಲಾಖೆಯ ಆದೇಶಗಳಲ್ಲಿ ತಿಳಿಸಲಾದ ಅಧಿಕಾರಿಗಳ ಪ್ರತ್ಯಾಯೋಜನೆಗೆ ಅನುಸಾರವಾಗಿ ಲೆಕ್ಕ ಶೀರ್ಷಿಕೆ 2041-00-102-0-03 ರ ಮೇರೆಗೆ ಅನುದಾನ ಬಿಡುಗಡೆಮಾಡುವ ಉದ್ದೇಶಕ್ಕಾಗಿ ಸರ್ಕಾರದಲ್ಲಿ ಸಾರಿಗೆ ಇಲಾಖೆಯು ಆಡಳಿತ ಇಲಾಖೆಯಾಗಿರತಕ್ಕದ್ದು.

(ಬಿ) ರಸ್ತೆ ಸುರಕ್ಷತಾ ಆಯುಕ್ತರು ಪ್ರಾಧಿಕಾರದ ವೆಚ್ಚವನ್ನು ಭರಿಸುವುದಕ್ಕೆ ಮುಖ್ಯ ನಿಯಂತ್ರಣಾಧಿಕಾರಿಯಾಗಿರತಕ್ಕದ್ದು.

(ಸಿ) ಅಪರ ಆಯುಕ್ತರು, ಪ್ರಾಧಿಕಾರದ ವೆಚ್ಚವನ್ನು ಭರಿಸುವುದಕ್ಕೆ ನಿಯಂತ್ರಣಾಧಿಕಾರಿಯಾಗಿರತಕ್ಕದ್ದು ಮತ್ತು ಮೇಲುರುಜು ಹಾಕುವ ಅಧಿಕಾರಿಯಾಗಿರತಕ್ಕದ್ದು; ಮತ್ತು

(ಡಿ) ಪ್ರಾಧಿಕಾರದ ಹಣಕಾಸು ಅಧಿಕಾರಿಯು, ಬಿಲ್ಲುಗಳನ್ನು ಅನುಮೋದಿಸುವ ಮತ್ತು ಅವುಗಳಿಗೆ ಸಹಿ ಮಾಡುವ ಅಧಿಕಾರದೊಂದಿಗೆ ನಿಹಿತಗೊಂಡಿರತಕ್ಕ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯಾಗಿರತಕ್ಕದ್ದು. ಬರೆದುಕೊಡುವವ, ಪರಿಶೀಲಕ, ಅನುಮೋದಕ ಮತ್ತು ಇಬ್ಬರು ಸಂದೇಶವಾಹಕರ ಮಾದರಿ ಸಹಿಗಳನ್ನು ಖಜಾನೆಯಲ್ಲಿ ನೋಂದಾಯಿಸಿರತಕ್ಕದ್ದು. ಬರೆದುಕೊಡುವವ, ಪರಿಶೀಲಕ ಮತ್ತು ಅನುಮೋದಕನು, ಖಜಾನೆ ವ್ಯವಹಾರಗಳಲ್ಲಿ ಅವರವರ ಡಿಜಿಟಲ್ ಸಹಿ ಪ್ರಮಾಣ ಪತ್ರಗಳನ್ನು ಬಳಸತಕ್ಕದ್ದು.

10. ವೆಚ್ಚದ ಮಂಜೂರಾತಿ.- ಆಯುಕ್ತರು ಮತ್ತು ಅಪರ ಆಯುಕ್ತರು, ವೆಚ್ಚ ಮಂಜೂರಾತಿಗಳ ವಿಷಯಗಳಲ್ಲಿ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದಗಳಾದ 302, 303, 304 ಮತ್ತು 305 ರಲ್ಲಿ ವಿಧಿಸಲಾದ ಕಾರ್ಯವಿಧಾನಕ್ಕೆ ಬದ್ಧರಾಗಿರತಕ್ಕದ್ದು.

[**11. ವೆಚ್ಚದ ನಿಯಂತ್ರಣ.-** ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಯು ಖಜಾನೆಯಲ್ಲಿ ಬಿಲ್ಲುಗಳನ್ನು ಡ್ರಾ ಮಾಡಿಕೊಳ್ಳುವಿಕೆಯು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 346 ಮತ್ತು ಇತರೆ ಉಪಬಂಧಗಳಲ್ಲಿ ಮತ್ತು ಸಾದಿಲ್ವಾರು ವೆಚ್ಚ ಕೈಪಿಡಿಯ 22ನೇ ನಿಯಮ ಮತ್ತು ಇತರೆ ಉಪಬಂಧಗಳಲ್ಲಿ ನಿಯಮಿಸಲಾದ ರೀತಿಯಲ್ಲಿ ಮುಖ್ಯ ನಿಯಂತ್ರಣಾಧಿಕಾರಿ ಮತ್ತು ನಿಯಂತ್ರಣಾಧಿಕಾರಿಯ ನಿಯಂತ್ರಣಕ್ಕೊಳಪಡತಕ್ಕದ್ದು.

12. ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಯ ಕರ್ತವ್ಯಗಳು ಮತ್ತು ಹೊಣೆಗಾರಿಕೆಗಳು.- ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯು, ಖಜಾನೆಯಿಂದ ಹಣವನ್ನು ಡ್ರಾ ಮಾಡಿಕೊಳ್ಳುವ ಮತ್ತು ಬಟವಾಡೆ ಮಾಡುವ ವಿಷಯಗಳಲ್ಲಿ ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 346 ಮತ್ತು ಇತರೆ ಉಪಬಂಧಗಳ ಮೇರೆಗೆ ಹಣ ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗೆ ನಿಯಮಿಸಲಾದ ಕರ್ತವ್ಯಗಳನ್ನು ನಿರ್ವಹಿಸುವುದಕ್ಕೆ ಜವಾಬ್ದಾರನಾಗಿರತಕ್ಕದ್ದು.

13. ಬ್ಯಾಂಕ್ ಖಾತೆಯನ್ನು ತೆರೆಯುವುದು.- (1) ಸಾರಿಗೆ ಇಲಾಖೆಯ ತ್ವರಿತ ಮಂಜೂರಾತಿಯೊಂದಿಗೆ ಪ್ರಾಧಿಕಾರವು, ವೈಯಕ್ತಿಕ ಠೇವಣಿಗಳ ಖಾತೆ ಅಥವಾ ಬ್ಯಾಂಕ್ ಖಾತೆಯನ್ನು ತೆರೆಯತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು. ಪ್ರಸ್ತುತ ನಿಧಿ ಬಟವಾಡೆ ಪದ್ಧತಿಯು ಪ್ರಾಧಿಕಾರದ ನಿರ್ದಿಷ್ಟ ಅಗತ್ಯತೆಗಳನ್ನು ಪೂರೈಸುವುದಕ್ಕೆ ಸಾಕಷ್ಟಿಲ್ಲವೆಂಬುದನ್ನು ದೃಢಪಡಿಸಿಕೊಂಡ ನಂತರವೇ ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ ಇವರು ಹೊಸ ಬ್ಯಾಂಕ್ ಖಾತೆಗಳನ್ನು ತೆರೆಯಲು ಅನುಮತಿಸತಕ್ಕದ್ದು.

(2) ನಿಧಿಗಳ ಸಾಲಗಳನ್ನು ಪಡೆದುಕೊಳ್ಳುವ ಮತ್ತು ನಿಧಿಗಳು ರದ್ದಾಗುವುದನ್ನು ತಪ್ಪಿಸುವ ಉದ್ದೇಶದೊಂದಿಗೆ ಹೊಸ ಬ್ಯಾಂಕ್ ಖಾತೆಗಳನ್ನು ತೆರೆಯುವುದನ್ನು ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ ಇವರ ಪೂರ್ವ ಮಂಜೂರಾತಿ ಪಡೆದು ಕರಾರುವಾಕ್ಕಾಗಿ ಮಾಡತಕ್ಕದ್ದು.

(3) ಬ್ಯಾಂಕುಗಳಲ್ಲಿ, ಪ್ರಾಧಿಕಾರದ ನಿಧಿಗಳ ನಿರ್ವಹಣೆಗಾಗಿ ಸ್ವೀಪ್ ಇನ್ ಸ್ವೀಪ್ ಔಟ್(sweep in sweep out) ಠೇವಣಿ ಖಾತೆಗಳನ್ನು ಪರಿಗಣಿಸಬೇಕು. ಎಲ್ಲ ಇತರೆ ವಿಧಗಳ ಬ್ಯಾಂಕ್ ಖಾತೆಗಳನ್ನು (ಉಳಿತಾಯಗಳು ಅಥವಾ ಚಾಲ್ತಿ ಖಾತೆ, ಇತ್ಯಾದಿ) ತೆರೆಯುವುದಕ್ಕಾಗಿ, ಸರ್ಕಾರಿ ಆದೇಶದ ರೀತಿಯಲ್ಲಿ ಸಾರಿಗೆ ಇಲಾಖೆಯ ಮುಂದಿನ ಮಂಜೂರಾತಿ ಕಡ್ಡಾಯವಾಗಿರುತ್ತದೆ.

ಟಿಪ್ಪಣಿ : ಸ್ವೀಪ್ ಇನ್ ಸ್ವೀಪ್ ಔಟ್ ಠೇವಣಿ ಖಾತೆಗಳಲ್ಲದೆ ಬೇರೆ ಖಾತೆಗಳಲ್ಲಿ ನಿಧಿಗಳನ್ನು ನಿರ್ವಹಿಸಲು ಪರಿಯೋಜನೆ ಅಥವಾ ಪ್ರಾಜೆಕ್ಟ್ ಮಾರ್ಗಸೂಚಿಗಳು ಅಗತ್ಯವಿದ್ದರೆ, ಆ ನಂತರ ಸರ್ಕಾರಿ ಆದೇಶವನ್ನು ಹೊರಡಿಸುವ ಮೂಲಕ ಸರ್ಕಾರವು ಅದನ್ನು ಅನುಮತಿಸಬಹುದು.

(4) ಬ್ಯಾಂಕ್ ಖಾತೆಯನ್ನು ತೆರೆಯುವಾಗ, ಪ್ರಾಧಿಕಾರವು ಉತ್ತಮ ಬಡ್ಡಿ ದರಗಳನ್ನು ಸಂದಾಯ ಮಾಡುವ ಬ್ಯಾಂಕ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು. ಈ ಮುಂದಿನ ಮಾನದಂಡವನ್ನು ಅನುಸರಿಸುವ ಎಲ್ಲ ಅರ್ಹ ಬ್ಯಾಂಕುಗಳಿಂದ ಅದಕ್ಕಾಗಿ ಕೊಟೇಷನ್‌ಗಳನ್ನು(Quotation) ತರಿಸಿಕೊಳ್ಳಬೇಕು, ಎಂದರೆ:-

(ಎ) ಬ್ಯಾಂಕು, ಸಾರ್ವಜನಿಕ ವಲಯ ಬ್ಯಾಂಕ್ ಅಥವಾ ರಾಷ್ಟ್ರೀಕೃತ ಬ್ಯಾಂಕ್ ಆಗಿರಬೇಕು. ಆದಾಗ್ಯೂ, ಒಂದು ಸಂಸ್ಥೆಯು ಅದರ ನಿರ್ವಹಣಾ ಅನುಕೂಲಕ್ಕಾಗಿ ನಿರ್ದಿಷ್ಟ ಬ್ಯಾಂಕಿಂಗ್ ಪರಿಹಾರ ಅಗತ್ಯವೆನಿಸಿದಾಗ ಮತ್ತು ಸಾರ್ವಜನಿಕ ವಲಯ ಬ್ಯಾಂಕುಗಳು ಅಂಥ ಸೇವೆಯನ್ನು ಒದಗಿಸಲು ಅಸಮರ್ಥವಾಗಿದ್ದಾಗ, ಸಂಸ್ಥೆಗೆ ಕೆಲವು

ಬ್ಯಾಂಕಿಂಗ್ ಅಥವಾ ಮೌಲ್ಯದ ವ್ಯಾವಹಾರಿಕ ಪರಿಹಾರವನ್ನು ಅದು ಒದಗಿಸಿದ್ದರೆ, ಬ್ಯಾಂಕ್ ಖಾತೆಯನ್ನು ತೆರೆಯುವುದಕ್ಕಾಗಿ ರಾಷ್ಟ್ರೀಕೃತ ಬ್ಯಾಂಕ್ ಅನ್ನು ಪರಿಗಣಿಸಬಹುದು. ಅಂಥ ಎಲ್ಲ ಸಂದರ್ಭಗಳಲ್ಲಿ, ಆರ್ಥಿಕ ಇಲಾಖೆಯಿಂದ ಪಡೆದುಕೊಂಡ ಸಹಮತಿಯ ಜೊತೆಗೆ ಸಾರಿಗೆ ಇಲಾಖೆಯಿಂದ ಅನುಮೋದನೆಯು ಬೇಕಾಗುತ್ತದೆ;

(ಬಿ) ಬ್ಯಾಂಕ್‌ನ ನಿವ್ವಳ ಮೌಲ್ಯವು ಆರ್ಥಿಕ ಇಲಾಖೆಯು ನಿರ್ಧರಿಸಲಾದ ಪರಿಮಿತಿಗಳಿಗಿಂತ ಕಡಿಮೆಯಿರತಕ್ಕದ್ದಲ್ಲ;

(ಸಿ) ನಿವ್ವಳ ಅನುತ್ಪಾದಕ ಆಸ್ತಿಗಳು (ಎನ್‌ಪಿಎ), ಆರ್ಥಿಕ ಇಲಾಖೆಯು ನಿರ್ಧರಿಸಲಾದ ಪರಿಮಿತಿಗಳಿಗಿಂತ ಹೆಚ್ಚಾಗಿರತಕ್ಕದ್ದಲ್ಲ;

(ಡಿ) ಹಿಂದಿನ ಒಂದಾದ ಮೇಲೊಂದರಂತೆ ನಿರಂತರವಾಗಿ ಬರುವ ಎರಡು ವರ್ಷಗಳ ಬ್ಯಾಂಕ್‌ನ ಹಣಕಾಸು ಸ್ಥಿತಿಯು ಉತ್ತಮವಾಗಿರತಕ್ಕದ್ದು;

(ಇ) ಬ್ಯಾಂಕು ಅದರ ಹಣ ಮತ್ತು ದತ್ತಾಂಶದ ಸುರಕ್ಷತೆ ಮತ್ತು ಭದ್ರತೆಯನ್ನು ಖಚಿತಪಡಿಸಿಕೊಂಡಿರುವ ಬಗ್ಗೆ ಪ್ರಾಧಿಕಾರಕ್ಕೆ ನಂಬಿಕೆಯಿರತಕ್ಕದ್ದು; ಮತ್ತು

(ಎಫ್) ಪ್ರಾಧಿಕಾರವು, ಆನ್‌ಲೈನ್ ಪ್ರವೇಶಾವಕಾಶ, ಕೋರ್ ಬ್ಯಾಂಕಿಂಗ್ ಮತ್ತು ಇ-ಬ್ಯಾಂಕಿಂಗ್ ಮೂಲಕ ಬ್ಯಾಂಕ್‌ನಲ್ಲಿ ಅದರ ಠೇವಣಿಗಳನ್ನು ಪರಿಣಾಮಕಾರಿಯಾಗಿ ಮೇಲ್ವಿಚಾರಣೆ ಮಾಡಲು ಸಮರ್ಥವಾಗಿರತಕ್ಕದ್ದು. ಅದು ನೈಜ ಸಮಯದ ಆಧಾರದ ಮೇಲೆ ಅಲರ್ಟ್ಸ್, ಇ-ವರ್ಗಾವಣೆಗಳು ಮತ್ತು ಎಂಐಎಸ್ ವರದಿಯನ್ನು ಒಳಗೊಂಡಿರತಕ್ಕದ್ದು.

(5) ಬ್ಯಾಂಕ್ ಖಾತೆಯನ್ನು ತೆರೆಯುವುದಕ್ಕಾಗಿ ಮಂಜೂರಾದ ಆದೇಶವು, ಖಾತೆ ತೆರೆಯುವಿಕೆಯ ಉದ್ದೇಶ ಸ್ಕೀಮ್‌ನ ಹೆಸರು, ಸಮರ್ಥನೆಯೊಂದಿಗೆ ಖಾತೆಯ ವಿಧ, ಅಧಿಕೃತವಾಗಿ ಸಹಿ ಮಾಡಿದವರು, ಮೊದಲಾದವುಗಳಂತಹ ನಿರ್ವಹಣಾ ಮಾರ್ಗಸೂಚಿಗಳಂಥ ಮುಂತಾದ ವಿವರಗಳನ್ನು ಒಳಗೊಂಡಿರತಕ್ಕದ್ದು.

(6) ಮೇಲಿನ ಮಾರ್ಗಸೂಚಿಗಳ ಜೊತೆಗೆ, ಪ್ರಾಧಿಕಾರವು ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಹೊರಡಿಸಿದ ಮಾರ್ಗಸೂಚಿಗಳಿಗೆ ಬದ್ಧವಾಗಿರತಕ್ಕದ್ದು.

14. ಬ್ಯಾಂಕು ಖಾತೆಗಳ ನಿರ್ವಹಣೆ.- (1) ಆಯುಕ್ತರು ಮತ್ತು ಅಪರ ಆಯುಕ್ತರು ಪ್ರಾಧಿಕಾರದ ಹಿತಾಸಕ್ತಿಗಳನ್ನು ಸಂರಕ್ಷಿಸುವ ರೀತಿಯಲ್ಲಿ ಬ್ಯಾಂಕ್ ವ್ಯವಹಾರಗಳನ್ನು ನಿರ್ವಹಿಸತಕ್ಕದ್ದು.

(2) ಹಣಕಾಸು ಅಧಿಕಾರಿಯು, ಅವು ನಡೆದ ಕೂಡಲೇ ನಗದು ಪುಸ್ತಕದಲ್ಲಿ ಎಲ್ಲಾ ಹಣಕಾಸು ವ್ಯವಹಾರಗಳನ್ನು ನಮೂದಿಸತಕ್ಕದ್ದು ಮತ್ತು ಎಲ್ಲಾ ನಗದು ಪುಸ್ತಕ ನಮೂದುಗಳನ್ನು ಅಪರ ಆಯುಕ್ತರು ದೃಢೀಕರಿಸತಕ್ಕದ್ದು.

(3) ಆಯುಕ್ತರು ಮತ್ತು ಅಪರ ಆಯುಕ್ತರು, ವಿದ್ಯುನ್ಮಾನ ವಿಧಾನದ (ಬಾರ್ ಕೋಡೆಡ್ RTGS, NEFT, IMPS ಇತ್ಯಾದಿ) ಮುಖಾಂತರ ಅಥವಾ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಹಣ ಪಡೆಯುವವನ ಹೆಸರಿಗೆ ಬರೆದ ಚೆಕ್‌ಗಳ ಮುಖಾಂತರ ಬ್ಯಾಂಕ್ ಖಾತೆಗಳಿಂದ ಹಣದ ವರ್ಗಾವಣೆಯನ್ನು ಮಾಡತಕ್ಕದ್ದು ಮತ್ತು ಮಾಡಿದ ಎಲ್ಲ ಚೆಕ್ ಸಂದಾಯಗಳನ್ನು ಅಂಥ ಸಂದಾಯಗಳಿಗಾಗಿ ಯುಕ್ತ ಕಾರಣದೊಂದಿಗೆ ನಗದು ಪುಸ್ತಕದಲ್ಲಿ ದಾಖಲಿಸತಕ್ಕದ್ದು.

(4) ಎಲ್ಲ ವಿದ್ಯುನ್ಮಾನ ನಿಧಿ ವರ್ಗಾವಣೆ ಕೋರಿಕೆಗಳು/ ಚೆಕ್ಕುಗಳಿಗೆ ಆಯುಕ್ತರು ಮತ್ತು ಅಪರ ಆಯುಕ್ತರು ಜಂಟಿಯಾಗಿ ಸಹಿ ಮಾಡತಕ್ಕದ್ದು.

(5) ಆಯುಕ್ತರು ಪ್ರಾಧಿಕಾರದ ಯಾರೇ ಅಧಿಕಾರಿಗಳ ವೈಯಕ್ತಿಕ ಖಾತೆಗಳಿಗೆ ಸ್ವಯಂ ಸಹಿ ಮಾಡಿದ ಚೆಕ್‌ಗಳು ಮತ್ತು ಯೋಜನಾ ನಿಧಿಗಳನ್ನು ವರ್ಗಾವಣೆ ಮಾಡಿದ ಬ್ಯಾಂಕ್‌ನಿಂದ ಹಣವನ್ನು ಪಡೆಯದೇ ಇರತಕ್ಕದ್ದು.

(6) ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿ, ನಿಯಂತ್ರಣಾಧಿಕಾರಿ ಮತ್ತು ಆಯುಕ್ತರು, ಚೆಕ್‌ಗಳಲ್ಲಿ ಹೆಚ್ಚಿನ ಮೌಲ್ಯದ ಸಂದಾಯಗಳು/ ಹೂಡಿಕೆಗಳು ಮತ್ತು ಹಣ ತೆಗೆಯುವುದಕ್ಕೆ ಸಂಬಂದಪಟ್ಟಂತೆ ಸಕ್ರಿಯ ಸಂದೇಶ ಸೇವೆಗಳಿಗಾಗಿ (SMS, e-mail ಇತ್ಯಾದಿ) ಬ್ಯಾಂಕುಗಳಿಗೆ ಅಧಿಕೃತ ಇ-ಮೇಲ್ ಐಡಿಗಳು ಮತ್ತು ನೋಂದಾಯಿತ ಮೊಬೈಲ್ ಫೋನ್ ಸಂಖ್ಯೆಗಳ ವಿವರಗಳನ್ನು ಒದಗಿಸತಕ್ಕದ್ದು. ಅಂಥ ಸಂದರ್ಭಗಳಲ್ಲಿ, ಬ್ಯಾಂಕುಗಳು, ಅಪಾಯದ ಎಚ್ಚರಿಕೆ ವ್ಯವಹಾರವು ಮೋಸದ್ದೆಂದು ತಾನು ಸಂಶಯಪಡುವಂತಿದ್ದರೆ, ಸಂದಾಯ ನಿಲುಗಡೆಗೆ ಸಂಬಂಧಪಟ್ಟ ಅಧಿಕಾರಿಗೆ ಸಾಕಷ್ಟು ಅವಧಿಯನ್ನು ಕೊಡತಕ್ಕದ್ದು.

(7) ಹಣತೆಗೆಯುವ ಮತ್ತು ಬಟವಾಡೆ ಅಧಿಕಾರಿಯು, ಬ್ಯಾಂಕಿನಿಂದ ಪ್ರತಿಯೊಂದು ಖಾತೆಗೆ ವ್ಯವಹಾರದ ವಿವರಣೆ ಪತ್ರದೊಂದಿಗೆ ಮಾಸಿಕ ಬಾಕಿ ಸ್ಥಿರೀಕರಣ ಪ್ರಮಾಣ ಪತ್ರವನ್ನು ಪಡೆದುಕೊಂಡ ನಂತರ ಬ್ಯಾಂಕ್ ಖಾತೆಗಳ ಮಾಸಿಕ ಆಧಾರದ ಮೇಲೆ ಹೊಂದಾಣಿಕೆ ಮಾಡತಕ್ಕದ್ದು.

(8) ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಯು, ಬ್ಯಾಂಕ್ ವಿವರ ಪಟ್ಟಿಗಳೊಂದಿಗೆ ಲೆಕ್ಕಗಳು ಹೊಂದಾಣಿಕೆಯಾಗುತ್ತವೆಂಬುದನ್ನು ಅಪರ ಆಯುಕ್ತರು ಮತ್ತು ಆಯುಕ್ತರಿಗೆ ಬ್ಯಾಂಕ್ ಹೊಂದಾಣಿಕೆ ವಿವರ ಪಟ್ಟಿಯ ಪ್ರತಿಯನ್ನು ಸಲ್ಲಿಸತಕ್ಕದ್ದು. ಈ ಪ್ರಯೋಗವನ್ನು ಮುಂಬರುವ ತಿಂಗಳ 10ನೇ ದಿನಕ್ಕೂ ಮುಂಚೆ ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಯು ಪೂರ್ಣಗೊಳಿಸಬೇಕು.

(9) ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಯು, ಮುಂಬರುವ ತಿಂಗಳ 10ನೇ ದಿನಕ್ಕೂ ಮುಂಚೆ ತಿಂಗಳಲ್ಲಿ ಮಾಡಿದ ಹೆಚ್ಚಿನ ಮೌಲ್ಯದ ಸಂದಾಯಗಳು/ ಹೂಡಿಕೆಗಳ ಪಟ್ಟಿಯನ್ನು ಆಯುಕ್ತರಿಗೆ ಸಲ್ಲಿಸತಕ್ಕದ್ದು.

ಟಿಪ್ಪಣಿ : ಪ್ರಾಧಿಕಾರವು ಹೊಂದಿರುವ ಹೆಚ್ಚುವರಿ ನಿಧಿಗಳ ಹೂಡಿಕೆಯನ್ನು ಸರ್ಕಾರವು ಅದರ ಸುತ್ತೋಲೆ ಸಂಖ್ಯೆ : ಎಫ್‌ಡಿ 38 ಟಿಎಆರ್ 2018, ಬೆಂಗಳೂರು, ದಿನಾಂಕ : 27.08.2018 ರ ಪ್ರಕಾರ ಹೊರಡಿಸಿದ ಮಾರ್ಗಸೂಚಿಗಳ ಮೂಲಕ ನಿರ್ವಹಿಸತಕ್ಕದ್ದು.

(10) ಸಾರಿಗೆ ಇಲಾಖೆಯ ಆಂತರಿಕ ಹಣಕಾಸು ಸಲಹೆಗಾರನು, (IFA) ಪ್ರಾಧಿಕಾರವು ನಿರ್ವಹಿಸುತ್ತಿರುವ ಎಲ್ಲ ಬ್ಯಾಂಕ್ ಖಾತೆಗಳು ಹಿಂದೆ ಹೇಳಲಾದ ಮಾರ್ಗಸೂಚಿಗಳಿಗೆ ಅನುಸಾರವಾಗಿವೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಆಂತರಿಕ ಹಣಕಾಸು ಸಲಹೆಗಾರನು,

(ಎ) ಪ್ರಾಧಿಕಾರದ ಹೆಸರಿನಲ್ಲಿರುವ ಎಲ್ಲ ಚಾಲ್ತಿ ಬ್ಯಾಂಕ್ ಖಾತೆಗಳನ್ನು 18(1) ನೇ ನಿಯಮದ ಮೇರೆಗೆ ಅಗತ್ಯಪಡಿಸಲಾದಂತೆ ವಾರ್ಷಿಕವಾಗಿ ಅಧಿಸೂಚಿಸಲಾಗಿದೆ ಎಂದು; ಮತ್ತು

(ಬಿ) ಅಂಥ ಅಧಿಸೂಚನೆಯ ಪ್ರತಿಯನ್ನು, ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಇಲಾಖೆ, ನಿರ್ದೇಶಕರು, ಖಜಾನೆ ಇಲಾಖೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರಿಗೆ ಕಳುಹಿಸಲಾಗಿದೆ ಎಂದೂ ಸಹ ಖಚಿತಪಡಿಸಿಕೊಳ್ಳತಕ್ಕದ್ದು.

(11) ಮೇಲಿನವುಗಳ ಜೊತೆಗೆ, ನಿರ್ದಿಷ್ಟ ಸ್ಕೀಮುಗಳ ಅನುಷ್ಠಾನಕ್ಕಾಗಿ ಪ್ರಾಧಿಕಾರದ ಬ್ಯಾಂಕ್ ಖಾತೆಗಳಿಗೆ ಸರ್ಕಾರವು ಬಿಡುಗಡೆಗೊಳಿಸಿರುವ ಮುಂದಿನ ಮಾರ್ಗಸೂಚಿಗಳನ್ನು ಎಂದರೆ:-

(ಎ) ಬ್ಯಾಂಕಿನಲ್ಲಿ ನಿಧಿಯ ನಿರ್ವಹಣೆಗೆ ಯೋಜನಾ ಮಾರ್ಗಸೂಚಿಗಳನ್ನು ಒದಗಿಸಿದರೆ, ಪ್ರಾಧಿಕಾರವು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017, ದಿನಾಂಕ: 30.1.2017 ಕ್ಕೆ ಅನುಬಂಧ ಸಿ ಯಲ್ಲಿ ನೀಡಲಾದ ಒಡಂಬಡಿಕೆ (MOU) ಯ ನಿಗದಿತ ನಮೂನೆಯ ಪ್ರಕಾರ ಆಯ್ಕೆಯಾದ ಬ್ಯಾಂಕಿನಲ್ಲಿ ಒಡಂಬಡಿಕೆ ದಾಖಲೆ (MOU) ಯನ್ನು ಬರೆದುಕೊಡತಕ್ಕದ್ದು.

(ಬಿ) ಪ್ರಾಧಿಕಾರದ ಹಣಕಾಸು ಅಧಿಕಾರಿಯು ಮಾಸಿಕ ಆಧಾರದ ಮೇಲೆ ಬ್ಯಾಂಕ್ ವಿವರಪಟ್ಟಿಗಳೊಂದಿಗೆ ಕಚೇರಿ ಖಾತೆಗಳನ್ನು ಹೊಂದಾಣಿಕೆ ಮಾಡತಕ್ಕದ್ದು, ಅದನ್ನು ಅಪರ ಆಯುಕ್ತರು ಖಚಿತಪಡಿಸಿಕೊಳ್ಳತಕ್ಕದ್ದು;

(ಸಿ) ಅಪರ ಆಯುಕ್ತರು, ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 346 ರಲ್ಲಿ ಹೇಳಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಯೋಜನಾ ವೆಚ್ಚದ ಪ್ರಗತಿಯನ್ನು ಗಮನಿಸತಕ್ಕದ್ದು;

(ಡಿ) ಸರ್ಕಾರವು, ಬ್ಯಾಂಕ್ ಖಾತೆಗಳಿಗೆ ಬಿಡುಗಡೆ ಮಾಡಿದ ಹಿಂದಿನ ಅನುದಾನದ ಕಂತಿಗೆ ಪ್ರಾಧಿಕಾರವು ನೀಡಲಾದ ಬಳಕೆ ಪ್ರಮಾಣ ಪತ್ರಗಳನ್ನು ಆಧರಿಸಿ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ನಿಧಿಗಳನ್ನು ಬಿಡುಗಡೆ ಮಾಡಬಹುದು. ಬಳಕೆ ಪ್ರಮಾಣಪತ್ರವು ಬ್ಯಾಂಕ್ ವಿವರಪಟ್ಟಿಗಳನ್ನು ಸಮರ್ಥಿಸತಕ್ಕದ್ದು.

(ಇ) ಹಿತಾಸಕ್ತಿ ಹೊಂದಿರುವ (Stake holding) ಇಲಾಖೆಗಳು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017, ದಿನಾಂಕ: 30.1.2017 ಕ್ಕೆ ಅನುಬಂಧ ಡಿ ಯಲ್ಲಿ ನೀಡಲಾದ ನಮೂನೆಯಲ್ಲಿ ಪ್ರಾಧಿಕಾರಕ್ಕೆ ಪ್ರತ್ಯೇಕ ಬಳಕೆ ಪ್ರಮಾಣ ಪತ್ರಗಳನ್ನು (ಯುಸಿ ಗಳು) ಸಲ್ಲಿಸತಕ್ಕದ್ದು. ಬಳಕೆ ಪ್ರಮಾಣ ಪತ್ರಗಳು, ಹಣ ಬಿಡುಗಡೆ, ಉದ್ದೇಶ ಮಂಜೂರಾದ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳು, ಖರ್ಚಾದ ಮೊತ್ತ, ದಿನಾಂಕ ಸಹಿತ ಚೆಕ್ ಸಂಖ್ಯೆ, ನಿರ್ವಹಿಸಲಾದ ಲೆಕ್ಕದ ಪುಸ್ತಕಗಳೊಂದಿಗೆ ಯುಕ್ತವಾಗಿ ಹೊಂದಾಣಿಕೆಯಾದ ಮುಕ್ತಾಯ ಶಿಲ್ಕುಗಳು, ಮುಂತಾದಂಥ ವಿವರಗಳಿರುವ ಅನುಬಂಧಗಳನ್ನು ಹೊಂದಿರತಕ್ಕದ್ದು.

(ಎಫ್) ಪ್ರಾಧಿಕಾರವು, ಹಿತಾಸಕ್ತಿ ಹೊಂದಿರುವ (Stake holding) ಇಲಾಖೆಗಳು ಒದಗಿಸಲಾದ ಬಳಕೆ ಪ್ರಮಾಣಪತ್ರಗಳಲ್ಲಿ ಒದಗಿಸಿದ ಮಾಹಿತಿಯು ಸರಿಯಾಗಿರುವುದನ್ನು ಖಚಿತಪಡಿಸತಕ್ಕದ್ದು.

(ಜಿ) ಹಣಕಾಸು ಅಧಿಕಾರಿಯು, ಒಬ್ಬರಿಗಿಂತ ಹೆಚ್ಚು ಹಣ ತೆಗೆಯುವ ಮತ್ತು ಬಟವಾಡೆ ಅಧಿಕಾರಿಗೆ ನಿಧಿಗಳನ್ನು ಬಟವಾಡೆ ಮಾಡಿದ ಸಂದರ್ಭದಲ್ಲಿ, ಎಲ್ಲ ಪ್ರತ್ಯೇಕ ಬಳಕೆ ಪ್ರಮಾಣ ಪತ್ರಗಳನ್ನು ಕ್ರೋಢೀಕರಿಸತಕ್ಕದ್ದು ಮತ್ತು ತರುವಾಯದ ಅನುದಾನ ಕಂತಿನ ಬಿಡುಗಡೆಗಾಗಿ ಸಾರಿಗೆ

ಇಲಾಖೆಯ ಆಂತರಿಕ ಲೆಕ್ಕಪರಿಶೋಧನಾ ಸಲಹೆಗಾರರಿಗೆ ಸಹಾಯಾನುದಾನ ಬಿಲ್ಲುಗಳೊಂದಿಗೆ ಕ್ರೋಢೀಕೃತ ಬಳಕೆ ಪ್ರಮಾಣ ಪತ್ರವನ್ನು ಕಳುಹಿಸತಕ್ಕದ್ದು;

(ಹೆಚ್) ಪ್ರಾಧಿಕಾರವು ನಿಧಿಗಳು ಸಮ್ಮಿಶ್ರಣವಾಗುವುದನ್ನು ತಪ್ಪಿಸಲು ಒಂದಕ್ಕಿಂತ ಹೆಚ್ಚು ಯೋಜನೆಯ ನಿಧಿಗಳೊಟ್ಟಿಗಿನ ಬ್ಯಾಂಕ್ ಖಾತೆಗಳ ನಿರ್ವಹಣೆಯ ಸಂದರ್ಭದಲ್ಲಿ ಯೋಜನಾವಾರು (Samaritens) ನಗದು ಪುಸ್ತಕಗಳು ಮತ್ತು ಲೆಕ್ಕಪತ್ರಗಳನ್ನು ನಿರ್ವಹಿಸತಕ್ಕದ್ದು;

(ಐ) ಪ್ರಾಧಿಕಾರವು, ಯೋಜನಾ ನಿಧಿಗಳ ಮಾರ್ಗಾಂತರವನ್ನು ಕಟ್ಟುನಿಟ್ಟಾಗಿ ನಿಷೇಧಿಸತಕ್ಕದ್ದು ಮತ್ತು ಈ ವಿಷಯದ ಬಗೆಗಿನ ಉಲ್ಲಂಘನೆಗಳ ವಿಚಾರದಲ್ಲಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು;

(ಜೆ) ಪ್ರಾಧಿಕಾರವು ಯೋಜನೆಗಳ ಖರ್ಚಾಗದ ನಿಧಿಗಳನ್ನು ಮತ್ತು ಹಣಕಾಸು ಒದಗಿಸುವ ಏಜೆನ್ಸಿಗಳು ಈ ಸಂಬಂಧದಲ್ಲಿ ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಯೋಜನೆಗಳ ಅನುಷ್ಠಾನಕ್ಕೆ ಅಂಥ ನಿಧಿಗಳಿಗೆ ಸಂಚಿತಗೊಂಡ ಬಡ್ಡಿ ಮೊತ್ತವನ್ನು ಬಳಸಿಕೊಳ್ಳಬಹುದು;

(ಕೆ) ಸರ್ಕಾರವು ಅಥವಾ ಇತರೆ ಹಣಕಾಸು ಒದಗಿಸುವ ಏಜೆನ್ಸಿಗಳು ಬಿಡುಗಡೆ ಮಾಡಿದ ನಿಧಿಗಳನ್ನು, ಪ್ರಾಧಿಕಾರವು ಯೋಜನೆಗಳು/ ಕಾರ್ಯಕ್ರಮಗಳು/ ಕಾಮಗಾರಿಗಳನ್ನು ನಿರ್ವಹಿಸುವುದಕ್ಕಾಗಿ ತ್ವರಿತವಾಗಿ ಬಳಸಿಕೊಳ್ಳತಕ್ಕದ್ದು ಮತ್ತು ನಿಗದಿತ ಠೇವಣಿಗಳು ಅಥವಾ ಇತರೆ ಅಪಾಯ ಸಂಭವವುಳ್ಳ ಸಲಕರಣೆಗಳಲ್ಲಿ ಹಣ ಹೂಡಿಕೆ ಮಾಡತಕ್ಕದ್ದಲ್ಲ; ಮತ್ತು

(ಎಲ್) ಪ್ರಾಧಿಕಾರವು, ಯೋಜನೆಯು ಮುಕ್ತಾಯಗೊಳಿಸಿದ ಕೂಡಲೇ ನಿರ್ದಿಷ್ಟ ಯೋಜನೆಗಾಗಿ ತೆರೆಯಲಾದ ಬ್ಯಾಂಕ್ ಖಾತೆಗಳನ್ನು ಮುಕ್ತಾಯಗೊಳಿಸತಕ್ಕದ್ದು.

15. ಬ್ಯಾಂಕ್ ಖಾತೆಗಳನ್ನು ತಿಳಿಯಪಡಿಸುವುದು.- ಹಣಕಾಸು ಕುರಿತು ವರದಿ ಮಾಡುವಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಮತ್ತು ತದನಂತರದ ಪರಿಣಾಮಕಾರಿ ಲೆಕ್ಕಪರಿಶೋಧನೆಗಾಗಿ ಮುಂಬರುವ ವರ್ಷದ ಜುಲೈ 31 ನೇ ದಿನಕ್ಕೂ ಮುಂಚೆ ಹಿಂದಿನ ಹಣಕಾಸು ವರ್ಷದವರೆಗೆ ಮುಂದಿನ ಮಾಹಿತಿಯನ್ನು ತಿಳಿಯಪಡಿಸುವುದು ಪ್ರಾಧಿಕಾರಕ್ಕೆ ಕಡ್ಡಾಯವಾಗಿರುತ್ತದೆ, ಎಂದರೆ:-

(i) ಹಣಕಾಸು ಅಧಿಕಾರಿಯು, ಪ್ರಾಧಿಕಾರವು ನಿರ್ವಹಿಸಲಾದ ಬ್ಯಾಂಕ್ ಖಾತೆಗಳ ಸಂಖ್ಯೆ ಮತ್ತು ವಿವರಗಳನ್ನು ಸರ್ಕಾರಿ ಆದೇಶ ಸಂ. ಎಫ್‌ಡಿ 5 ಟಿಎಆರ್ 2017, ದಿನಾಂಕ: 30.1.2017 ಕ್ಕೆ ಅನುಬಂಧ ಇ ಯಲ್ಲಿ ನೀಡಲಾದ ಪ್ರಕಟಣಾ ನಮೂನೆಯಲ್ಲಿ ಪ್ರಕಟಣಾ ಪ್ರಮಾಣಪತ್ರವನ್ನು ದೃಢೀಕರಿಸಿ ವಾರ್ಷಿಕ ಲೆಕ್ಕಪತ್ರಗಳು/ ವಾರ್ಷಿಕ ವರದಿಗಳಲ್ಲಿ ಪ್ರಮಾಣೀಕರಿಸತಕ್ಕದ್ದು;

(ii) ಶಾಸನಬದ್ಧ ಲೆಕ್ಕಪರಿಶೋಧಕನು ನೀಡಲಾದ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳು, ಪ್ರಾಧಿಕಾರವು ನಿರ್ವಹಿಸಲಾದ ಎಲ್ಲಾ ಬ್ಯಾಂಕ್ ಖಾತೆಗಳ ಪಟ್ಟಿಯನ್ನು ಒಳಗೊಂಡಿರಬೇಕು;

(iii) ಸಾರಿಗೆ ಇಲಾಖೆಯು ಪ್ರತಿ ವರ್ಷ ಜುಲೈ 31ನೇ ದಿನದಂದು ಪ್ರಾಧಿಕಾರವು ಮತ್ತು ಪ್ರಾಧಿಕಾರದ ಆಸಕ್ತಿ ಹೊಂದಿರುವ ಇಲಾಖೆಗಳು ನಿರ್ವಹಿಸುತ್ತಿರುವ ಹಳೆಯ ಮತ್ತು ಹೊಸ ಎರಡರ ಎಲ್ಲ ಬ್ಯಾಂಕ್ ಖಾತೆಗಳನ್ನು ಸರ್ಕಾರಿ ಆದೇಶದ ಮುಖಾಂತರ ಅಧಿಸೂಚಿಸತಕ್ಕದ್ದು. ಅಧಿಸೂಚನೆಯು ಮಾರ್ಚ್ ಆಗಿದ್ದರೆ 31 ನೇ ದಿನದಂದು ಇದ್ದಂತೆ ಅಧಿಸೂಚಿತ ಲೆಕ್ಕ ಪತ್ರಗಳ ಮುಕ್ತಾಯ ಶಿಲ್ಕು ವಿವರಗಳನ್ನು ಸಹ ಒಳಗೊಂಡಿರತಕ್ಕದ್ದು.

(iv) ಪ್ರಾಧಿಕಾರವು, ಅದರ ಮಾಸಿಕ/ ವಾರ್ಷಿಕ ಸಭೆಗಳಲ್ಲಿ ಮಾಹಿತಿಗಾಗಿ ಕಾರ್ಯಸೂಚಿ ಬಾಬ್ತಿನಂತೆ ಬ್ಯಾಂಕ್ ಖಾತೆಗಳ ಪಟ್ಟಿಯನ್ನು ಒಳಗೊಂಡಿರತಕ್ಕದ್ದು; ಮತ್ತು

(v) ಪ್ರಾಧಿಕಾರವು, ಮಾಸಿಕ ಕಾರ್ಯಕ್ರಮ ಅನುಷ್ಠಾನ ಕ್ಯಾಲೆಂಡರ್ ವರದಿಯಲ್ಲಿ ಅವರು ಬ್ಯಾಂಕ್ ಖಾತೆಗಳಲ್ಲಿ ನಿರ್ವಹಿಸುತ್ತಿರುವ ಯೋಜನೆಗಳ ಬ್ಯಾಂಕ್ ಶಿಲ್ಕುಗಳನ್ನು ಸೂಚಿಸತಕ್ಕದ್ದು.

ಟಿಪ್ಪಣಿ: ಮೇಲಿನ ಕಾರ್ಯಭಾರಗಳಿಗೆ ಸಂಬಂದಪಟ್ಟಂತೆ ವಿವಿಧ ಷೇರುದಾರರಿಗೆ ಸಂಬಂಧಪಟ್ಟ ಸವಿವರವಾದ ಹೊಣೆಗಳು ಮತ್ತು ಜವಾಬ್ದಾರಿಗಳು, ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

16. ಲೆಕ್ಕ ಪುಸ್ತಕಗಳ ನಿರ್ವಹಣೆ.- (1) ಅಂಕಿಗಳು ಅರೇಬಿಕ್ ಅಂಕಿಗಳಲ್ಲಿದ್ದಾಗ್ಯೂ ಲೆಕ್ಕದ ಪುಸ್ತಕಗಳು ನಮೂನೆಗಳು ಮತ್ತು ರಿಜಿಸ್ಟರ್ಗಳನ್ನು ಅನುಸೂಚಿ-III ರಲ್ಲಿ ಒದಗಿಸಲಾದಂತೆ ಲೆಕ್ಕಗಳ ನಮೂನೆಗಳಲ್ಲಿ ಕನ್ನಡ ಮತ್ತು ಇಂಗ್ಲೀಷ್ ಎರಡರಲ್ಲೂ ನಿರ್ವಹಿಸತಕ್ಕದ್ದು.

(2) ಲೆಕ್ಕದ ಪುಸ್ತಕಗಳ ರಿಜಿಸ್ಟರುಗಳು ಮತ್ತು ಎಲ್ಲಾ ರಸೀದಿಗಳ ಪುಟಗಳಿಗೆ ಕ್ರಮ ಸಂಖ್ಯೆಯನ್ನು ಹಾಕತಕ್ಕದ್ದು. ಎಲ್ಲ ದಾಖಲೆಗಳಿಗೂ ಪ್ರಾಧಿಕಾರ ಮೊಹರನ್ನು ಹಾಕತಕ್ಕದ್ದು. ಪ್ರತಿಯೊಂದು ಪುಸ್ತಕ ಅಥವಾ ರಿಜಿಸ್ಟರಿನ ಪುಟಗಳ ಸಂಖ್ಯೆಯನ್ನು ಆಯುಕ್ತರು ಅಥವಾ ಅವರಿಂದ ಯುಕ್ತವಾಗಿ ಅಧಿಕೃತನಾದ ಇತರೆ ಅಧಿಕಾರಿಯು ಮೊದಲನೇ ಪುಟದಲ್ಲಿ ವಾಸ್ತವಿಕ ಪರಿಶೀಲನೆ ಮಾಡಿದ ನಂತರ ಅದನ್ನು ಉಪಯೋಗಿಸುವ ಮುಂಚೆ ಲಿಖಿತದಲ್ಲಿ ಪ್ರಮಾಣೀಕರಿಸತಕ್ಕದ್ದು.

(3) ಪ್ರತಿಯೊಂದು ಹಣಕಾಸು ಒದಗಿಸುವ ಪ್ರಾಧಿಕಾರ/ ಏಜೆನ್ಸಿಗೆ ಸಂಬಂಧಿಸಿದ ಪ್ರತ್ಯೇಕ ಬ್ಯಾಂಕ್ ವಹಿವಾಟುಗಳ ಲೆಕ್ಕದ ಪುಸ್ತಕಗಳನ್ನು ಈ ಮುಂದಿನ ರೀತಿಯಲ್ಲಿ ನಿರ್ವಹಿಸತಕ್ಕದ್ದು, ಎಂದರೆ:-

(ಎ) ಪ್ರತಿಯೊಂದು ಹಿತಾಸಕ್ತಿ ಹೊಂದಿರುವ (stake holding) ಇಲಾಖೆಗೆ ಸಂಬಂಧಿಸಿದ ಎಲ್ಲ ವೋಚರುಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸತಕ್ಕದ್ದು; ಮತ್ತು

(ಬಿ) ಪ್ರತಿಯೊಂದು ಹಣಕಾಸು ಒದಗಿಸುವ ಪ್ರಾಧಿಕಾರ/ ಏಜೆನ್ಸಿಗೆ ಸಂಬಂಧಿಸಿದ ಪ್ರತ್ಯೇಕ ಬ್ಯಾಂಕ್ ಖಾತೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಬ್ಯಾಂಕ್ ಖಾತೆಗೆ ಸಂಬಂಧಪಟ್ಟ ಹಣ ರವಾನೆಗಳನ್ನು ಮತ್ತು ಸಂದಾಯಗಳನ್ನು ಆ ಬ್ಯಾಂಕ್ ಖಾತೆಗೆ ಅಥವಾ ಆ ಬ್ಯಾಂಕ್ ಖಾತೆಯಿಂದ ಮಾತ್ರ ಮಾಡತಕ್ಕದ್ದು.

(4) ಹಣಕಾಸು ವಿವರಪತ್ರಪಟ್ಟಿಗಳು ಕಾರ್ಯಕ್ಷಮತೆ, ಮತ್ತು ಪ್ರತಿಯೊಂದು ಹಣಕಾಸು ಒದಗಿಸುವ ಪ್ರಾಧಿಕಾರ/ ಏಜೆನ್ಸಿ ಮತ್ತು ಸಂಪೂರ್ಣವಾಗಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಹಣಕಾಸಿನ ಸ್ಥಿತಿಗತಿಯಕುರಿತ ಮಾಹಿತಿಯನ್ನು ಹೊಂದಿರತಕ್ಕದ್ದು.

17. ಲೆಕ್ಕದ ಪುಸ್ತಕಗಳು.- (1) ಪ್ರಾಧಿಕಾರವು, ಪ್ರತಿ ಹಣಕಾಸು ವರ್ಷಕ್ಕೆ ಪ್ರತ್ಯೇಕವಾಗಿ ಪ್ರತಿಯೊಂದು ಬ್ಯಾಂಕ್ ಖಾತೆಗೆ ಸಂಬಂಧಿಸಿದ ಅದರ ಲೆಕ್ಕದ ಪುಸ್ತಕಗಳನ್ನು ನಿರ್ವಹಿಸತಕ್ಕದ್ದು.

(2) ಪ್ರಾಧಿಕಾರವು, ಮುಂದಿನ ಲೆಕ್ಕದ ಪುಸ್ತಕಗಳನ್ನು ನಿರ್ವಹಿಸತಕ್ಕದ್ದು; ಎಂದರೆ.-

(i) ನಗದು ಪುಸ್ತಕ;

(ii) ಬ್ಯಾಂಕ್ ಪುಸ್ತಕ;

(iii) ಜರ್ನಲ್ (ದಿನಚರಿ) ಪುಸ್ತಕ; ಮತ್ತು

(iv) ಸಾಮಾನ್ಯ ಲೆಡ್ಜರ್ ಮತ್ತು ಉಪ ಲೆಡ್ಜರ್

18. ನಗದು ಪುಸ್ತಕ.- (1) ನಗದು ಪುಸ್ತಕವು ಪ್ರಾಧಿಕಾರದ ಎಲ್ಲ ನಗದು ಜಮೆಗಳಿಗಾಗಿ (ಖಜಾನೆ ಅಥವಾ ಬ್ಯಾಂಕಿನಿಂದ ನಗದು ಹಿಂಪಡೆಯುವಿಕೆಗಳು ಒಳಗೊಂಡಂತೆ) ಮತ್ತು ನಗದು ಬಟವಾಡೆಗಳು ಅಥವಾ ಹಣರವಾನೆಗಾಗಿ ಇರುವ ಮೂಲ ನಮೂದಿನ ಒಂದು ಪುಸ್ತಕವಾಗಿರುತ್ತದೆ. ಇದರಲ್ಲಿ ಪ್ರಾಧಿಕಾರದಲ್ಲಿ ಸ್ವೀಕರಿಸಿದ ಮತ್ತು ಖಜಾನೆ ಅಥವಾ ಬ್ಯಾಂಕ್ ಖಾತೆಗೆ ಜಮೆ ಮಾಡಿದ ಹಣದ ಮೌಲ್ಯದ ಚೆಕ್ಕುಗಳು ಮತ್ತು ಇತರೆ ಲಿಖಿತ ಪತ್ರಗಳನ್ನು ಸಹ ದಾಖಲು ಮಾಡಲಾಗುತ್ತದೆ. ಇದನ್ನು ನಮೂನೆ-I ರಲ್ಲಿ ಹಣಕಾಸು ಅಧಿಕಾರಿಯು ನಿರ್ವಹಿಸತಕ್ಕದ್ದು.

(2) ನಗದು ಪುಸ್ತಕವನ್ನು ದಿನದ ಕೊನೆಯಲ್ಲಿ ಗಣನೆ ಮಾಡಿದ ಒಟ್ಟು ಮೊತ್ತಗಳು ಮತ್ತು ಕೆಲಸ ನಿರ್ವಹಿಸಿದ ಮುಕ್ತಾಯದ ಶಿಲ್ಕನ್ನು ಪ್ರತಿದಿನ ಮುಕ್ತಾಯಗೊಳಿಸತಕ್ಕದ್ದು.

(3) ಕ್ಯಾಷಿಯರ್‌ನು ಎಲ್ಲ ಡ್ರಾ ಮಾಡಿದ ಮತ್ತು ಬಟವಾಡೆ ಮಾಡಿದ ನಗದಿನ ಸಂಬಂಧದಲ್ಲಿ ನಮೂನೆ-II ರಲ್ಲಿ ಡ್ರಾ ಮಾಡಿದ ಮತ್ತು ಬಟವಾಡೆ ಮಾಡಿದ ನಗದು ರಿಜಿಸ್ಟರ್ ಅನ್ನು ನಿರ್ಹಿಸತಕ್ಕದ್ದು. ಸದರಿ ರಿಜಿಸ್ಟರ್ ಅನ್ನು ಆಧರಿಸಿ, ಹಣಕಾಸು ಅಧಿಕಾರಿಯು, ಸಂದಾಯ ವೋಚರ್ ಅನ್ನು ಸಿದ್ಧಪಡಿಸತಕ್ಕದ್ದು ಮತ್ತು ನಗದು ಪುಸ್ತಕದ ಸಾಲದ ಭಾಗದಲ್ಲಿ ಅದನ್ನು ನಮೂದಿಸತಕ್ಕದ್ದು.

(4) ಹಣಕಾಸು ಅಧಿಕಾರಿಯು, ನಗದು ಪುಸ್ತಕದಲ್ಲಿನ ನಮೂದುಗಳು ಮತ್ತು ಮುಕ್ತಾಯದ ಶಿಲ್ಕನ್ನು ಪರಿಶೀಲಿಸತಕ್ಕದ್ದು ಮತ್ತು ಅಂಥ ಪರಿಶೀಲನೆಯ ಗುರುತಿಗಾಗಿ ತನ್ನ ಸಹಿಯನ್ನು ಹಾಕತಕ್ಕದ್ದು. ಹಣಕಾಸು ಅಧಿಕಾರಿಯು, ಕನಿಷ್ಠಪಕ್ಷ ವಾರಕ್ಕೊಮ್ಮೆ ನಗದು ಪುಸ್ತಕ ಶಿಲ್ಕು ಇರುವ ಕ್ಯಾಷಿಯರ್‌ನ ಕೈಯಲ್ಲಿರುವ ನಗದು ಶಿಲ್ಕನ್ನು ಸಹ ಪರಿಶೀಲಿಸತಕ್ಕದ್ದು ಮತ್ತು ನಗದು ಪುಸ್ತಕದಲ್ಲಿ ಅದಕ್ಕೆ ಸಂಬಂಧಿಸಿದ ಪ್ರಮಾಣಪತ್ರವನ್ನು ದಾಖಲಿಸತಕ್ಕದ್ದು.

19. ಬ್ಯಾಂಕ್ ಪುಸ್ತಕ.- (1) ಬ್ಯಾಂಕ್ ಪುಸ್ತಕವು ಪ್ರಾಧಿಕಾರದ ಬ್ಯಾಂಕ್ ಖಾತೆಗಳಿಗೆ ಸಂಬಂಧಿಸಿದ ವಹಿವಾಟುಗಳನ್ನು ದಾಖಲಿಸುವುದಕ್ಕಾಗಿ ಇರುವ ಮೂಲ ನಮೂದಿನ ಒಂದು ಪುಸ್ತಕವಾಗಿದೆ. ಇದನ್ನು, ಪ್ರತಿಯೊಂದು ಬ್ಯಾಂಕ್ ಖಾತೆಗೆ ಮೀಸಲಿರಿಸಿದ ಮತ್ತು _____ ಬ್ಯಾಂಕ್‌ನ ಬ್ಯಾಂಕ್ ಪುಸ್ತಕ, ಖಾತೆ ಸಂಖ್ಯೆ : ------ ರಂತೆ ಗೊತ್ತುಪಡಿಸಿದ ಪುಟದ ಸರಣಿಗಳೊಂದಿಗೆ ನಮೂನೆ-III ರಲ್ಲಿ ಹಣಕಾಸು ಅಧಿಕಾರಿಯು ನಿರ್ವಹಿಸತಕ್ಕದ್ದು. ಬ್ಯಾಂಕ್ ಪುಸ್ತಕದಲ್ಲಿ ಅಂಥ ಪ್ರತಿಯೊಂದು ಖಜಾನೆ ಅಥವಾ ಬ್ಯಾಂಕ್ ಖಾತೆಗೆ ಠೇವಣಿ ಇಡಲಾದ ಅಥವಾ ಅದರಿಂದ ಹಿಂಪಡೆಯಲಾದ ಅಥವಾ ಸಂದಾಯ ಮಾಡಿದ ಎಲ್ಲ ಮೊತ್ತವನ್ನು ನಮೂಸಿತಕ್ಕದ್ದು.

(2) ಬ್ಯಾಂಕ್ ಪುಸ್ತಕದಲ್ಲಿ, ಹಣಕಾಸು ಅಧಿಕಾರಿಯು ದೈನಿಕ ಮೊತ್ತಗಳು ಮತ್ತು ಬ್ಯಾಂಕಿನಲ್ಲಿನ ಶುಲ್ಕವನ್ನು ಖಚಿತಪಡಿಸಿಕೊಳ್ಳಲು ಗಣನೆ ಮಾಡಿದ ದಿನಕ್ಕೆ ಮುಕ್ತಾಯದ ಶಿಲ್ಕನ್ನು ಸೇರಿಸತಕ್ಕದ್ದು.

(3) ಹಣಕಾಸು ಅಧಿಕಾರಿಯು, ಪ್ರತಿಯೊಂದು ತಿಂಗಳ ಕೊನೆಯಲ್ಲಿ ಬ್ಯಾಂಕ್ ಪುಸ್ತಕ ಶಿಲ್ಕುವಿನೊಂದಿಗೆ ಬ್ಯಾಂಕ್‌ನಲ್ಲಿನ ವಾಸ್ತವಿಕ ಶಿಲ್ಕನ್ನು ಹೊಂದಾಣಿಕೆ ಮಾಡತಕ್ಕದ್ದು ಮತ್ತು ಬ್ಯಾಂಕ್ ಹೊಂದಾಣಿಕೆ ವಿವರ ಪತ್ರವನ್ನು ಸಿದ್ಧಪಡಿಸತಕ್ಕದ್ದು.

20. ಜರ್ನಲ್ (ದಿನಚರಿ) ಪುಸ್ತಕ.- (1) ನಗದು ಅಥವಾ ಬ್ಯಾಂಕ್ ಒಳಗೊಂಡಿರದ ಎಲ್ಲ ನಮೂದುಗಳನ್ನು ಖರ್ಚು ಮಾಡಲಾದ ಮತ್ತು ಜಮೆ ಮಾಡಲಾದ ಸಮುಚಿತ ಲೆಕ್ಕ ಶೀರ್ಷಿಕೆಗಳನ್ನು ಗುರುತಿಸಿ ಜರ್ನಲ್ (ದಿನಚರಿ) ಪುಸ್ತಕದಲ್ಲಿ ದಾಖಲಿಸಲಾಗುತ್ತದೆ.

(2) ಹಣಕಾಸು ಅಧಿಕಾರಿಯು ನಮೂನೆ-IV ರಲ್ಲಿ ಜರ್ನಲ್ ಪುಸ್ತಕವನ್ನು ನಿರ್ವಹಿಸತಕ್ಕದ್ದು.

21. ಜನರಲ್ ಲೆಡ್ಜರ್.- (1) ಜನರಲ್ ಲೆಡ್ಜರ್ ಒಂದು ಲೆಕ್ಕ ಪುಸ್ತಕವಾಗಿದೆ. ಅದರಲ್ಲಿ ಪ್ರತಿಯೊಂದು ಲೆಕ್ಕ ಶೀರ್ಷಿಕೆಯನ್ನು ಪ್ರತ್ಯೇಕವಾಗಿ ಆ ಲೆಕ್ಕ ಶೀರ್ಷಿಕೆಗೆ ಸಂಬಂದಪಟ್ಟಂತೆ ಮುಕ್ತಾಯದ ಶಿಲ್ಕನ್ನು ನಿರ್ಧರಿಸುವ ಖರ್ಚು ಮತ್ತು ಜಮೆ ಅಂಶಗಳೊಂದಿಗೆ ನಿರ್ವಹಿಸತಕ್ಕದ್ದು. ನಗದು ಪುಸ್ತಕ ಮತ್ತು ಬ್ಯಾಂಕ್ ಪುಸ್ತಕ ಪರಿಣಾಮಕಾರಿಯಾಗಿರುತ್ತದೆ. ನಗದು ಮತ್ತು ಬ್ಯಾಂಕ್ ಲೆಕ್ಕ ಶೀರ್ಷಿಕೆಗಳ ಲೆಡ್ಜರ್‌ಗಳು ಮತ್ತು ಈ ಲೆಕ್ಕಗಳನ್ನು ಲೆಡ್ಜರ್‌ನಲ್ಲಿ ಸೇರಿಸುವುದಿಲ್ಲ.

(2) ಹಣಕಾಸು ಅಧಿಕಾರಿಯು, ಪ್ರಾರಂಭದ ಶಿಲ್ಕು ಅಥವಾ ವ್ಯವಹಾರ ನಮೂದಾಗಿರುವ ಪ್ರತಿಯೊಂದು ಲೆಕ್ಕ ಶೀರ್ಷಿಕೆಗಾಗಿ ಇರುವ ಪ್ರತ್ಯೇಕ ಪುಟಗಳೊಂದಿಗೆ ನಮೂನೆ-IV ರಲ್ಲಿ ಸಾಮಾನ್ಯ ಲೆಡ್ಜರ್ ಅನ್ನು ನಿರ್ವಹಿಸತಕ್ಕದ್ದು.

(3) ಪ್ರತಿ ದಿನದ ಕೊನೆಯಲ್ಲಿ, ನಗದು ಪುಸ್ತಕ, ಬ್ಯಾಂಕ್ ಪುಸ್ತಕ ಮತ್ತು ಜರ್ನಲ್ ಪುಸ್ತಕದಲ್ಲಿ ನಮೂದಿಸಿದ ವಹಿವಾಟುಗಳನ್ನು ಲೆಡ್ಜರ್ನಲ್ಲಿನ ಸಮುಚಿತ ಲೆಕ್ಕ ಶೀರ್ಷಿಕೆಗಳಲ್ಲಿ ದಾಖಲಿಸತಕ್ಕದ್ದು.

22. ಸಬ್-ಲೆಡ್ಜರ್.- (1) ಸಬ್-ಲೆಡ್ಜರ್ ಪೂರಕ ಲೆಕ್ಕಗಳು, ಸಾಮಾನ್ಯ ಲೆಡ್ಜರ್ನಲ್ಲಿ ಸೃಜಿಸಿದ ನಿಯಂತ್ರಣ ಲೆಕ್ಕದ ಶಿಲ್ಕಿಗೆ ಸಮನಾಗಿರುವ ಶಿಲ್ಕುಗಳ ಮೊತ್ತದ ಸಮೂಹವಾಗಿದೆ. ವಿವರವಾದ ಮಾಹಿತಿಗಾಗಿ, ಉದಾಹರಣೆಗೆ, ಕರಾರುದಾರರು, ಸರಬರಾಜುದಾರರು ಮೊದಲಾದವರ ನಿಯಂತ್ರಣ ಲೆಕ್ಕವಾಗಿ ಗುರುತಿಸಲ್ಪಟ್ಟ ಜನರಲ್ ಲಡ್ಜರ್ನಲ್ಲಿ ಯಾವುದೇ ಲೆಕ್ಕಕ್ಕಾಗಿ ಸಬ್-ಲೆಡ್ಜರ್ ಅನ್ನು ನಿರ್ವಹಿಸಬಹುದು. ಹಣಕಾಸು ಅಧಿಕಾರಿಯು, ಜನರಲ್ ಲೆಡ್ಜರ್ ನಂತೆ ಅದೇ ರೀತಿಯಲ್ಲಿ ಉಪ-ಲೆಡ್ಜರ್ ಅನ್ನು ನಿರ್ವಹಿಸತಕ್ಕದ್ದು.

(2) ಹಣಕಾಸು ಅಧಿಕಾರಿಯು, ಬಜೆಟ್ ನಿಯಂತ್ರಣದ ಉದ್ದೇಶಕ್ಕಾಗಿ ಸಂಬಂಧಪಟ್ಟ ಬಜೆಟ್ ಶೀರ್ಷಿಕೆಗಳ ಅಡಿಯಲ್ಲಿ ಜಮೆಗಳು ಮತ್ತು ಸಂದಾಯಗಳನ್ನು ವರ್ಗೀಕರಿಸಲು, ನಮೂನೆ-VI ರಲ್ಲಿ ಜಮೆಗಳ ಮತ್ತು ಸಂದಾಯಗಳ ವರ್ಗೀಕೃತ ರಿಜಿಸ್ಟರ್ ಅನ್ನು ನಿರ್ವಹಿಸತಕ್ಕದ್ದು. ಆತನು ನಮೂನೆ-IV ರಲ್ಲಿ ಜಮೆಗಳು ಮತ್ತು ಸಂದಾಯಗಳ ಮಾಸಿಕ ವರ್ಗೀಕೃತ ಗೋಷ್ವಾರೆಯನ್ನು ಸಹ ಸಿದ್ಧಪಡಿಸತಕ್ಕದ್ದು. ಅದರಲ್ಲಿ ಆತನು ಸಂಬಂಧಪಟ್ಟ ಬಜೆಟ್ ಶೀರ್ಷಿಕೆಗಳ ಅಡಿಯಲ್ಲಿ ತಿಂಗಳಿನಲ್ಲಿ ಮಾಡಿದ ಜಮೆಗಳು ಮತ್ತು ಸಂದಾಯಗಳನ್ನು ಸಂಕ್ಷಿಪ್ತಗೊಳಿಸತಕ್ಕದ್ದು.

23. ವೋಚರ್ಸ್.- (1) ವೋಚರ್ ಎಂಬುದು ಲೆಕ್ಕ ಪುಸ್ತಕಗಳಲ್ಲಿ ಪ್ರತಿಯೊಂದು ಹಣಕಾಸು ವಹಿವಾಟಿನ ಡೆಬಿಟ್ ಮತ್ತು ಕ್ರೆಡಿಟ್ ಅಂಶಗಳನ್ನು ದಾಖಲಿಸುವುದಕ್ಕಾಗಿ ಇರುವ ಪ್ರಮಾಣಿತ ರೂಪವಾಗಿದೆ.

(2) ಬ್ಯಾಂಕ್ ಅಥವಾ ಖಜಾನೆಯಲ್ಲಿನ ನಗದು ಅಥವಾ ಚೆಕ್ ಅಥವಾ ನೇರ ಜಮೆಯ ರಸೀದಿಯನ್ನು ಒಳಗೊಂಡಿರುವ ಎಲ್ಲ ವಹಿವಾಟುಗಳಿಗೆ ಸಂಬಂದಪಟ್ಟಂತೆ ನಮೂನೆ-VIII ರಲ್ಲಿನ ರಸೀದಿ ವೋಚರ್.

(3) ನಗದು ಅಥವಾ ಚೆಕ್ ಅಥವಾ ಯಾವುದೇ ಇತರೆ ಲಿಖಿತಪತ್ರದೊಂದಾದ ಸಂದಾಯಗಳು ಅಥವಾ ಬ್ಯಾಂಕ್ ಅಥವಾ ಖಜಾನೆಗೆ ಮಾಡಿದ ನೇರ ಡೆಬಿಟ್ ಅನ್ನು ಒಳಗೊಂಡಿರುವ ಎಲ್ಲ ವಹಿವಾಟುಗಳಿಗೆ ಸಂಬಂದಪಟ್ಟಂತೆ ನಮೂನೆ-IX ರಲ್ಲಿನ ಸಂದಾಯ ವೋಚರ್.

(4) ಕೇವಲ ನಗದು ಮತ್ತು ಬ್ಯಾಂಕ್ ಖಾತೆಗಳ ನಡುವಿನ ಎಲ್ಲ ವಹಿವಾಟುಗಳಿಗೆ ಸಂಬಂದಪಟ್ಟಂತೆ ನಮೂನೆ-X ರಲ್ಲಿನ ಪ್ರತಿ ವೋಚರ್.

(5) ನಮೂನೆ-XI ರಲ್ಲಿನ ಜರ್ನಲ್ ವೋಚರ್ ಅನ್ನು ನಗದು ಅಥವಾ ಬ್ಯಾಂಕ್ ಖಾತೆಗಳನ್ನು ಒಳಗೊಳ್ಳದಿರುವ ವಹಿವಾಟುಗಳಿಗೆ ಸಂಬಂದಪಟ್ಟಂತೆ ಸಿದ್ಧಪಡಿಸತಕ್ಕದ್ದು.

(6) ಎಲ್ಲ ವೋಚರ್ಸಳನ್ನು ಹಣಕಾಸು ಅಧಿಕಾರಿಯ ಮೇಲ್ವಿಚಾರಣೆ ಮೂಲಕ ಅಥವಾ ಮೇಲ್ವಿಚಾರಣೆ ಮೇರೆಗೆ ಸಿದ್ಧಪಡಿಸತಕ್ಕದ್ದು ಮತ್ತು ವಹಿವಾಟಿಗಾಗಿ ಅಧಿಕೃತತೆ ಆಧಾರಿತ ರೂಪವಾಗಿರುವ ಎಲ್ಲ ಪೂರಕ ದಸ್ತಾವೇಜುಗಳೊಂದಿಗೆ ಲಗತ್ತಿಸತಕ್ಕದ್ದು.

24. ವೋಚರ್‌ಗೆ ಸಂಖ್ಯೆ ಹಾಕುವುದು.- (1) ಪ್ರತ್ಯೇಕವಾಗಿ ಮೋಚರ್‌ಗಳ ಪ್ರತಿಯೊಂದು ವೋಚರ್ ಪ್ರವರ್ಗಕ್ಕೆ ಸಂಖ್ಯೆಯನ್ನು ಹಾಕತಕ್ಕದ್ದು ಮತ್ತು ಪ್ರತ್ಯೇಕ ನಿಧಿಗಳಿಗೆ ವಿಭಿನ್ನವಾಗಿ ಕೋಡ್ ಮಾಡತಕ್ಕದ್ದು. ವೋಚರ್‌ಗೆ ಸಂಖ್ಯೆ ಹಾಕುವುದನ್ನು ಪ್ರತಿ ಹಣಕಾಸು ವರ್ಷದಲ್ಲಿ ಹೊಸದಾಗಿ ಪ್ರಾರಂಭಿಸತಕ್ಕದ್ದು.

(2) ವೋಚರ್‌ಗಳ ಕ್ರಮ ಸಂಖ್ಯೆಗಳನ್ನು ನಿರ್ವಹಿಸುವ ನಿಟ್ಟಿನಲ್ಲಿ, ನಮೂನೆ-XII ರಲ್ಲಿ ವೋಚರ್ ಸಂಖ್ಯೆ ರಿಜಿಸ್ಟರ್ ನಲ್ಲಿ ಪ್ರತಿ ವರ್ಷ ಪ್ರತಿಯೊಂದು ನಿಧಿಗೆ ಪ್ರತಿಯೊಂದು ವೋಚರ್ ಪ್ರಕಾರಕ್ಕೆ ಚಾಲ್ತಿ ಕ್ರಮ ಸಂಖ್ಯೆ ಪಟ್ಟಿಯನ್ನು ನಿರ್ವಹಿಸತಕ್ಕದ್ದು. ರಸೀದಿ ವೋಚರ್, ಸಂದಾಯ ವೋಚರ್, ಪ್ರತಿ ವೋಚರ್ ಮತ್ತು ಜರ್ನಲ್ ವೋಚರ್‌ಗಳಂತಹ ಪ್ರವರ್ಗವಾರು ಗೊತ್ತುಪಡಿಸಿದ ವೋಚರ್ ಸಂಖ್ಯೆ ರಿಜಿಸ್ಟರ್ ಪ್ರಕಾರ ವೋಚರ್‌ಗಳಿಗೆ ಸಂಖ್ಯೆ ಹಾಕತಕ್ಕದ್ದು.

25. ಲೆಕ್ಕಪತ್ರಗಳನ್ನು ಸರಿಪಡಿಸುವುದು.- (1) ಲೆಕ್ಕ ಪುಸ್ತಕಗಳಲ್ಲಿ ಮಾಡಿದ ನಮೂದಿನಲ್ಲಿನ ಯಾವುದೇ ಸರಿಪಡಿಸುವಿಕೆಯನ್ನು ಆಯುಕ್ತರು ಅಥವಾ ಆತನಿಂದ ಯುಕ್ತವಾಗಿ ಅಧಿಕೃತನಾದ ಅಧಿಕಾರಿಯು ಅಧಿಕೃತಗೊಳಿಸತಕ್ಕದ್ದು ಮತ್ತು ಮತ್ತೊಂದು ಸರಿಪಡಿಸುವಿಕೆ ನಮೂದಿನ ಮುಖಾಂತರ ಮಾತ್ರ ಕಾರ್ಯಗತಗೊಳಿಸತಕ್ಕದ್ದು.

(2) ನಮೂನೆಗಳು ಅಥವಾ ರಿಜಿಸ್ಟರ್‌ಗಳಲ್ಲಿನ ಯಾವುದೇ ಸರಿಪಡಿಸುವಿಕೆ ಅಥವಾ ಮಾರ್ಪಾಟು ಮಾಡಿರುವುದನ್ನು ಕೆಂಪು ಶಾಯಿಯಲ್ಲಿ (ಸರಿಪಡಿಸಲಾದ ಮೂಲ ನಮೂದಿನ ನೇರ ಒಂದು ಗೆರೆಯನ್ನು ಎಳೆಯಲಾಗುತ್ತದೆ) ಮಾಡತಕ್ಕದ್ದು ಮತ್ತು ಕಚೇರಿಯು ಮುಖ್ಯಸ್ಥ ಅಥವಾ ಅಧಿಕಾರತ ಅಧಿಕಾರಿಯ ದಿನಾಂಕ ಸಹಿತ ಚಿಕ್ಕ ರುಜುವಿನಿಂದ ದೃಢೀಕರಿಸತಕ್ಕದ್ದು. ಬಿಲ್ಲುಗಳು ಮತ್ತು ವೋಚರ್‌ಗಳಲ್ಲಿನ ಎಲ್ಲ ಸರಿಪಡಿಸುವಿಕೆಗಳು ಮತ್ತು ಮಾರ್ಪಾಟು ಮಾಡಿರುವುದನ್ನು ಬಿಲ್ಲನ್ನು ಬರೆಯುವ ಅಧಿಕಾರಿಯು ಅಥವಾ ಕ್ಲೇಮನ್ನು ಸಲ್ಲಿಸುವ ವ್ಯಕ್ತಿಯು ಅದೇ ರೀತಿಯಲ್ಲಿ ದೃಢೀಕರಿಸತಕ್ಕದ್ದು. ಆಗ ವೇತನ ಆದೇಶಗಳಲ್ಲಿ ಅವುಗಳಿಗೆ ಸಹಿ ಮಾಡುವ ಅಧಿಕಾರಿಯು ಅದೇ ರೀತಿ ದೃಢೀಕರಿಸತಕ್ಕದ್ದು. ಯಾವುದೇ ತಿದ್ದುಪಡಿಗಳನ್ನು ಮಾಡತಕ್ಕದ್ದಲ್ಲ ಮತ್ತು ತಿದ್ದುಪಡಿಗಳಿರುವ ಯಾವುದೇ ದಸ್ತಾವೇಜನ್ನು ಅಂಗೀಕರಿಸತಕ್ಕದ್ದಲ್ಲ.

(3) ರಸೀದಿಗಳಲ್ಲಿನ ಅಂಕಿಗಳಲ್ಲಿ ಯಾವುದೇ ಸರಿಪಡಿಸುವಿಕೆ ಅಥವಾ ಮಾರ್ಪಾಟು ಮಾಡುವುದನ್ನು ಮಾಡತಕ್ಕದ್ದಲ್ಲ. ರಸೀದಿಗಳ ಬರೆಯುವಲ್ಲಿ ತಪ್ಪುಗಳು ಉಂಟಾದಾಗ, ಎಲ್ಲ ಅಂಥ ರಸೀದಿಗಳ ಪ್ರತಿಗಳನ್ನು ರದ್ದುಪಡಿಸತಕ್ಕದ್ದು ಮತ್ತು ಸಂರಕ್ಷಿಸತಕ್ಕದ್ದು.

26. ಲೆಕ್ಕಕ್ಕೆ ಸೇರಿಸಲಾದ ಎಲ್ಲ ಹಣ.- (1) ಪ್ರಾಧಿಕಾರದ ಯಾರೇ ಸದಸ್ಯ, ಅಧಿಕಾರಿ ಅಥವಾ ನೌಕರನು ತನ್ನ ಪದೀಯ ಸಾಮರ್ಥ್ಯದಲ್ಲಿ ಪಕ್ಷಕಾರನಾಗಿರಲು ಎಲ್ಲ ಹಣದ ವಹಿವಾಟುಗಳನ್ನು ಯಾವುದೇ ವಿನಾಯಿತಿಯಿಲ್ಲದೆ ಲೆಕ್ಕಕ್ಕೆ ಸೇರಿಸತಕ್ಕದ್ದು. ಸ್ವೀಕರಿಸಲಾದ ಎಲ್ಲ ಹಣವನ್ನು ಸರ್ಕಾರಿ

ಖಜಾನೆಯಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕ್ ಖಾತೆಯಲಿ ಅಥವಾ, ಪ್ರಾಧಿಕಾರದ ಪೂರ್ವಾನುಮತಿಯಿಂದ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 5 ಟಿಎಆರ್ 2017, ದಿನಾಂಕ: 30.1.2017ರ ಮೂಲಕ ಸರ್ಕಾರವು ಈ ಬಗ್ಗೆ ಹೊರಡಿಸಲಾದ ಮಾರ್ಗಸೂಚಿಗಳನ್ನು ಯುಕ್ತವಾಗಿ ಪಾಲಿಸಿ ಪ್ರಾಧಿಕಾರದ ಜಮೆಗೆ ಷೆಡ್ಯುಲ್ಡ್ ಬ್ಯಾಂಕ್ ಖಾತೆಯಲ್ಲಿ ಜಮೆ ಮಾಡತಕ್ಕದ್ದು.

(2) ಆಯುಕ್ತರು ಅಥವಾ ಈ ಬಗ್ಗೆ ಪ್ರಾಧಿಕಾರವು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಯು, ಚೆಕ್ಗಳ ಮೂಲಕ ಬ್ಯಾಂಕುಗಳಿಂದ ಬಟವಾಡೆಗಾಗಿ ಬೇಕಾದ ಯಾವುದೇ ಹನವನ್ನು ಡ್ರಾ ಮಾಡಿಕೊಳ್ಳತಕ್ಕದ್ದು. ಪ್ರಾಧಿಕಾರದ ಪರವಾಗಿ ಸ್ವೀಕರಿಸಿದ ಯಾವುದೇ ಹಣದನ್ನು ಮೊದಲು ಲೆಕ್ಕಕ್ಕೆ ಸೇರಿಸದೆ ನೇರವಾಗಿ ಅದರ ವೆಚ್ಚಕ್ಕೆ ಬಳಸಿಕೊಳ್ಳತಕ್ಕದ್ದಲ್ಲ ಮತ್ತು ಖಜಾನೆ ಅಥವಾ ಬ್ಯಾಂಕುಗಳಿಗೆ ಜಮೆ ಮಾಡತಕ್ಕದ್ದು ಮತ್ತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 4-ಎ ಯಲ್ಲಿ ಹೇಳಲಾದ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.

27. ಸುಸ್ಪಷ್ಟವಾಗಿ ಇಡಲಾದ ನಗದು ನಿರ್ವಹಣೆ ಮತ್ತು ಲೆಕ್ಕಪತ್ರಗಳ ನಿರ್ವಹಣೆಗಾಗಿ ಹೊಣೆಗಾರಿಕೆಗಳು.- ಪ್ರಾಧಿಕಾರದ ಪರವಾಗಿ ನಗದು ಸಂಗ್ರಹಣೆ ಮತ್ತು ಸಂದಾಯಗಳಿಗಾಗಿ ಕ್ಯಾಷಿಯರ್ ಹೊಣೆಗಾರನಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯು ನಗದು ವಹಿವಾಟುಗಳ ಖಾತೆ ನಿರ್ವಹಣೆಗೆ ಹೊಣೆಗಾರನಾಗಿರತಕ್ಕದ್ದು. "ನಗದು" ಎಂಬ ಪದವು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 330ಕ್ಕೆ ಟಿಪ್ಪಣಿ-1 ರಲ್ಲಿ ನೀಡಲಾಗಿರುವಂಥದ್ದೇ ಅರ್ಥವನ್ನು ಹೊಂದಿರತಕ್ಕದ್ದು ಮತ್ತು ನಗದಿಗೆ ಸಂಬಂಧಪಟ್ಟ ಎಲ್ಲ ವಹಿವಾಟುಗಳನ್ನು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 330 ಕ್ಕೆ ಟಿಪ್ಪಣಿ-2, ಟಿಪ್ಪಣಿ-3, ಟಿಪ್ಪಣಿ-4 ಮತ್ತು ಟಿಪ್ಪಣಿ-5 ರಲ್ಲಿ ಹೇಳಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ನಿರ್ವಹಿಸತಕ್ಕದ್ದು.

28. ಸ್ವೀಕರಿಸಲಾದ ಹಣಕ್ಕೆ ರಸೀದಿಗಳನ್ನು ನೀಡುವುದು.- (1) ಕಚೇರಿಯಲ್ಲಿ ಸ್ವೀಕರಿಸಲಾದ ಅಥವಾ ಈ ಬಗ್ಗೆ ಅಧಿಕೃತಗೊಳಿಸಿದ ಯಾರೇ ಕ್ಷೇತ್ರ ಸಿಬ್ಬಂದಿಯು ಸ್ವೀಕರಿಸಿದ ಎಲ್ಲಾ ಹಣವನ್ನು ನಮೂನೆ-XIII ರಲ್ಲಿ ಅಥವಾ ಈ ನಿಯಮಗಳಲ್ಲಿ ನಿರ್ದಿಷ್ಟವಾಗಿ ಉಪಬಂಧಿಸಲಾದ ಯಾವುದೇ ಇತರೆ ನಮೂನೆಯಲ್ಲಿ ತ್ರಿಪ್ರತಿಯಲ್ಲಿ ರಸೀದಿ ಮೂಲಕ ಆಕ್ಷೇಪಣೆಯಿಲ್ಲದೆ ಸ್ವೀಕರಿಸತಕ್ಕದ್ದು.

(2) ರಸೀದಿಗಳಿಗೆ ಮುಂಚಿತವಾಗಿ ಸಂಖ್ಯೆಯನ್ನು ಹಾಕತಕ್ಕದ್ದು ಮತ್ತು ಎರಡೂ ಕಡೆ ಕಾರ್ಬನ್ ಕಾಗದವನ್ನು ಬಳಸಿ ಬರೆಯತಕ್ಕದ್ದು.

(3) ಮೂಲ ರಸೀದಿಯನ್ನು ಹಣ ನೀಡುವವನಿಗೆ ಕೊಡತಕ್ಕದ್ದು ಮತ್ತು ನಕಲು ಪ್ರತಿಯನ್ನು ದಾಖಲೆಗಳನ್ನು ಇಂದೀಕರಿಸುವುದಕ್ಕಾಗಿ ಅಥವಾ ಸಂಸ್ಕರಿಸುವುದಕ್ಕಾಗಿ ಸಂಬಂಧಪಟ್ಟ ಇಲಾಖೆಗೆ ಒಪ್ಪಿಸತಕ್ಕದ್ದು. ರಸೀದಿ ಪುಸ್ತಕದಲ್ಲಿ ತ್ರಿಪ್ರತಿಯನ್ನು ನಿರ್ವಹಿಸತಕ್ಕದ್ದು ಮತ್ತು ಹಣವನ್ನು ಸಂಗ್ರಹಿಸುವ ವ್ಯಕ್ತಿಯು ವಸೂಲಿ ರಿಜಿಸ್ಟರ್‌ನಲ್ಲಿ ಬರೆಯತಕ್ಕದ್ದು.

(4) ಮೂಲ ಪ್ರತಿಯು ಕಳೆದುಹೋಗಿದೆ ಎಂಬ ಕಾರಣದ ಮೇಲೆ ರಸೀದಿಯ ಯಾವುದೇ ನಕಲು ಅಥವಾ ಪ್ರತಿಯನ್ನು ನೀಡತಕ್ಕದ್ದಲ್ಲ. ಅಂಥ ದಸ್ತಾವೇಜಿನ ಯಾವುದೇ ಅಗತ್ಯತೆ ಉಂಟಾದರೆ, ನಿರ್ದಿಷ್ಟ ದಿನದಂದು ನಿರ್ದಿಷ್ಟ ಪಡಿಸಲಾದ ದಿನದಂದು ನಿರ್ದಿಷ್ಟ ಖಾತೆಯಿಂದ ನಿರ್ದಿಷ್ಟ ಮೊತ್ತವನ್ನು ನಿರ್ದಿಷ್ಟ ವ್ಯಕ್ತಿಯಿಂದ ಸ್ವೀಕರಿಸಲಾಗಿತ್ತು ಎಂಬ ಪ್ರಮಾಣಪತ್ರವನ್ನು ನೀಡಬಹುದು.

29. ಚೆಕ್‌ಗಳ ಮೂಲಕ ಪ್ರಾಧಿಕಾರ ಬಾಕಿಗಳನ್ನು ಸ್ವೀಕರಿಸುವುದು.- (೧) ಸ್ಥಳೀಯ ಬ್ಯಾಂಕುಗಳಲ್ಲಿ ಕ್ರಾಸ್ ಮಾಡಿದ ಚೆಕ್‌ಗಳನ್ನು ಅಥವಾ ಡಿಮ್ಯಾಂಡ್ ಡ್ರಾಫ್ಟ್‌ಗಳನ್ನು ಪ್ರಾಧಿಕಾರ ಬಾಕಿಗಳ ಸಂದಾಯಕ್ಕಾಗಿ ಅಥವಾ ಪ್ರಾಧಿಕಾರದೊಂದಿಗಿನ ಇತರೆ ವಹಿವಾಟುಗಳ ವ್ಯವಸ್ಥೆಗಾಗಿ ಸ್ವೀಕರಿಸಬಹುದು. ಕ್ರಾಸ್ ಮಾಡಿದ ಚೆಕ್ ಅಥವಾ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಸ್ವೀಕರಿಸಿದ ಮೇಲೆ, ನಮೂನೆ-XIII ರಲ್ಲಿ ಆ ಮೊತ್ತವು "ನಗದು ಪರಿವರ್ತನೆಗೆ ಒಳಪಟ್ಟಿದೆ" ಎಂದು ಅಲ್ಲಿ ನಿರ್ದಿಷ್ಟವಾಗಿ ಸೂಚಿಸಿ ರಸೀದಿಯನ್ನು ನೀಡತಕ್ಕದ್ದು.

(2) ಸ್ವೀಕರಿಸಲಾದ ಎಲ್ಲಾ ಚೆಕ್‌ಗಳು ಅಥವಾ ಡಿಮ್ಯಾಂಡ್ ಡ್ರಾಫ್ಟ್‌ಗಳು ಮತ್ತು ಬ್ಯಾಂಕ್ ಲಿಖಿತಪತ್ರಗಳಿಗೆ ಸಂಬಂದಪಟ್ಟಂತೆ ನಮೂನೆ-XIV ರಲ್ಲಿ ಸ್ವೀಕರಿಸಿದ ಚೆಕ್‌ಗಳ ರಿಜಿಸ್ಟರ್ ಅನ್ನು ಪ್ರಾಧಿಕಾರವು ನಿರ್ವಹಿಸತಕ್ಕದ್ದು.

30. ವಸೂಲಿಗಳ ಲೆಕ್ಕ ಹಾಕುವಿಕೆ :- ದಿನದ ಅವಧಿಯಲ್ಲಿ ವಸೂಲಿ ಮಾಡಿದ ಮೊತ್ತವನ್ನು, ಮುಂದಿನ ರಸೀದಿ ವೋಚರ್ ಮುಖಾಂತರ ಸಂಕ್ಷಿಪ್ತ ವಿವರಪತ್ರಗಳನ್ನು ಆಧರಿಸಿ ಲೆಕ್ಕ ಹಾಕತಕ್ಕದ್ದು:

(ಎ) ನಗದು ಸ್ವೀಕೃತಿಗಳ ಸಂಬಂಧದಲ್ಲಿ, ನಗದು ಪುಸ್ತಕದಲ್ಲಿ ಡೆಬಿಟ್ ಮಾಡುವ ಮೂಲಕ ಮತ್ತು ಆಯಾಯ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡುವ ಮೂಲಕ;

(ಬಿ) ಚೆಕ್ ರಸೀದಿಗಳ ಸಂಬಂಧದಲ್ಲಿ ಕೈಯ್ಯಲ್ಲಿರುವ ಚೆಕ್‌ಗಳಿಗೆ ಡೆಬಿಟ್ ಮಾಡುವ ಮೂಲಕ ಮತ್ತು ಆಯಾಯ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡುವ ಮೂಲಕ; ಮತ್ತು

(ಸಿ) ನೇರವಾಗಿ ಬ್ಯಾಂಕ್ ಅಥವಾ ಖಜಾನೆ ರಸೀದಿಗಳಿಗೆ ಸಂಬಂದಪಟ್ಟಂತೆ, ಬ್ಯಾಂಕ್ ಅಥವಾ ಖಜಾನೆ ಖಾತೆಗೆ ಡೆಬಿಟ್ ಮಾಡುವ ಮೂಲಕ ಮತ್ತು ಆಯಾಯ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡುವ ಮೂಲಕ.

31. ಹಣದ ಅಭಿರಕ್ಷೆ.- ಪ್ರಾಧಿಕಾರದ ನಗದು ಶಿಲ್ಕನ್ನು ಪ್ರತಿ ದಿನದ ಕೊನೆಯಲ್ಲಿ ಭದ್ರ ನಗದು ಕೋಶದಲ್ಲಿ ಇಡತಕ್ಕದ್ದು. ನಗದು ಕೋಶವನ್ನು ಬೇರೆ ಬೇರೆ ವಿಧಾನಗಳ ಎರಡು ಬೀಗಗಳಿಂದ ಭದ್ರಪಡಿಸತಕ್ಕದ್ದು. ಒಂದು ಬೀಗದ ಕೀ ಯನ್ನು ಆಯುಕ್ತರ ಅಭಿರಕ್ಷೆಯಲ್ಲಿಡತಕ್ಕದ್ದು ಮತ್ತು ಮತ್ತೊಂದು ಬೀಗದ ಕೀ ಯನ್ನು ಕ್ಯಾಷಿಯರ್‌ನ ಅಭಿರಕ್ಷೆಯಲ್ಲಿಡತಕ್ಕದ್ದು. ಆಯುಕ್ತರು ಹಣಕಾಸು ಅಧಿಕಾರಿಗೆ ಈ ಪ್ರಕಾರ್ಯವನ್ನು ವಹಿಸಬಹುದು.

32. ನಗದು ಮತ್ತು ಚೆಕ್‌ಗಳನ್ನು ಜಮೆ ಮಾಡುವುದು (Remittance).- (1) ಕ್ಯಾಷಿಯರ್ ಪ್ರತಿದಿನ ಬೆಳಗ್ಗೆ ಸಂಬಂದಿಸಿದ ಖಜಾನೆ ಅಥವಾ ಬ್ಯಾಂಕ್‌ಗೆ ಹಿಂದಿನ ದಿನದ ಕೊನೆಯಲ್ಲಿ ತಾನು ಹೊಂದಿರುವ ಮೊತ್ತವನ್ನು ಜಮೆ ಮಾಡತಕ್ಕದ್ದು. ಒಂದು ವೇಳೆ ಒಂದು ದಿನದಲ್ಲಿ ಎಂದಿನಂತಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ವಸೂಲಿಯಾದ, ಸಂದರ್ಭದಲ್ಲಿ ಹಣಕಾಸು ಅಧಿಕಾರಿಯು, ಅದೇ ದಿನದಂದು ಬ್ಯಾಂಕಿನಲ್ಲಿ ಅದರ ಠೇವಣಿ ಇಡುವುದಕ್ಕಾಗಿ ವಿಶೇಷ ಏರ್ಪಾಟನ್ನು ಮಾಡತಕ್ಕದ್ದು ಅಥವಾ ಪ್ರಾಧಿಕಾರ ಕಚೇರಿಯಲ್ಲಿ ಭದ್ರತೆಗಾಗಿ ವಿಶೇಷ ಏರ್ಪಾಟನ್ನು ಮಾಡತಕ್ಕದ್ದು.

(2) ಖಜಾನೆ ಅಥವಾ ಬ್ಯಾಂಕಿಗೆ ಜಮೆ ಮಾಡುವುದಕ್ಕಾಗಿ, ಕ್ಯಾಷಿಯರನು ಖಜಾನೆ ಅಥವಾ ಬ್ಯಾಂಕು ನಿಯಮಿಸಲಾದ ಅಗತ್ಯ ಚಲನ್ ಅಥವಾ ಪೇ-ಇನ್-ಸ್ಲಿಪ್ ಅನ್ನು ಭರ್ತಿ ಮಾಡತಕ್ಕದ್ದು ಮತ್ತು ಪಕ್ಕಾ ಪ್ರತಿಯಲ್ಲಿ ಸಂಬಂಧಪಟ್ಟ ಖಜಾನೆ ಅಧಿಕಾರಿ ಅಥವಾ ಬ್ಯಾಂಕ್ ಕ್ಯಾಷಿಯರ್‌ನು

ಸ್ವೀಕೃತಿಯನ್ನು ಯುಕ್ತವಾಗಿ ಪಡೆದುಕೊಂಡು ಖಜಾನೆ ಅಥವಾ ಬ್ಯಾಂಕಿಗೆ ಮೊತ್ತವನ್ನು ಜಮೆ ಮಾಡತಕ್ಕದ್ದು. ಆತನು ನಂತರ ಚಾಲ್ತಿ ಕ್ರಮ ಸಂಖ್ಯೆಯ ಅನುಸಾರ ಪ್ರತ್ಯೇಕ ಜಮೆ ಪುಸ್ತಕದಲ್ಲಿ ಪಕ್ಕಾ ಪ್ರತಿಯನ್ನು ಅಂಟಿಸತಕ್ಕದ್ದು. ಜಮೆ ಪುಸ್ತಕವನ್ನು ಕ್ಯಾಷಿಯರ್‌ನ ಅಭಿರಕ್ಷೆಯಲ್ಲಿಡತಕ್ಕದ್ದು.

(3) ವಾರದ ಆಧಾರದ ಮೇಲೆ ಜಮೆಯನ್ನು ಪರಿಶೀಲಿಸುವುದು ಹಣಕಾಸು ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

(4) ಸಾಪ್ತಾಹಿಕ ಆಧಾರದ ಮೇಲೆ ಸಂಗ್ರಹಿಸಿದ ಬ್ಯಾಂಕ್ ವಿವರಣೆ ಪತ್ರಗಳನ್ನು ಪಡೆದುಕೊಳ್ಳುವುದು ಮತ್ತು ಜಮೆಗಳು ಪೂರ್ಣವಾಗಿ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ ಎಂಬುದನ್ನು ದೃಢೀಕರಿಸುವುದು ಹಣಕಾಸು ಅಧಿಕಾರಿಯ ಜವಾಬ್ದಾರಿಯಾಗಿರತಕ್ಕದ್ದು. ಜಮೆಗಳಲ್ಲಿ ಆಗುವ ಯಾವುದೇ ವ್ಯತ್ಯಾಸವನ್ನು ಕೂಡಲೇ ಆಯುಕ್ತರಿಗೆ ವರದಿ ಮಾಡತಕ್ಕದ್ದು.

(5) ಬ್ಯಾಂಕ್‌ಗೆ ಜಮೆ ಮಾಡುವುದನ್ನು ಸ್ವೀಕರಿಸಲಾದ ಪೇ-ಇನ್-ಸ್ಲಿಪ್ ಅಥವಾ ಬ್ಯಾಂಕ್ ಚಲನ್ ಆಧಾರದ ಮೇಲೆ ಪ್ರತಿಯಾದ ವೋಚರ್ ಮುಖಾಂತರ ನಗದು ಪುಸ್ತಕ ಮತ್ತು ಬ್ಯಾಂಕ್ ಪುಸ್ತಕದಲ್ಲಿ ದಾಖಲಿಸತಕ್ಕದ್ದು.

33. ಪ್ರಾಧಿಕಾರದ ಹಣ, ಮೊದಲಾದವುಗಳ ದುರುಪಯೋಗ.- ಪ್ರಾಧಿಕಾರದ ಹಣ, ಸಾಮಗ್ರಿಗಳು ಅಥವಾ ಯಾವುದೇ ಸ್ವತ್ತಿನ ದುರುಪಯೋಗ ಕಂಡು ಬಂದಲ್ಲಿ, ಕೂಡಲೇ ಆಯುಕ್ತರು ವಿಚಾರಣೆಯನ್ನು ಪ್ರಾರಂಭಿಸತಕ್ಕದ್ದು ಮತ್ತು ದುರುಪಯೋಗದ ಸಂಗತಿಯನ್ನು ಪ್ರಾಧಿಕಾರಕ್ಕೆ ಆತನು ಕೂಡಲೇ ವರದಿ ಮಾಡತಕ್ಕದ್ದು. ವಿಷಯವನ್ನು ಸಂಪೂರ್ಣ ವಿಚಾರಣೆ ಮಾಡಿದಾಗ, ಆಯುಕ್ತರು, ದುರುಪಯೋಗಪಡಿಸಿಕೊಂಡ ಒಟ್ಟು ಹಣದ ಮೊತ್ತವನ್ನು ಯಾವ ರೀತಿಯಲ್ಲಿ ದುರುಪಯೋಗ ಮಾಡಲಾಗಿದೆ, ಎಂಬುದನ್ನು ಮತ್ತು ಹಣ, ಸಾಮಗ್ರಿಗಳು ಅಥವಾ ಸ್ವತ್ತಿನ ವೆಚ್ಚವನ್ನು ವಸೂಲಿ ಮಾಡಲು ಕೈಗೊಂಡ ಕ್ರಮಗಳು ಮತ್ತು ಅಪರಾಧಿಗಳಿಗೆ ನೀಡಲಾದ ಶಿಕ್ಷೆ ತೋರಿಸುವ ಸಂಪೂರ್ಣ ವರದಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

34. ಪ್ರಾಧಿಕಾರವು ಬಾಕಿಗಳನ್ನು ತ್ವರಿತವಾಗಿ ವಸೂಲಿ ಮಾಡುವುದು.- ಪ್ರಾಧಿಕಾರವು, ಅಧಿನಿಯಮದ 18, 19, 28, 29 ಮತ್ತು 30ನೇ ಪ್ರಕರಣಗಳ ಮೇರೆಗೆ ಕಂಡುಬರುವ ಬಾಕಿ ಮೊತ್ತವನ್ನು ವಸೂಲಿ ಮಾಡಲು ಪಡೆದುಕೊಂಡ ಡಿಕ್ರಿಗಳ ಅಮಲ್ದಾರಿಗೆ ಸಂಬಂಧಪಟ್ಟಂತೆ ನ್ಯಾಯಾಲಯಗಳಲ್ಲಿ ಸಿವಿಲ್ ವ್ಯವಹರಣೆಗಳನ್ನು ಗಮನಿಸುವುದಕ್ಕಾಗಿ ನಮೂನೆ-XV ರಲ್ಲಿ ಸಿವಿಲ್ ದಾವೆಗಳ ರಿಜಿಸ್ಟರ್ ಅನ್ನು ಮತ್ತು ನಮೂನೆ-XVI ರಲ್ಲಿ ಡಿಕ್ರಿಗಳ ರಿಜಿಸ್ಟರ್ ಅನ್ನು ಸಹ ನಿರ್ವಹಿಸತಕ್ಕದ್ದು. ಡಿಕ್ರಿಗಳನ್ನು ಅವುಗಳನ್ನು ಮಾಡಿದ ಕೂಡಲೇ, ಎಲ್ಲ ವಿವರಗಳೊಂದಿಗೆ ಅನಂತರದ ನೋಂದಣಿಯಲ್ಲಿ ನಮೂದಿಸತಕ್ಕದ್ದು. ಆಯುಕ್ತರು, ಪ್ರತಿ ತಿಂಗಳು ರಿಜಿಸ್ಟರ್‌ಗಳನ್ನು ಪರಿಶೀಲಿಸತಕ್ಕದ್ದು ಮತ್ತು ಬಾಕಿಗಳ ವಸೂಲಿಗಾಗಿ ಯುಕ್ತ ಕ್ರಮವನ್ನು ಕೈಗೊಳ್ಳಲಾಗಿದೆ ಎಂಬುದನ್ನು ಖಾತರಿಪಡಿಸಲು ಪರಿಶೀಲನೆಯ ಗುರುತಾಗಿ ಅವುಗಳಿಗೆ ಚಿಕ್ಕ ರುಜುವನ್ನು ಹಾಕತಕ್ಕದ್ದು.

35. ವೆಚ್ಚದ ಋಣಭಾರ ಹೊರಿಸುವುದು.- ಪ್ರಾಧಿಕಾರದ ನಿಧಿಗೆ ಅಂತಿಮವಾಗಿ ಯಾವುದೇ ವೆಚ್ಚವನ್ನು ಹೊರಿಸತಕ್ಕದ್ದಲ್ಲ ಮತ್ತು ಪ್ರಾಧಿಕಾರವು ಋಣಭಾರವನ್ನು ಅಂಗೀಕರಿಸದೆ ಯಾವುದೇ ಹೊಂದಾಣಿಕೆಯನ್ನು ಮಾಡತಕ್ಕದ್ದಲ್ಲ;

36. ವೆಚ್ಚದ ಸಂಚಯ.- (1) ಪ್ರಾಧಿಕಾರ ನಿಧಿಗೆ ಸಂಬಂಧಿಸಿದ ಪ್ರತಿಯೊಂದು ಕ್ಲೇಮನ್ನು ಕಾರ್ಯಾದೇಶ ಅಥವಾ ಪೂರೈಕೆ ಆದೇಶ ಅಥವಾ ಕೋರಿಕೆ ಪತ್ರಕ್ಕೆ ಸಂಬಂದಪಟ್ಟಂತೆ ಪರಿಶೀಲನೆ ಮಾಡಿದ ನಂತರ, ಅದು ಕ್ರಮವಾಗಿದ್ದರೆ ಮತ್ತು ಜರ್ನಲ್ (Journal) ವೋಚರ್ ಮೂಲಕ ಪ್ರಾಪ್ತವಾಗಿದ್ದರೆ ಅಂಗೀಕರಿಸತಕ್ಕದ್ದು.

(2) ಸಿಬ್ಬಂದಿ ವೆಚ್ಚಗಳು ಹಾಗೂ ಸರಕುಗಳ ಸಂಗ್ರಹಣೆಗೆ ಮತ್ತು ಅಥವಾ ಸೇವೆಗಳಿಗೆ ಸಂಬಂಧಿಸಿದ ಬಿಲ್ಲುಗಳ ಸಂಬಂಧದಲ್ಲಿ, ಕಾರ್ಯಾದೇಶ ಅಥವಾ ಪೂರೈಕೆ ಆದೇಶವನ್ನು ಸಮರ್ಥಿಸುವ ನಂತರದ ಸಂದರ್ಭಗಳಲ್ಲಿ ಬಿಲ್ಲಿನ ಅನುಮೋದನೆಯಾದ ಮೇಲೆ ಸಂಚಯವನ್ನು ಪೂರೈಸತಕ್ಕದ್ದು.

(3) ಇತರೆ ರಾಜಸ್ವ ವೆಚ್ಚಗಳನ್ನು, ಪ್ರತಿ ಅರ್ಧ ವಾರ್ಷದ ಮುಕ್ತಾಯದಲ್ಲಿ ಸಂದಾಯದ ಮೇಲೆ ಮತ್ತು ಇನ್ನೂ ಬಾಕಿ ಇರುವವುಗಳ ಪ್ರಾಪ್ತವಾದ ಮೇಲೆ ಲೆಕ್ಕ ಮಾಡಬಹುದು.

37. ಪ್ರಾಧಿಕಾರದ ನಿಧಿಗೆ ಸಂಬಂಧಿಸಿದ ಕ್ಲೇಮುಗಳು.- (1) ಪ್ರಾಧಿಕಾರದ ನಿಧಿಗೆ ಸಂಬಂದಪಟ್ಟಂತೆ ಯಾವುದೇ ಕ್ಲೇಮನ್ನು ಹೊಂದಿರುವ ಪ್ರತಿಯೊಬ್ಬ ವ್ಯಕ್ತಿಯು, ಪ್ರಾಧಿಕಾರದ ಕಚೇರಿಯಲ್ಲಿ ಬಿಲ್ಲನ್ನು ಮಂಡಿಸಪಡಿಸತಕ್ಕದ್ದು. ಸಾಧ್ಯವಿರುವ ಕಡೆಗಳಲ್ಲೆಲ್ಲ, ಅಂಥ ಬಿಲ್ಲು ಆ ಉದ್ದೇಶಕ್ಕಾಗಿ ಒದಗಿಸಿದ ನಮೂನೆಯಲ್ಲಿರತಕ್ಕದ್ದು ಮತ್ತು ಕ್ಲೇಮುದಾರನು ಅದರಲ್ಲಿ ದಿನಾಂಕ ಹಾಗೂ ಸಹಿ ಹಾಕತಕ್ಕದ್ದು ಮತ್ತು ಅಗತ್ಯವಿರುವಾಗ ಗುರುತು ಹಾಕತಕ್ಕದ್ದು.

(2) ಕ್ಲೇಮುದಾರನು ಆ ಉದ್ದೇಶಕ್ಕಾಗಿ ಒದಗಿಸಿದ ನಮೂನೆಯಿಂದ ಬೇರೆ ಬೇರೆ ನಮೂನೆಯಲ್ಲಿ ಬಿಲ್ಲನ್ನು ಹಾಜರುಪಡಿಸಿದಲ್ಲಿ, ಸರಿಯಾದ ನಮೂನೆಯಲ್ಲಿ ಪ್ರತ್ಯೇಕ ಬಿಲ್ಲನ್ನು, ವೆಚ್ಚವನ್ನು ಭರಿಸುವ ಅಧಿಕಾರಿ ಅಥವಾ ಸಿಬ್ಬಂದಿಯು ಸಿದ್ಧಪಡಿಸತಕ್ಕದ್ದು ಮತ್ತು ಕ್ಲೇಮುದಾರನ ಬಿಲ್ಲು ಅಥವಾ ಸರಕು ಪಟ್ಟಿಯನ್ನು ಪೂರಕ ದಸ್ತಾವೇಜಾಗಿ ಅದಕ್ಕೆ ಲಗತ್ತಿಸತಕ್ಕದ್ದು.

(3) ಖಾಯಂ ಮುಂಗಡಕ್ಕೆ ಸಂಬಂಧಪಟ್ಟಂತೆ ಸಂದಾಯ ಮಾಡಿದ ಬಿಲ್ಲನ್ನು ಹೊರತುಪಡಿಸಿ ಪ್ರಾಧಿಕಾರಕ್ಕೆ ಸಂಬಂಧಿಸಿದ ಕ್ಲೇಮಿಗಾಗಿ ಹಾಜರುಪಡಿಸಿದ ಬಿಲ್ಲುಗಳನ್ನು ಸಂಬಂಧಪಟ್ಟ ವಿಭಾಗಗಳಲ್ಲಿ ಸ್ವೀಕರಿಸತಕ್ಕದ್ದು ಮತ್ತು ನಮೂನೆ-XVII ರಲ್ಲಿ ಕಚೇರಿ ವಿಭಾಗಗಳಲ್ಲಿ ಸ್ವೀಕರಿಸಿರುವುದನ್ನು ಬಿಲ್ಲುಗಳ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು.

(4) ಪ್ರತಿಯೊಂದು ಹಿತಾಸಕ್ತಿದಾರ ಇಲಾಖೆಗಳಿಗೆ ಸಂಬಂಧಿಸಿದ ಕಚೇರಿ ವಿಭಾಗಗಳು ಬಿಲ್ಲುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸತಕ್ಕದ್ದು ಮತ್ತು ಕ್ಲೇಮುಗಳು ಕ್ರಮಬದ್ಧವಾಗಿದ್ದರೆ ಮತ್ತು ಸಕ್ಷಮ ಪ್ರಾಧಿಕಾರದ ಮಂಜೂರಾತಿಯನ್ನು ಬೆಂಬಲಿಸುತ್ತಿದ್ದರೆ, ಅಂಥ ಬಿಲ್ಲುಗಳನ್ನು ನಮೂನೆ-XVIII ರಲ್ಲಿ ಯುಕ್ತವಾಗಿ ಸಿದ್ಧಪಡಿಸಿದ ಸಂದಾಯ

ಆದೇಶದೊಂದಿಗೆ ಲೆಕ್ಕ ವಿಭಾಗಕ್ಕೆ ಕಳುಹಿಸತಕ್ಕದ್ದು. ನಿಯಮಿಸಲಾದ ಅಗತ್ಯ ಪ್ರಮಾಣ ಪತ್ರಗಳನ್ನು ಸಂದಾಯ ಆದೇಶದಲ್ಲಿ ಮತ್ತು ಲೆಕ್ಕ ವಿಭಾಗಕ್ಕೆ ಬಿಲ್ಲುಗಳನ್ನು ಕಳುಹಿಸುವ ಮುಂಚೆ ಕಚೇರಿ ವಿಭಾಗದ ಅಧಿಕಾರಿ ಅಥವಾ ಪ್ರಭಾರದಲ್ಲಿರುವ ಸಿಬ್ಬಂದಿಯು ಬಿಲ್ಲುಗಳಲ್ಲಿ ದಾಖಲಿಸತಕ್ಕದ್ದು. ಎಲ್ಲ ಬಿಲ್ಲುಗಳ ವಿವರಗಳು, ಅಂಗೀಕಾರಾರ್ಹತೆ, ಕಡಿತಗಳು ಮತ್ತು ಇತರೆ ವಿವರಗಳನ್ನು ಕಡತದ ಟಿಪ್ಪಣಿ ಹಾಳೆಯಲ್ಲಿ ಸಹ ನಮೂದಿಸತಕ್ಕದ್ದು.

(5) ಸಂದಾಯ ಆದೇಶವನ್ನು ಸಿದ್ಧಪಡಿಸುವ ಮತ್ತು ರವಾನಿಸುವ ಅಧಿಕಾರಿ ಮತ್ತು/ಅಥವಾ ಸಿಬ್ಬಂದಿಯು, ಬಿಲ್ಲನ್ನು ಪೂರ್ಣಗೊಳಿಸಿ ಮತ್ತು ವೆಚ್ಚದ ಸ್ವರೂಪಕ್ಕೆ ಸಂಬಂಧಿಸಿದ ಸಾಕಷ್ಟು ಮಾಹಿತಿಯನ್ನು ನೀಡಿರುವುದನ್ನು ಎಂದು ಖಚಿತಪಡಿಸಿಕೊಳ್ಳುವುದು ವೈಯಕ್ತಿಕ ಹೊಣೆಯಾಗಿರತಕ್ಕದ್ದು.

(6) ನಮೂನೆ-XIX ರಲ್ಲಿ ಲೆಕ್ಕ ವಿಭಾಗವು ಸ್ವೀಕರಿಸಿ ನಿರ್ವಹಿಸಲಾದ ಬಿಲ್ಲುಗಳ ರಿಜಿಸ್ಟರ್‌ನಲ್ಲಿ ಬಿಲ್ಲುಗಳ ನಮೂದನ್ನು ಮಾಡಿದ ತರುವಾಯ, ಹಣಕಾಸು ಅಧಿಕಾರಿಯು, ಪ್ರಶ್ನಿತ ಬಿಲ್ಲುಗಳನ್ನು ಪಾವತಿ ಮಾಡಲು ಬಜೆಟ್ ಏರ್ಪಾಟಿನಲ್ಲಿ ನಿಗದಿ ಮಾಡಿದ ಹಣದ ಅಂಗೀಕಾರಾರ್ಹತೆ, ಮಂಜೂರಾತಿ ಮತ್ತು ಲಭ್ಯತೆಗೆ ಸಂಬಂಧಿಸಿದ ಬಿಲ್ಲುಗಳನ್ನು ಪರಿಶೀಲಿಸತಕ್ಕದ್ದು. ಬಿಲ್ಲುಗಳು ಎಲ್ಲ ಷರತ್ತುಗಳನ್ನು ಪೂರೈಸಿದ್ದರೆ, ಆತನು ಅನುಮೋದನೆಗಾಗಿ ಸಂದಾಯ ಆದೇಶದೊಂದಿಗೆ ಟಿಪ್ಪಣಿ ಹಾಳೆಯಲ್ಲಿ ಯುಕ್ತ ಟಿಪ್ಪಣಿ ಬರೆದು ಆಯುಕ್ತರಿಗೆ ಬಿಲ್ಲುಗಳನ್ನು ಒಪ್ಪಿಸತಕ್ಕದ್ದು. ಬಿಲ್ಲುಗಳಲ್ಲಿ ಯಾವುದೇ ನ್ಯೂನತೆಗಳನ್ನು ಗಮನಿಸಿದಲ್ಲಿ, ಹಣಕಾಸು ಅಧಿಕಾರಿಯು, ಸಂದಾಯಕ್ಕಾಗಿ ಬಿಲ್ಲುಗಳನ್ನು ಪುನಃ ಸಲ್ಲಿಸುವ ಮುಂಚೆ ನ್ಯೂನತೆಗಳು ಮತ್ತು ನ್ಯೂನತೆಗಳ ಸರಿಪಡಿಸುವಿಕೆಯು ಅಗತ್ಯವಾಗಿರುವುದನ್ನು ಸೂಚಿಸಿ ಸಂಬಂಧಪಟ್ಟ ಕಚೇರಿ ವಿಭಾಗಕ್ಕೆ ಅಂಥ ಬಿಲ್ಲುಗಳನ್ನು ಹಿಂತಿರುಗಿಸತಕ್ಕದ್ದು.

(7) ಆಯುಕ್ತರು, ಸಂದಾಯಕ್ಕಾಗಿ ಬಿಲ್ಲುಗಳನ್ನು ಅನುಮೋದಿಸಿದಾಗ, ಆತನು, ಸಂದಾಯ ಆದೇಶದ ತಳದಲ್ಲಿ ಮತ್ತು ಕಡತದ ಟಿಪ್ಪಣಿ ಹಾಳೆಯಲ್ಲಿ ಸಹ ಅನುಮೋದನೆ ಆದೇಶವನ್ನು ಮಾಡತಕ್ಕದ್ದು ಮತ್ತು ಸಂದಾಯಕ್ಕಾಗಿ ಹಣಕಾಸು ಅಧಿಕಾರಿಗೆ ಕೂಡಲೇ ಕಡತದೊಂದಿಗೆ ಬಿಲ್ಲು ಮತ್ತು ಸಂದಾಯ ಆದೇಶವನ್ನು ಕಳುಹಿಸತಕ್ಕದ್ದು.

(8) ಹಣಕಾಸು ಅಧಿಕಾರಿಯು, ಪ್ರಾಪ್ತವಾಗಬಹುದಾದ ವೆಚ್ಚದ ಸಂದರ್ಭದಲ್ಲಿ ಜರ್ನಲ್ ವೋಚರ್ ಅನ್ನು ಸಿದ್ಧಪಡಿಸತಕ್ಕದ್ದು.ಆತನು,ಸಂದಾಯ ಮಾಡುವ ಸಮಯದಲ್ಲಿ ಪ್ರಾಪ್ತವಾಗಬಹುದಾದ ಮತ್ತು ಪ್ರಾಪ್ತವಾಗದಿರುವ ಎರಡಕ್ಕೂ ಸಂದಾಯ ವೋಚರ್ ಅನ್ನು ಸಿದ್ಧಪಡಿಸತಕ್ಕದ್ದು. ಆತನು, ಬಿಲ್ಲು ಮತ್ತು ಸಂದಾಯ ಆದೇಶದ ಪ್ರಕಾರ ಸಂದಾಯವಾಗಬೇಕಾದ ಮೊತ್ತಕ್ಕೆ ಚೆಕ್ ಅನ್ನು ಸಹ ಸಿದ್ಧಪಡಿಸತಕ್ಕದ್ದು ಮತ್ತು ಅವುಗಳನ್ನು ಸಹಿಗಾಗಿ ಆಯುಕ್ತರಿಗೆ ಅಥವಾ ಆತನಿಂದ ಅಧಿಕೃತನಾದ ಅಧಿಕಾರಿಗೆ ಸಲ್ಲಿಸತಕ್ಕದ್ದು.

(9) ಯುಕ್ತವಾಗಿ ಸಹಿ ಮಾಡಿದ ಚೆಕ್ ಅನ್ನು ಸ್ವೀಕರಿಸಿದ ಮೇಲೆ, ಹಣಕಾಸು ಅಧಿಕಾರಿಯು, ಸಂದಾಯ ವೋಚರ್‌ನಲ್ಲಿ ಸಹಿಯನ್ನು ಪಡೆದಿಕೊಂಡ ತರುವಾಯ ಸಂಬಂಧಪಟ್ಟ ಪಕ್ಷಕಾರನಿಗೆ ಅದನ್ನು ನೀಡತಕ್ಕದ್ದು ಅಥವಾ ಸಂಬಂಧಪಟ್ಟ ಪಕ್ಷಕಾರನ ಬ್ಯಾಂಕ್ ಖಾತೆಗೆ ಅದನ್ನು ಕೂಡಲೇ ಜಮೆ ಮಾಡತಕ್ಕದ್ದು.

(10) ಪ್ರಾಧಿಕಾರಕ್ಕೆ ಬರಬೇಕಾದ ವಸೂಲಿಗಳು ಅಥವಾ ಕ್ಲೇಮುಗಳ ಹೊಂದಾಣಿಕೆಗಳನ್ನು ಬಿಲ್ಲುಗಳು ಒಳಗೊಂಡಿದ್ದಾಗ, ಕಡತದ ಟಿಪ್ಪಣಿ ಹಾಳೆಯಲ್ಲಿ ಸಂದಾಯ ಆದೇಶ ಮತ್ತು ಬರೆದ ದಾಖಲೆಗಳು ಕ್ಲೇಮಿನ ಒಟ್ಟು ಮೊತ್ತ, ವಸೂಲಿ ಮಾಡಿದ ಅಥವಾ ಹೊಂದಾಣಿಕೆಮಾಡಿದ ಮೊತ್ತ ಮತ್ತು ಕ್ಲೇಮುದಾರನಿಗೆ ಸಂದಾಯವಾಗಬೇಕಾದ ನಿವ್ವಳ ಮೊತ್ತವನ್ನು ಸೂಚಿಸತಕ್ಕದ್ದು. ಹಣಕಾಸು ಅಧಿಕಾರಿಯು, ಬಿಲ್ಲುಗಳಲ್ಲಿ ಮಾಡಿದ ವಸೂಲಿ ಅಥವಾ ಹೊಂದಾಣಿಕೆಗಾಗಿ ಅಗತ್ಯ ಜರ್ನಲ್ ವೋಚರ್‌ಗಳನ್ನು ನೀಡತಕ್ಕದ್ದು ಮತ್ತು ಚೆಕ್ ಅನ್ನು ನಿವ್ವಳ ಮೊತ್ತಕ್ಕಾಗಿ ಮಾತ್ರ ನೀಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

(11) ಬಿಲ್ಲು ಮತ್ತು ಸಂಬಂಧಪಟ್ಟ ಬೆಲೆ ಪಟ್ಟಿ ಎರಡಕ್ಕೂ ಸಂದಾಯವಾದ ತರುವಾಯ, ಸಂದಾಯವಾಗಿದೆ ಮತ್ತು ರದ್ದಾಗಿದೆ' ಎಂದು ಪದಗಳಿಂದ ಹಿಂಬರಹ ಮಾಡತಕ್ಕದ್ದು. ಹಣಕಾಸು ಅಧಿಕಾರಿಯು, ಬಿಲ್ಲು, ಬೆಲೆಪಟ್ಟಿಯ ಮುಂಭಾಗದಲ್ಲಿ ಮತ್ತು ಕಡತದ ಟಿಪ್ಪಣಿ ಹಾಳೆಯಲ್ಲಿ ಸಂದಾಯ ವಿವರಗಳನ್ನು ದಾಖಲಿಸತಕ್ಕದ್ದು. ಆತನು, ಸಂಬಂಧಿಸಿದ ವಿಭಾಗಕ್ಕೆ ಬಿಲ್ಲು ಮತ್ತು ಬೆಲೆಪಟ್ಟಿಯ ಮೇಲೆ ಸಂದಾಯವಾಗಿದೆ ಮತ್ತು ರದ್ದಾಗಿದೆ' ಎಂಬ ಹಿಂಬರಹದೊಂದಿಗೆ ಕಡತವನ್ನು

ಹಿಂತಿರುಗಿಸತಕ್ಕದ್ದು. ಹಣಕಾಸು ಅಧಿಕಾರಿಯು ಜರ್ನಲ್ ಮತ್ತು/ಅಥವಾ ಸಂದಾಯ ವೋಚರ್‌ಗೆ ಸಮರ್ಥಿತವಾಗಿ "ಸಂದಾಯ ಆದೇಶ" ವನ್ನು ಇಟ್ಟೃರತಕ್ಕದ್ದು.

38. ಕ್ಲೇಮುಗಳ ಇತ್ಯರ್ಥ.- ವಹಿಸಿಕೊಂಡ ಎಲ್ಲಾ ಹೊಣೆಗಾರಿಕೆಗಳನ್ನು ಸಾಧ್ಯವಾದಷ್ಟೂ ಕಡಿಮೆ ವಿಳಂಬದಿಂದ ನಿರ್ವಹಿಸತಕ್ಕದ್ದು. ತಡವಾದ ಕ್ಲೇಮುಗಳಿಗೆ ವಿಳಂಬವನ್ನು ವಿವರಿಸುವ ಮೂಲಕ ಪ್ರಾಧಿಕಾರದ ಮಂಜೂರಾತಿಯೊಂದಿಗೆ ಮಾತ್ರ ಸಂದಾಯ ಮಾಡತಕ್ಕದ್ದು.

39. ಪ್ರಾಧಿಕಾರ ನಿಧಿಗಳಿಂದ ಸಂದಾಯಗಳು.- ಪ್ರಾಧಿಕಾರ ನಿಧಿಗಳಿಂದ ಮಾಡುವ ಎಲ್ಲ ಸಂದಾಯಗಳನ್ನು ಆಯುಕ್ತರು ಮತ್ತು ಅಪರ ಆಯುಕ್ತರು ಜಂಟಿಯಾಗಿ ಸಹಿ ಮಾಡಿದ ಚೆಕ್‌ಗಳ ಮೂಲಕ ಮಾಡತಕ್ಕದ್ದು:

ಪರಂತು, ಐದು ನೂರು ರೂಪಾಯಿಗಳಿಗಿಂತ ಕಡಿಮೆಯಿರುವ ಸಂದಾಯಗಳನ್ನು ನಗದುರೂಪದಲ್ಲಿ ಸಂದಾಯ ಮಾಡತಕ್ಕದ್ದು.

40. ಸಹಿಯ ಅಗತ್ಯತೆ.- (1) ರಬ್ಬರ್ ಅಥವಾ ಸ್ಟ್ಯಾಂಪ್ ಪಡಿಯಚ್ಚಿನೊಂದಿಗೆ ಸಹಿ ಮಾಡಿದ ಬಿಲ್ಲು ಅಥವಾ ಕ್ಲೇಮಿಗಾಗಿ ಯಾವುದೇ ಹಣವನ್ನು ಸಂದಾಯ ಮಾಡತಕ್ಕದ್ದಲ್ಲ. ವೋಚರ್‌ನಲ್ಲಿ ವೇತನ ಪಾವತಿಯನ್ನು ಗುರುತು ಅಥವಾ ಮೊಹರು ಅಥವಾ ಹೆಬ್ಬೆರಳಿನ ಗುರುತಿನ ಮೂಲಕ ನೀಡಿದಾಗ, ಇದಕ್ಕೆ ಗೊತ್ತಿರುವ ಯಾರಾದರೊಬ್ಬ ವ್ಯಕ್ತಿಯಿಂದ ದೃಢೀಕರಿಸತಕ್ಕದ್ದು. ಕನ್ನಡ ಅಥವಾ ಇಂಗ್ಲಿಷ್ ಭಾಷೆಯಲ್ಲಿಲ್ಲದ ಬೇರೆ ಭಾಷೆಗಳಲ್ಲಿ ಪಡೆದುಕೊಂಡ ಸಹಿಗಳನ್ನು ಯಾವಾಗಲೂ ಲಿಪ್ಯಂತರ ಮಾಡತಕ್ಕದ್ದು.

(2) ವಿದ್ಯುನ್ಮಾನ ನಮೂನೆಯನ್ನು ಒಳಗೊಂಡಂತೆ ಅಧಿಕೃತ ಅಧಿಕಾರಿಯ ಮುದ್ರೆಯಿರುವ ಸಹಿಯೊಂದಿಗೆ ಅಂಟಿಸಿರುವ ಬಿಲ್ಲುಗಳು ಅಥವಾ ಸಾಮಾನ್ಯವಾಗಿ ನಿಯಮಿಸಲಾದ ಬಿಲ್ಲುಗಳು ಮತ್ತು ಅಂಗೀಕೃತ ನಮೂನೆಯ, ಬಿಲ್ಲುಗಳನ್ನು ಮುಂದಿನ ಇಲಾಖೆಗಳು ಮತ್ತು ಸಂಸ್ಥೆಗಳು ಸಲ್ಲಿಸಿದ ಬಿಲ್ಲುಗಳನ್ನು ಅನ್ಯಥಾ ಕ್ರಮವಾಗಿದ್ದರೆ ಸಂದಾಯಕ್ಕಾಗಿ ಸ್ವೀಕರಿಸಬಹುದು.

(ಎ) ಸೇವಾದಾತನಿಂದ ಸ್ವೀಕರಿಸಿದ ದೂರಸಂಪರ್ಕ ಅಥವಾ ಗುತ್ತಿಗೆ ಪಡೆದ ಸಂಪರ್ಕಗಳು ಅಥವಾ ಇಂಟರ್‌ನೆಟ್ ಸಂಪರ್ಕಕ್ಕೆ ಸಂಬಂಧಿಸಿದ ಬಿಲ್ಲುಗಳು;

(ಬಿ) ವಿದ್ಯುತ್ ಸರಬರಾಜು ಕಂಪನಿಗಳ ಅಥವಾ ಆ ಪ್ರದೇಶದ ವಿದ್ಯುತ್ ಪೂರೈಕೆ ಮಾಡುವಂಥ ಸಂಸ್ಥೆಗಳ ವಿದ್ಯುಚ್ಛಕ್ತಿ ಬಿಲ್ಲುಗಳು; ಮತ್ತು

(ಸಿ) ಎಲ್ಲ ತೆರಿಗೆಗಳು, ನೀರು ಮತ್ತು ವಿದ್ಯುಚ್ಛಕ್ತಿ ವೆಚ್ಚಗಳು.

41. ಖಾಯಂ ಮುಂಗಡದಿಂದ ನಗದು ಸಂದಾಯ.- ಬಿಲ್ಲು ಅಥವಾ ಬೆಲೆಪಟ್ಟಿಯನ್ನು ಖಾಯಂ ಮುಂಗಡದಿಂದ ನಗದುರೂಪದಲ್ಲಿ ಸಂದಾಯ ಮಾಡಬೇಕಾದರೆ, ಖಾಯಂ ಮುಂಗಡವನ್ನು ಹೊಂದಿರುವ ಅಧಿಕಾರಿಯು ಮೊತ್ತವನ್ನು ಸಂದಾಯ ಮಾಡತಕ್ಕದ್ದು ಮತ್ತು ನಗದಾಗಿ ಸಂದಾಯ ಮಾಡಿದ ನಂತರ ಎದ್ದುಕಾಣುವ ರೀತಿಯಲ್ಲಿ "ನಗದಿನಲ್ಲಿ ಸಂದಾಯ ಮಾಡಲಾಗಿದೆ" ಎಂಬ ಪದಗಳಿಂದ ವೋಚರ್ ಮತ್ತು ಬಿಲ್ಲು ಅಥವಾ ಬೆಲೆಪಟ್ಟಿಯ ಮೇಲೆ ಮುದ್ರೆ ಹಾಕತಕ್ಕದ್ದು. ಖಾಯಂ ಮುಂಗಡದ ಅನುದಾನವನ್ನು ಮಂಜೂರು ಮಾಡುವುದು, ಅದನ್ನು

ಇಡುವುದು ಮತ್ತು ನಿರ್ವಹಣೆಯು ಸಾದಿಲ್ವಾರು ವೆಚ್ಚದ ಕೈಪಿಡಿ, 1958 ರಲ್ಲಿ ಹೇಳಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿರತಕ್ಕದ್ದು.

42. ಚೆಕ್ ಸಂದಾಯಗಳು.- ಮೊತ್ತವನ್ನು ಚೆಕ್ ಮೂಲಕ ಸಂದಾಯ ಮಾಡಿದರೆ, ಬಿಲ್ಲು ಮತ್ತು ಬೆಲೆಪಟ್ಟಿಗೆ ಎದ್ದುಕಾಣುವ ರೀತಿಯಲ್ಲಿ "ಚೆಕ್ ಸಂಖ್ಯೆ ------ ರ ಮೂಲಕ ಸಂದಾಯ ಮಾಡಲಾಗಿದೆ" ಎಂದು ಮುದ್ರೆ ಹಾಕತಕ್ಕದ್ದು ಮತ್ತು ಚೆಕ್ ಅನ್ನು ಹಣಕಾಸು ಅಧಿಕಾರಿಯು ಬರೆಯತಕ್ಕದ್ದು.

43. ಚೆಕ್ ಪುಸ್ತಕಗಳ ಮೇಲಿನ ನಿಯಂತ್ರಣ.- (1) ಚೆಕ್ ಪುಸ್ತಕಗಳನ್ನು ಯಾವಾಗಲೂ ಬೀಗ ಹಾಕಿಟ್ಟಿರತಕ್ಕದ್ದು ಮತ್ತು ಕೀಲಿಯನ್ನು ಆಯುಕ್ತರ ಅಭಿರಕ್ಷೆಯಲ್ಲಿಟ್ಟಿರತಕ್ಕದ್ದು. ಅವರು ಅದನ್ನು ನೀಡುವಾಗ. ಪದ ಮುಕ್ತಗೊಳಿಸುವ ಅಧಿಕಾರಿಯು ನೀಡಲಾದ ಚೆಕ್‌ಗಳ ಸಂಖ್ಯೆಗೆ ಸ್ವೀಕೃತಿಯನ್ನು ತೆಗೆದುಕೊಳ್ಳತಕ್ಕದ್ದು. ಪದಮುಕ್ತಗೊಳಿಸುವ ಅಧಿಕಾರಿಯ ಮಾದರಿ ಸಹಿಯನ್ನು ಅದೇ ಸಮಯದಲ್ಲಿ, ಪದಮುಕ್ತ ಅಧಿಕಾರಿಯು ಸಹಿ ಮಾಡಿ ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ರವಾನಿಸತಕ್ಕದ್ದು.

(2) ಅಧಿಕಾರಿಯು, ಬ್ಯಾಂಕಿನಿಂದ ಹೊಸ ಚೆಕ್ ಪುಸ್ತಕವನ್ನು ಸ್ವೀಕರಿಸಿದಾಗ, ಆತನು ಅದರಲ್ಲಿರುವ ಚೆಕ್ ಹಾಳೆಗಳನ್ನು ಲೆಕ್ಕ ಮಾಡತಕ್ಕದ್ದು ಮತ್ತು ಈ ಚೆಕ್ ಪುಸ್ತಕವು ----- ಹಾಳೆಗಳನ್ನು ಒಳಗೊಂಡಿದೆ ಎನ್ನುವ ಪ್ರಮಾಣೀಕರಣವನ್ನು ಚೆಕ್ ಪುಸ್ತಕದ ಹಿಂಭಾಗದಲ್ಲಿ ನಮೂದಿಸತಕ್ಕದ್ದು.

(3) ಆಯುಕ್ತರು, ದೈನಂದಿನ ಆಧಾರದ ಮೇಲೆ ಉಪಯೋಗಿಸದ ಚೆಕ್‌ಗಳನ್ನು ಪರಿಶೀಲಿಸತಕ್ಕದ್ದು ಮತ್ತು ಎಲ್ಲ ಉಪಯೋಗಿಸದ ಚೆಕ್‌ಗಳು ಪುಸ್ತಕದಲ್ಲಿವೆ ಎಂದು ಮತ್ತು ಯಾವುದನ್ನೂ ರಹಸ್ಯವಾಗಿ ಉದ್ದೃತಗೊಳಿಸಲಾಗಿಲ್ಲ ಎಂಬುದನ್ನು ಸ್ವತಃ ಮನವರಿಕೆ ಮಾಡಿಕೊಳ್ಳತಕ್ಕದ್ದು.

44. ಚೆಕ್‌ಗಳನ್ನು ನೀಡುವುದು.- (1) ಬಳಸಿರುವ ಚೆಕ್ ಪುಸ್ತಕವನ್ನು ಹಣಕಾಸು ಅಧಿಕಾರಿಗೆ ಚೆಕ್‌ಗಳನ್ನು ಬರೆಯುವುದಕ್ಕಾಗಿ ನೀಡಬಹುದು.

(2) ಸಾಮಾನ್ಯವಾಗಿ ಹಣವನ್ನು ಸಂದಾಯ ಮಾಡಬೇಕಾಗಿರುವ ವ್ಯಕ್ತಿಗೆ ಕೂಡಲೇ ಒಪ್ಪಿಸುವುದಕ್ಕೆ ಅಗತ್ಯಪಡಿಸಿದ ಹೊರತು ಯಾವುದೇ ಚೆಕ್‌ಗೆ ಸಹಿ ಮಾಡತಕ್ಕದ್ದಲ್ಲ. ಅಸಾಧಾರಣ ಸನ್ನಿವೇಶಗಳಲ್ಲಿ ಹೊರತುಪಡಿಸಿ ಸಹಿ ಮಾಡಿದ ಯಾವುದೇ ಚೆಕ್‌ಗಳನ್ನು ಕಚೇರಿಯಲ್ಲಿ ಇಟ್ಟುಕೊಳ್ಳತಕ್ಕದ್ದಲ್ಲ. ಅದನ್ನು ಪ್ರತಿಯೊಂದು ಸಂದರ್ಭದಲ್ಲಿ ದಾಖಲಿಸತಕ್ಕದ್ದು,

(3) ಪ್ರತಿಯೊಂದು ಚೆಕ್ ಅನ್ನು ಇಂಗ್ಲಿಷ್ ಅಥವಾ ಕನ್ನಡ ಭಾಷೆಯಲ್ಲಿ ಬರೆಯತಕ್ಕದ್ದು ಮತ್ತು ಹಣವನ್ನು ವಾಸ್ತವವಾಗಿ ಸಂದಾಯ ಮಾಡಬೇಕಾಗಿರುವ ವ್ಯಕ್ತಿಯ ಹೆಸರಿನಲ್ಲಿ ಅಥವಾ ಸಂದಾಯವನ್ನು ಸ್ವೀಕರಿಸುವುದಕ್ಕೆ ಘೋಷಿತನಾದ ವ್ಯಕ್ತಿಯ ಬ್ಯಾಂಕ್ ಖಾತೆಯ ಹೆಸರಿನಲ್ಲಿ ಇರತಕ್ಕದ್ದು. 'ಖಾತೆದಾರರ ಲೆಕ್ಕಕ್ಕೆ' ಎಂಬ ಮುಂದ್ರೆಯನ್ನು ಈ ಚೆಕ್‌ಗಳ ಮೇಲೆ ತಪ್ಪದೆ ಹಾಕತಕ್ಕದ್ದು.

(4) ಬರೆಯಲಾದ ಪ್ರತಿಯೊಂದು ಚೆಕ್‌ನ ಮೊತ್ತವನ್ನು ಚೆಕ್‌ನ ಮೇಲೆ ಮತ್ತು ಪಕ್ಕಾ ಪ್ರತಿಯ ಮೇಲೆ ಅಥವಾ ದಾಖಲೆ ಚೀಟಿಯ ಮೇಲೆ ಅಥವಾ ಚೆಕ್ ಪುಸ್ತಕದಲ್ಲಿ ಲಭ್ಯವಿರುವ ವಹಿವಾಟು ಹಾಳೆಯ ಮೇಲೆ ಪದಗಳಲ್ಲಿ ಹಾಗೂ ಅಂಕಿಗಳಲ್ಲಿ ಎರಡರಲ್ಲೂ ಬರೆಯತಕ್ಕದ್ದು ಮತ್ತು ಚೆಕ್‌ಗೆ ಸಹಿ ಮಾಡುವ ವ್ಯಕ್ತಿಯು ಚಿಕ್ಕ ರುಜು ಮಾಡತಕ್ಕದ್ದು.

(5) ಚೆಕ್ ಅನ್ನು ಸಹಿಗಾಗಿ ಸಿದ್ಧಪಡಿಸುವಾಗ, ಚೆಕ್ ಅನ್ನು ಡ್ರಾ ಮಾಡಿದ ಮೊತ್ತಕ್ಕಿಂತ ಮುಂದಿನ ಹೆಚ್ಚಿನ ಸಂಖ್ಯೆಯ ರೂಪಾಯಿಗಳ ಮೊತ್ತವನ್ನು, ರಕ್ಷಣೆಗಾಗಿ, ಈ ಮುಂದಿನಂತೆ ------- ರೂಪಾಯಿಗಳಲ್ಲಿ ಎಂದು ಕೆಂಪು ಶಾಯಿಯಲ್ಲಿ ಇದಕ್ಕೆ ಅಡ್ಡಲಾಗಿ ಬರೆಯತಕ್ಕದ್ದು.

45. ಸಂದಾಯಗಳನ್ನು ರಸೀದಿಗಳ ಮೂಲಕ ಸಂರಕ್ಷಿಸುವುದು.- ನಗದಿನರೂಪದಲ್ಲಾಗಲಿ ಅಥವಾ ಚೆಕ್‌ನ ರೂಪದಲ್ಲಾಗಲಿ ಮಾಡಿದ ಪ್ರತಿಯೊಂದು ಸಂದಾಯವನ್ನು, ಅಗತ್ಯವಿದ್ದರೆ ಸ್ಟಾಂಪು ಹಚ್ಚಿದ ಮತ್ತು ಹಣವು ಯಾರಿಗೆ ನೀಡಲು ಬಾಕಿಯಿದಿಯೋ ಆ ವ್ಯಕ್ತಿಯು ಸಹಿ ಮಾಡಿದ ಸಂದಾಯ ಸ್ವೀಕೃತಿಯ ಮೂಲಕ ರಕ್ಷಿಸಿಡತಕ್ಕದ್ದು.

46. ಹಣ ಪಡೆಯುವವರ ಹಿಂಬರಹಗಳನ್ನು ಹೊಂದಿರುವ ಸಂದಾಯ ವೋಚರ್.- (೧) ಪ್ರತಿಯೊಂದು ಸಂದಾಯ ವೋಚರ್, ಯಾರಿಗಾಗಿ ಅಥವಾ ಯಾರ ಹೆಸರಿನಲ್ಲಿ ಕ್ಲೇಮನ್ನು ಮಾಡಲಾಗಿದೆಯೋ ಆ ವ್ಯಕ್ತಿಯು ಸಹಿ ಮಾಡಿದ ಸಂದಾಯ ಹಿಂಬರಹವನ್ನು ಪಡೆದುಕೊಳ್ಳತಕ್ಕದ್ದು ಅಥವಾ ಅದಕ್ಕೆ ಲಗತ್ತಿಸಿರತಕ್ಕದ್ದು. ಅಗತ್ಯ ಹಿಂಬರಹ ಇಲ್ಲದಿದ್ದಲ್ಲಿ ಯಾವುದೇ ಸಂದಾಯವನ್ನು ಮಾಡತಕ್ಕದ್ದಲ್ಲ.

(2) ಸಂದಾಯ ವೋಚರ್ ಕಳೆದುಹೋದರೆ, ಹಸ್ತಪ್ರತಿಯಲ್ಲಿ ಸಿದ್ಧಪಡಿಸಿದ ಮತ್ತು ಬಟವಾಡೆ ಅಧಿಕಾರಿಯು ಸಹಿ ಮಾಡಿದ ಮತ್ತು ವರಿಷ್ಠ ಅಧಿಕಾರಿಯು ಹಿಂಬರಹ ಮಾಡಲಾದ ಸಂದಾಯ ಪ್ರಮಾಣಪತ್ರವನ್ನು ದಾಖಲೆಯಲ್ಲಿ ಇಡತಕ್ಕದ್ದು. ಎಲ್ಲ ಕ್ಲೇಮುಗಳ ಪೂರ್ಣ ವಿವರಗಳನ್ನು ನಮೂದಿಸತಕ್ಕದ್ದು.

(3) ಅನಕ್ಷರಸ್ಥ ವ್ಯಕ್ತಿಗಳಿಗೆ ಮಾಡುವ ಸಂದಾಯಗಳನ್ನು ಬಟವಾಡೆ ಅಧಿಕಾರಿಯು ಪ್ರಮಾಣೀಕರಿಸತಕ್ಕದ್ದು ಮತ್ತು ಸಂಬಂಧಪಟ್ಟ ವೋಚರ್‌ಗಳಲ್ಲಿ ಅವರ ಹೆಸರುಗಳಿಗೆ ಆ ವ್ಯಕ್ತಿಗಳ ಹೆಬ್ಬೆರಳಿನ ಗುರುತನ್ನು ಪಡೆದುಕೊಳ್ಳತಕ್ಕದ್ದು.

(4) ಹಣಕಾಸು ಅಧಿಕಾರಿಯು ಸಂದಾಯ ವೋಚರ್‌ನಲ್ಲಿ ಚೆಕ್ ಸಂಖ್ಯೆಯ ವಿವರಗಳು ಮತ್ತು ದಿನಾಂಕವನ್ನು ನಮೂದಿಸತಕ್ಕದ್ದು.

47. ಸಂದಾಯಗಳನ್ನು ಲೆಕ್ಕಹಾಕುವಿಕೆ :- ನಗದು ಅಥವಾ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಸಂದಾಯಗಳ ನಮೂದನ್ನು ಮಾಡತಕ್ಕದ್ದು ಮತ್ತು;

(ಎ) ಒಂದೇ ಹೊಣೆಗಾರಿಕೆ ಲೆಕ್ಕಕ್ಕೆ ಡೆಬಿಟ್ ಮಾಡುವ ಮೂಲಕ ಬಿಲ್ಲಿನ ಮೊತ್ತಕ್ಕೆ ಈ ಮೊದಲೇ ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದ ಸಂದರ್ಭದಲ್ಲಿ; ಮತ್ತು

(ಬಿ) ಯುಕ್ತ ವೆಚ್ಚ ಅಥವಾ ಸಂದಾಯ ಲೆಕ್ಕ ಶೀರ್ಷಿಕೆಗೆ ಡೆಬಿಟ್ ಮಾಡುವ ಮೂಲಕ ಯಾವುದೇ ಹೊಣೆಗಾರಿಕೆಯನ್ನು ವಹಿಸಿಕೊಳ್ಳದಿದ್ದ ಸಂದರ್ಭದಲ್ಲಿ;

48. ಹಿಂಬರಹಗಳಲ್ಲಿ ಬರೆಯಬೇಕಾದ ದಿನಾಂಕಗಳು.- ಹಣ ಸ್ವೀಕರ್ತರು ತಮ್ಮ ಹಿಂಬರಹಗಳಲ್ಲಿ ಸಂದಾಯವಾದ ದಿನಾಂಕಗಳನ್ನು ವ್ಯತ್ಯಾಸವಾಗದಂತೆ ಬರೆಯತಕ್ಕದ್ದು.

49. ಚೆಕ್ಕುಗಳ ರದ್ದಿಯಾತಿ.- (1) ಸಹಿ ಮಾಡಿದ ಚೆಕ್ಕು ರದ್ದಾದಾಗ, ಹಣಕಾಸು ಅಧಿಕಾರಿಯು ಅದಕ್ಕೆ "ರದ್ದಾಗಿದೆ" ಎಂದು ಮುದ್ರೆ ಹಾಕತಕ್ಕದ್ದು. ರದ್ದಿಯಾತಿಯ ಸಂಗತಿಯನ್ನು ಚೆಕ್ ಪುಸ್ತಕದಲ್ಲಿ ಲಭ್ಯವಿರುವ ಪಕ್ಕಾ ಪ್ರತಿ ಅಥವಾ ದಾಖಲೆ ಚೀಟಿ ಅಥವಾ ವಹಿವಾಟು ಹಾಳೆಯ ಮೇಲೆ ಮತ್ತು

ಸಂದಾಯ ವೋಚರ್‌ನ ಮೇಲೆ ಹಿಂಬರಹ ಮಾಡಲಾಗಿರುವ ಸಂದಾಯದ ಆದೇಶದ ಮೇಲೂ ಸಹ ಅಡ್ಡಲಾಗಿ ಚೆಕ್‌ನ ಡ್ರಾಯರ್‌ನ ಕಿರು ಸಹಿಗಳೊಂದಿಗೆ ಕೆಂಪು ಶಾಯಿಯಲ್ಲಿ ಬರೆಯತಕ್ಕದ್ದು.

(2) ಬ್ಯಾಂಕ್ ಪುಸ್ತಕದಲ್ಲಿ ನಮೂದನ್ನು ಮಾಡುವ ಮೊದಲು ಚೆಕ್‌ನ್ನು ರದ್ದುಗೊಳಿಸಿದರೆ, ಚೆಕ್ ಸಂಖ್ಯೆ ಮತ್ತು "ರದ್ದುಗೊಳಿಸಲಾಗಿದೆ" ಎಂಬ ಪದಗಳನ್ನು ಬ್ಯಾಂಕ್ ಪುಸ್ತಕದಲ್ಲಿ ಬರೆಯತಕ್ಕದ್ದು. ಆದಾಗ್ಯೂ ಚೆಕ್‌ನ ನಮೂದನ್ನು ಬ್ಯಾಂಕ್ ಪುಸ್ತಕದಲ್ಲಿ ಈಗಾಗಲೇ ದಾಖಲಿಸಿದ್ದರೆ, ನಮೂದನ್ನು ವಿಪರ್ಯಯಗೊಳಿಸತಕ್ಕದ್ದು.

(3) ರದ್ದುಗೊಳಿಸಿದ ಚೆಕ್ಕುಗಳನ್ನು, ಲೆಕ್ಕಪರಿಶೋಧನೆಯ ಉದ್ದೇಶಕ್ಕಾಗಿ ಅವುಗಳ ಪಕ್ಕಾ ಪ್ರತಿಗಳೊಂದಿಗೆ ಉಳಿಸಿಕೊಳ್ಳತಕ್ಕದ್ದು.

50. ಚೆಕ್ಕುಗಳು ಕಳೆದುಹೋಗುವುದು :- ಸಂದಾಯಮಾಡುವ ಮೊದಲು ಚೆಕ್ಕು ಕಳೆದುಹೋದರೆ, ಅದು ಸಂದಾಯವಾಗಿಲ್ಲವೆಂದು ಬ್ಯಾಂಕ್‌ನಿಂದ ಪ್ರಮಾಣ ಪತ್ರವನ್ನು ಪಡೆದುಕೊಂಡ ಮೇಲೆ ಕೆಳಗೆ ನೀಡಲಾದ ನಮೂನೆಯಲ್ಲಿಗೆ ಹೊಸ ಚೆಕ್ಕನ್ನು ನೀಡಬಹುದು,-

ಪ್ರಮಾಣಪತ್ರ

ಈ ಖಜಾನೆ ಅಥವಾ ಬ್ಯಾಂಕ್‌ನಲ್ಲಿ ---------- ನ ಹೆಸರಿನಲ್ಲಿ ಡ್ರಾ ಮಾಡಲಾಗಿದೆ ಎಂದು (ಬಟವಾಡೆ ಅಧಿಕಾರಿಯು) ವರದಿ ಮಾಡಲಾದ ---------- ರೂ. ಗಳನ್ನು ಚೆಕ್ ಸಂಖ್ಯೆ ---------- ನ್ನು ದಿನಾಂಕ: ---------- ರ ಸಂದಾಯ ಮಾಡಿಲ್ಲವೆಂದು ಪ್ರಮಾಣೀಕರಿಸಲಾಗಿದೆ ಮತ್ತು ಇನ್ನು ಮುಂದೆ ಹಾಜರುಪಡಿಸಿದರೆ ಸಂದಾಯ ಮಾಡಲಾಗುವುದಿಲ್ಲ.

ದಿನಾಂಕ: ----------

ಬ್ಯಾಂಕ್

51. ಅವಧಿ ಮೀರಿದ ಚೆಕ್ಕುಗಳು.- ಒಂದು ಚೆಕ್ಕನ್ನು ಅದು ಸಲುವಳಿಯಲ್ಲಿರುವ ಅವಧಿಯೊಳಗೆ ನಗದೀಕರಿಸದಿದ್ದರಿ, ಸ್ವೀಕೃತಿ ವೋಚರನ್ನು ಸಿದ್ಧಪಡಿಸುವ ಮತ್ತು ಮೂಲದಲ್ಲಿ ಡೆಬಿಟ್ ಮಾಡಲಾಗಿದ್ದ ಖಾತೆಗೆ ಜಮೆ ಮಾಡುವ ಮೂಲಕ ವಿಪರ್ಯಯಗೊಳಿಸತಕ್ಕದ್ದು. ಚೆಕ್‌ನ ನಮೂದನ್ನು ಸಂದಾಯ ವೋಚರ್‌ನಲ್ಲಿ ಅವಧಿ ಮೀರಿದ ಚೆಕ್‌ಗೆ ಅಡ್ಡಲಾಗಿ ಉಲ್ಲೇಖವನ್ನು ಮಾಡುವುದರ ಜೊತೆಗೆ ಅವಧಿ ಮೀರಿದ ಚೆಕ್ ಅನ್ನು ಹಿಂದಿರುಗಿಸಿದ ನಂತರವೇ, ಹೊಸ ಚೆಕ್ ಅನ್ನು ನೀಡತಕ್ಕದ್ದು.

52. ಅನುದಾನಗಳು ಮತ್ತು ವಂತಿಗೆಗಳು.- (1) ನಿರ್ದಿಷ್ಟ ಅನುದಾನಗಳು ಮತ್ತು ಸ್ವೀಕರಿಸಿದ ವಂತಿಗೆಗಳನ್ನು ನಿರ್ದಿಷ್ಟಪಡಿಸಲಾದ ಉದ್ದೇಶಕ್ಕಾಗಿ ಉಪಯೋಗಿಸುವವರೆಗೆ ಒಂದು ಹೊಣೆಗಾರಿಕೆಯೆಂಬುದಾಗಿ ಪರಿಗಣಿಸತಕ್ಕದ್ದು. ಪ್ರಾಧಿಕಾರವು ಸಾಮಾನ್ಯ ಅನುದಾನಗಳನ್ನು ಆದಾಯವೆಂದು ಪರಿಗಣಿಸತಕ್ಕದ್ದು.

(2) ಪ್ರಾಧಿಕಾರವು, ಅನುದಾನಗಳ ಸ್ವೀಕೃತಿಗಳು ಮತ್ತು ಬಳಕೆಯನ್ನು ದಾಖಲಿಸಲು ನಿರ್ದಿಷ್ಟ ಅನುದಾನಗಳಿಗೆ ಸಂಬಂದಿಸಿದಂತೆ ನಮೂನೆ-XX ರಲ್ಲಿ ಒಂದು ಅನುದಾನ ರಿಜಿಸ್ಟರ್‌ನ್ನು ನಿರ್ವಹಿಸತಕ್ಕದ್ದು.

(3) ಅನುದಾನದ ಷರತ್ತುಗಳಿಗೆ ಅನುಸಾರವಾಗಿ ಅದರ ಉಪಯೋಗವಾದ ಕೂಡಲೇ ಬೃಹತ್ ಕಾಮಗಾರಿಗಳ ಮೇಲೆ ವ್ಯಯ ಮಾಡಿದ ಭಾಗವನ್ನು "ಮುಂದೂಡಿದ ಆದಾಯಕ್ಕೆ" ಎಂದು ವರ್ಗಾಯಿಸತಕ್ಕದ್ದು ಮತ್ತು ಪ್ರಗತಿಯಲ್ಲಿರುವ ಬೃಹತ್ ಕಾಮಗಾರಿಗಳ ಬಂಡವಾಳೀಕರಣಗೊಳಿಸಿದ

ನಂತರ ಆ ಸ್ವತ್ತುಗಳ ಮೇಲೆ ಇಳಿತಾಯವನ್ನು ವಿಧಿಸಲಾಗುವ ಪ್ರಮಾಣದ ಅವಧಿಯ ಮೇಲೆ ಆದಾಯಕ್ಕೆ ಹಂಚತಕ್ಕದ್ದು.

(4) ನಿರ್ದಿಷ್ಟ ಅನುದಾನದ ಯಾವುದೇ ಭಾಗವನ್ನು ರಾಜಸ್ವ ವೆಚ್ಚಗಳಿಗಾಗಿ ಉಪಯೋಗಿಸಲು ಅನುಮತಿ ನೀಡಿದ ಮತ್ತು ಹಾಗೆ ಉಪಯೋಗಿಸಿದ ಸಂದರ್ಭದಲ್ಲಿ, ಸಂವಾದಿ ಮೊಬಲಗನ್ನು ನಿರ್ದಿಷ್ಟ ಅನುದಾನ (ಹೊಣೆಗಾರಿಕೆ) ಖಾತೆಯಿಂದ ಆದಾಯಕ್ಕೆ ಕೂಡಲೇ ವರ್ಗಾಯಿಸತಕ್ಕದ್ದು.

(5) ಪ್ರಾಧಿಕಾರದ ನಿಧಿ, ಅನುದಾನ ಮತ್ತು ಸಾಲವನ್ನು ಒಳಗೊಂಡಿರುವ ಬೃಹತ್ ಪರಿಯೋಜನೆಯ ಸಂದರ್ಭದಲ್ಲಿ ಉಪ ನಿಯಮ (3) ರಲ್ಲಿರುವಂತೆ ಲೆಕ್ಕ ಹಾಕತಕ್ಕದ್ದು. ಸಾಲದ ಭಾಗವನ್ನು ಯಥಾಕ್ರಮದಲ್ಲಿ ತೀರಿಸುವುದಕ್ಕಾಗಿ 'ಹೊಣೆಗಾರಿಕೆ' ಯೆಂಬುದಾಗಿ ಪರಿಗಣಿಸತಕ್ಕದ್ದು.

(6) ಸ್ಥಳೀಯ ವಂತಿಗೆಯನ್ನು (ಸಂಸ್ಥೆಗಳು ಮತ್ತು ಇತರ ವ್ಯಕ್ತಿಗಳಿಂದ ಆರ್ಥಿಕ ನೆರವು) "ಇತರರಿಂದ ವಂತಿಗೆ" ಯೆಂಬುದಾಗಿ ಪರಿಗಣಿಸತಕ್ಕದ್ದು. ಬಂಡವಾಳ ವೆಚ್ಚಕ್ಕೆ ಅದರ ಬಳಕೆಯಾದ ಮೇಲೆ ಲೆಕ್ಕಹಾಕುವಿಕೆಯು, ಮೇಲೆ ಉಪ ನಿಯಮ (3) ರಲ್ಲಿ ನಿರ್ದಿಷ್ಟಪಡಿಸಿದಂತೆ ಅದೇ ರೀತಿಯಲ್ಲಿರತಕ್ಕದ್ದು.

53. ಲೋಕೋಪಯೋಗಿ ಇಲಾಖೆ ಅಥವಾ ಇತರ ಸರ್ಕಾರಿ ಏಜೆನ್ಸಿಗಳ ಮೂಲಕ ನಿರ್ವಹಿಸಲಾದ ಕಾಮಗಾರಿಗಳು.- ಲೋಕೋಪಯೋಗಿ ಇಲಾಖೆ ಅಥವಾ ಇತರ ಸರ್ಕಾರಿ ಏಜೆನ್ಸಿಗಳ ಮೂಲಕ ಕಾಮಗಾರಿಗಳನ್ನು ನಿರ್ವಹಿಸಲಾಗಿದ್ದಲ್ಲಿ, ಅವುಗಳು (ಎ) ಠೇವಣಿ ಕಾಮಗಾರಿಗಳು ಅಥವಾ (ಬಿ) ಪ್ರತ್ಯಾಯೋಜಿತ ಸಾಲ ಕಾಮಗಾರಿಗಳಲ್ಲಿ ಒಂದನ್ನು ಒಳಗೊಂಡಿರಬಹುದು.

(ಎ) ಠೇವಣಿ ಕಾಮಗಾರಿಗಳು: ಲೋಕೋಪಯೋಗಿ ಇಲಾಖೆ ಅಥವಾ ಪ್ರಾಧಿಕಾರದ ಪರವಾಗಿ ಯಾವುದೇ ಇತರ ಸರ್ಕಾರಿ ಏಜೆನ್ಸಿಯು ನಿರ್ವಹಿಸುವ ಠೇವಣಿ ಕಾಮಗಾರಿಗಳಿಗೆ ಸಂಬಂದಪಟ್ಟಂತೆ, ಈ ಮುಂದಿನ ಲೆಕ್ಕಹಾಕುವ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು:-

(i) ಕಾಮಗಾರಿಯ ಒಟ್ಟು ಅಂದಾಜು ವೆಚ್ಚವನ್ನು, ಒಂದೇ ಮೊತ್ತದಲ್ಲಾಗಲಿ ಅಥವಾ ಒಪ್ಪಿಕೊಂಡಂಥ ಕಂತುಗಳಲ್ಲಾಗಲಿ ಲೋಕೋಪಯೋಗಿ ಇಲಾಖೆ ಅಥವಾ ಸಂಬಂಧಪಟ್ಟ ಸರ್ಕಾರಿ ಏಜೆನ್ಸಿಗೆ ಸಂದಾಯ ಮಾಡತಕ್ಕದ್ದು. ಸಂದಾಯವಾದ ಮೊಬಲಗುಗಳನ್ನು ಲೋಕೋಪಯೋಗಿ ಇಲಾಖೆ ಅಥವಾ ಸಂಬಂಧಪಟ್ಟ ಸರ್ಕಾರಿ ಏಜೆನ್ಸಿಗೆ ಮುಂಗಡವಾಗಿ ಪರಿಗಣಿಸತಕ್ಕದ್ದು. ಲೋಕೋಪಯೋಗಿ ಇಲಾಖೆ ಅಥವಾ ಸಂಬಂಧಪಟ್ಟ

ಸರ್ಕಾರಿ ಏಜೆನ್ಸಿಯು ಪ್ರತಿ ತಿಂಗಳ ಅವಧಿಯಲ್ಲಿ ಆದ ವೆಚ್ಚವನ್ನು ಮತ್ತು ಸಂಬಂಧಪಟ್ಟ ಕಾಮಗಾರಿಗಳ ಮೇಲಿನ ನವೀಕೃತ (ಆ ದಿನಾಂಕದವರೆಗೆ) ವೆಚ್ಚವನ್ನು ತೋರಿಸುವ ವಿವರಣೆ ಪತ್ರವನ್ನು ಪ್ರತಿ ತಿಂಗಳು ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ಸದರಿ ವಿವರಣಾ ಪತ್ರವನ್ನು ಸ್ವೀಕರಿಸಿದ ಮೇಲೆ, ತಿಂಗಳ ಅವಧಿಯಲ್ಲಿ ವ್ಯಯ ಮಾಡಿದಂತೆ ತೋರಿಸಿದ ಮೊಬಲಗನ್ನು, ಈ ಮೊದಲು ಸಂದಾಯ ಮಾಡಿದ ಮುಂಗಡಕ್ಕೆ ಸಂಬಂದಪಟ್ಟಂತೆ ಹೊಂದಾಣಿಕೆ ಮಾಡತಕ್ಕದ್ದು ಮತ್ತು ಪ್ರಗತಿಯಲ್ಲಿರುವ ಬೃಹತ್ ಕಾಮಗಾರಿಗಳಲ್ಲಿ ಸಹ ಲೆಕ್ಕ ಹಾಕತಕ್ಕದ್ದು;

(ii) ಠೇವಣಿ ಕಾಮಗಾರಿಗಳ ಮುಕ್ತಾಯದ ತರುವಾಯ ಠೇವಣಿ ಕಾಮಗಾರಿಯ ವಿವರ ಪಟ್ಟಿಯನ್ನು, ಲೋಕೋಪಯೋಗಿ ಇಲಾಖೆ ಅಥವಾ ಸಂಬಂಧಪಟ್ಟ ಸರ್ಕಾರಿ ಏಜೆನ್ಸಿಯು

ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು. ಅಂಥ ವಿವರಪಟ್ಟಿಯನ್ನು ಸ್ವೀಕರಿಸಿದ ನಂತರ ಆ ಕಾಮಗಾರಿಗೆ ಸಂಬಂಧಿಸಿದ "ಪ್ರಗತಿಯಲ್ಲಿರುವ ಬೃಹತ್ ಕಾಮಗಾರಿಗಳ" ಅಡಿಯಲ್ಲಿ ಬರುವ ವೆಚ್ಚವನ್ನು ಬಂಡವಾಳೀಕೃತಗೊಳಿಸತಕ್ಕದ್ದು; ಮತ್ತು

(iii) ಪೂರ್ಣಗೊಂಡ ಕಾಮಗಾರಿಗಳ ವೆಚ್ಚವಾಗದ ಬಾಕಿ ಹಣವನ್ನು ಲೋಕೋಪಯೋಗಿ ಇಲಾಖೆ ಅಥವಾ ಸಂಬಂಧಪಟ್ಟ ಸರ್ಕಾರಿ ಏಜೆನ್ಸಿಯು ಪ್ರಾಧಿಕಾರಕ್ಕೆ ವಾಪಸು ಮಾಡತಕ್ಕದ್ದು, ಅದನ್ನು ತೀರುವಳಿಯಾಗಿರದ ಮುಂಗಡದ ಸಂಬಂಧದಲ್ಲಿ ಹೊಂದಾಣಿಕೆ ಮಾಡತಕ್ಕದ್ದು.

(ಬಿ) ಪ್ರತ್ಯಾಯೋಜಿತ ಸಾಲ ಕಾಮಗಾರಿಗಳು: (1) ಬೃಹತ್ ಕಾಮಗಾರಿಗಳಿಗಾಗಿ, ಪ್ರಾಧಿಕಾರದ ಪರವಾಗಿ ಸರ್ಕಾರಿ ಏಜೆನ್ಸಿಯನ್ನು ಒಳಗೊಂಡಂತೆ ಯಾವುದೇ ಇತರ ಏಜೆನ್ಸಿಯು ಸಾಲಗಳನ್ನು ಸಂಗ್ರಹಿಸಿದಾಗ, ಆ ಕಾಮಗಾರಿಗಳನ್ನು 'ಪ್ರತ್ಯಾಯೋಜಿತ ಸಾಲ ಕಾಮಗಾರಿಗಳು' ಎಂದು ಕರೆಯಲಾಗುವುದು.

(2) ಪ್ರತ್ಯಾಯೋಜಿತ ಸಾಲ ಕಾಮಗಾರಿಗಳ ಸಂಬಂಧದಲ್ಲಿ ಈ ಮುಂದಿನ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು; ಎಂದರೆ:-

(i) ಏಜೆನ್ಸಿಯು ತನ್ನ ಪರವಾಗಿ ಸಾಲವನ್ನು ಸಂಗ್ರಹಿಸಲು ಅನುವಾಗುವ ಕಾನೂನು ಸಮ್ಮತವಾದ ಸಿಂಧುವಾದ ಒಪ್ಪಂದವನ್ನು ಪ್ರಾಧಿಕಾರವು ಮಾಡಿಕೊಳ್ಳತಕ್ಕದ್ದು ಮತ್ತು ಸಾಲದ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಸದರಿ ಒಪ್ಪಂದದ ಪ್ರಕಾರ ಅಸಲು ಮತ್ತು ಬಡ್ಡಿಯನ್ನು ಮರುಪಾವತಿ ಮಾಡಲು ಕ್ರಮ ಕೈಗೊಳ್ಳತಕ್ಕದ್ದು;

(ii) ಏಜೆನ್ಸಿಯು ಒಮ್ಮೆ ಸಾಲವನ್ನು ಸಂಗ್ರಹಿಸಿದ ನಂತರ, ಅದು ಸಂಗ್ರಹಿಸಿದ ಸಾಲ, ಸಾಲದ ದಿನಾಂಕ, ಮರು ಪಾವತಿಸಿದ ಅವಧಿ, ಬಡ್ಡಿಯ ದರ ಮತ್ತು ಸಾಲದ ನಿಬಂಧನೆಗಳು ಮತ್ತು ಷರತ್ತುಗಳನ್ನು ಸೂಚಿಸುವ ಸಲಹೆಯನ್ನು ನಮೂನೆ-XXI ರಲ್ಲಿ ಕಳುಹಿಸತಕ್ಕದ್ದು;

(iii) ಅಂಥ ಸಲಹೆಯನ್ನು ಸ್ವೀಕರಿಸಿದ ಮೇಲೆ, ಪ್ರಾಧಿಕಾರವು ಲೆಕ್ಕದ ಪುಸ್ತಕಗಳಲ್ಲಿ ಅಗತ್ಯ ನಮೂದುಗಳನ್ನು ಮಾಡತಕ್ಕದ್ದು. ಅದನ್ನು ಸಾಲಗಳ ರಿಜಿಸ್ಟರ್ ಮತ್ತು ಮುಂಗಡಗಳ ರಿಜಿಸ್ಟರಿನಲ್ಲಿಯೂ ಸಹ ಅದನ್ನು ದಾಖಲಿಸತಕ್ಕದ್ದು.

(iv) ಏಜೆನ್ಸಿಯು, ಸಂಬಂಧಪಟ್ಟ ಕಾಮಗಾರಿಗಳಿಗೆ ಸಂಬಂಧಿಸಿದ ಪ್ರಗತಿಯನ್ನು ತೋರಿಸುವ ಪ್ರತಿ ತಿಂಗಳ ಅವಧಿಯಲ್ಲಿ ವಹಿಸಲಾದ ವೆಚ್ಚದ ಮಾಸಿಕ ವಿವರಪಟ್ಟಿಯನ್ನು ನಮೂನೆ-XXII ರಲ್ಲಿ ಕಳುಹಿಸತಕ್ಕದ್ದು. ಮಾಸಿಕ ವಿವರಪಟ್ಟಿಯನ್ನು ಸ್ವೀಕರಿಸಿದ ಮೇಲೆ, ತಿಂಗಳ ಅವಧಿಯಲ್ಲಿ ವೆಚ್ಚ ಮಾಡಿದಂತೆ ತೋರಿಸಿದ ಮೊಬಲಗನ್ನು ಅಗತ್ಯ ನಮೂದುಗಳನ್ನು ಮಾಡುವ ಮೂಲಕ ಸರಿಹೊಂದಿಸತಕ್ಕದ್ದು; ಮತ್ತು

(v) ಪ್ರಗತಿಯಲ್ಲಿರುವ ಬೃಹತ್-ಕಾಮಗಾರಿಗಳನ್ನು ಪೂರ್ಣಗೊಳಿಸಿದ ವರದಿಯನ್ನು ಸ್ವೀಕರಿಸಿದ ಮೇಲೆ ಬಂಡವಾಳೀಕೃತಗೊಳಿಸತಕ್ಕದ್ದು.

ಟಿಪ್ಪಣಿ.- ಪ್ರತ್ಯಾಯೋಜಿತ ಸಾಲ ಕಾಮಗಾರಿಗಳನ್ನು ಪ್ರಾಧಿಕಾರದ ಬಜೆಟ್ ಅಂದಾಜಿನಲ್ಲಿ ಪ್ರತ್ಯೇಕವಾಗಿ ತೋರಿಸತಕ್ಕದ್ದು.

54. ಠೇವಣಿಗಳು.- (೧) ಸ್ವೀಕರಿಸಿದ ಅಥವಾ ವಸೂಲಿ ಮಾಡಿದ ಎಲ್ಲಾ ಠೇವಣಿಗಳಿಗಾಗಿ ಠೇವಣಿಗಳ ರಿಜಿಸ್ಟರನ್ನು ನಮೂನೆ-XXIII ರಲ್ಲಿ ನಿರ್ವಹಿಸತಕ್ಕದ್ದು. ಅಗತ್ಯವಿದ್ದರೆ, ಈ ಮುಂದಿನ ಠೇವಣಿಗಳ ಪ್ರತಿ ವರ್ಗಗಳಿಗಾಗಿ ಪುಟಗಳ ಪ್ರತ್ಯೇಕ ಸಮೂಹಗಳನ್ನು ಪ್ರತ್ಯೇಕವಾಗಿಡಬಹುದು, ಎಂದರೆ:-

(i) ಬಾಡಿಗೆದಾರರು ಅಥವಾ ಗೇಣಿದಾರರು ಮಾಡಿದ ಠೇವಣಿಗಳು;

(ii) ಪೂರೈಕೆದಾರರು ಮಾಡಿದ ಠೇವಣಿಗಳು, ಗುತ್ತಿಗೆದಾರರ ಭದ್ರತಾ ಠೇವಣಿ ಮತ್ತು ಚಾಲ್ತಿ ಬಿಲ್ಲುಗಳಿಂದ ವಸೂಲಿ ಮಾಡಲಾದ ಹಣವನ್ನು ಉಳಿಸಿಕೊಳ್ಳುವುದು; ಮತ್ತು

(iii) ಇತರ ಠೇವಣಿಗಳು

(ಎ) ಪೂರೈಕೆದಾರರು ಅಥವಾ ಗುತ್ತಿಗೆದಾರರು ಮುಂಗಡ ಹಣ ಠೇವಣಿ ಅಥವಾ ಭದ್ರತಾ ಠೇವಣಿಗೆ ಬದಲಾಗಿಯಾಗಲಿ ಅಥವಾ ಸಂಗ್ರಹಣೆ ಆದೇಶದ ನಿಬಂಧನೆಗಳ ಪ್ರಕಾರ ಯಾವುದೇ ಇತರ ಉದ್ದೇಶಕ್ಕಾಗಿಯಾಗಲಿ ಬ್ಯಾಂಕು ಖಾತರಿಗಳನ್ನು ಒದಗಿಸಿರುವಲ್ಲೆಲ್ಲಾ, ಬ್ಯಾಂಕ್ ಖಾತರಿಯ ವಿವರಗಳನ್ನು ಲೆಕ್ಕಪತ್ರಗಳ ಶಾಖೆಯು ನಮೂನೆ-XXIV ರಲ್ಲಿ ಬ್ಯಾಂಕ್ ಖಾತರಿಗಳ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು, ಇದು, ಬ್ಯಾಂಕು ಖಾತರಿಗಳನ್ನು ಅವುಗಳು ಮುಕ್ತಾಯವಾದಾಗಲೆಲ್ಲಾ ಅವುಗಳನ್ನು ನವೀಕರಿಸುವ ಮೂಲಕ ಸಂಗ್ರಹಣೆ ಆದೇಶದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯಲ್ಲಿ ಜಾರಿಯಲ್ಲಿ ಇಡತಕ್ಕದ್ದು ಎಂಬುದನ್ನು ಖಚಿತಪಡಿಸತಕ್ಕದ್ದು. ಮೂಲ ಬ್ಯಾಂಕು ಖಾತರಿಗಳನ್ನು, ಹಣಕಾಸು ಅಧಿಕಾರಿ ಅಥವಾ ಆಯುಕ್ತರು ಅಧಿಕೃತಗೊಳಿಸಬಹುದಾದಂಥ ಇತರ ಅಧಿಕಾರಿ ಅಥವಾ ಸಿಬ್ಬಂದಿಯ ಸುರಕ್ಷಿತ ಅಭಿರಕ್ಷೆಯಲ್ಲಿರತಕ್ಕದ್ದು.

(ಬ) (i) ಹರಾಜಿನಲ್ಲಿ ಉದ್ದೇಶಿತ ಬಿಡ್ದುದಾರರು ಮುಂಗಡ ಹಣ ಠೇವಣಿಯನ್ನು ಸ್ವೀಕರಿಸಿದಾಗ; ಅದನ್ನು ನಮೂನೆ-XXV ನಲ್ಲಿ ನಿರ್ವಹಿಸಲಾದ ಸಂಕೀರ್ಣ ಮಾರಾಟಗಳು ಅಥವಾ ಹರಾಜಿನ ರಿಜಿಸ್ಟರ್‌ನಲ್ಲಿ ನಮೂದಿಸತಕ್ಕದ್ದು. ಹರಾಜು ಮುಗಿದ ನಂತರ, ಮುಂಗಡ ಹಣ ಠೇವಣಿಯನ್ನು ಯಶಸ್ವಿಯಾಗದ ಬಿಡ್ದುದಾರರಿಗೆ ರಿಜಿಸ್ಟರ್‌ನಲ್ಲಿ (ನಮೂನೆ - XXVI) ಸ್ವೀಕೃತಿಯೊಂದಿಗೆ ಹಿಂದಿರುಗಿಸತಕ್ಕದ್ದು.

ಯಶಸ್ವಿ ಬಿಡ್ದುದಾರರ ಮುಂಗಡ ಹಣ ಠೇವಣಿಗಾಗಿ, ರಸೀದಿಯನ್ನು ನೀಡತಕ್ಕದ್ದು ಮತ್ತು ಠೇವಣಿಯಾಗಿ ಲೆಕ್ಕ ಹಾಕತಕ್ಕದ್ದು. ಯಾವುದೇ ಕಾರಣಕ್ಕಾಗಿ, ಯಶಸ್ವಿಯಾಗದ ಯಾರೇ ಬಿಡ್ದುದಾರನ ಮುಂಗಡ ಹಣ ಠೇವಣಿಯನ್ನು ಹರಾಜಿನ ದಿನದಂದು ಮರುಪಾವತಿಸದಿದ್ದರೆ, ಅದನ್ನು ಯಶಸ್ವಿ ಬಿಡ್ದುದಾರರ ರೀತಿಯಲ್ಲಿ ಲೆಕ್ಕಕ್ಕೆ ತರತಕ್ಕದ್ದು ಮತ್ತು ತರುವಾಯ ಮರುಪಾವತಿ ಮಾಡತಕ್ಕದ್ದು.

(ii) ಮರುಪಾವತಿಸಲಾಗದಿರುವ ಅಥವಾ ಪದ್ಧತಿಯ ಮೂಲಕ ಹಿಂದಕ್ಕೆ ಕ್ಲೇಮು ಮಾಡಲಾಗದಿರುವಂಥ ಸ್ವೀಕರಿಸಿದ ಠೇವಣಿಗಳನ್ನು ಅದನ್ನು ಸಂಗ್ರಹಿಸಿರುವ ವರ್ಷಕ್ಕೆ ಆದಾಯವೆಂದು ಪರಿಗಣಿಸತಕ್ಕದ್ದು.

(iii) ಅಂಗಡಿಗಳು ಮೊದಲಾದವುಗಳ ಹರಾಜಿನ ಸಮಯದಲ್ಲಿ ಸ್ವೀಕರಿಸಿದ ಮರುಪಾವತಿಸಲಾಗದ ಪ್ರೀಮಿಯಂನ್ನು, ಅಂಗಡಿಗಳನ್ನು ಬಾಡಿಗೆಗೆ ಕೊಡಲಾಗಿರುವ ಅವಧಿಯಲ್ಲಿ ಸಮಾನವಾಗಿ ಹಂಚಿಕೆ ಮಾಡುವ ಮೂಲಕ ಆದಾಯವೆಂದು ಪರಿಗಣಿಸತಕ್ಕದ್ದು.

55. ಠೇವಣಿಗಳ ಮರುಪಾವತಿ.- ಠೇವಣಿ ಮರುಪಾವತಿ ಅಥವಾ ಹೊಂದಾಣಿಕೆ ಸಲಹೆಯನ್ನು ಸಿದ್ಧಪಡಿಸುವ ಮೂಲಕ ನಮೂನೆ-XXVI ರಲ್ಲಿ ಠೇವಣಿಗಳ ಮರುಪಾವತಿಯನ್ನು ಮಾಡತಕ್ಕದ್ದು ಮತ್ತು ಅದನ್ನು ಆಯುಕ್ತರು ಠೇವಣಿಗಳ ರಿಜಿಸ್ಟರ್‌ಗೆ ಸಂಬಂದಪಟ್ಟಂತೆ ಸ್ವತ: ತಾನೇ ಮನದಟ್ಟು ಮಾಡಿಕೊಂಡಾಗ ಮತ್ತು ಹಣಕಾಸು ಅಧಿಕಾರಿಯು ವಾಸ್ತವವಾಗಿ ಬಾಕಿ ಉಳಿದಿರುವ ಠೇವಣಿಯೆಂದು ಪ್ರಮಾಣೀಕರಿಸಿದಾಗ ಮಾತ್ರ ಸಂದಾಯ ಮಾಡಲು ಪಾಸು ಮಾಡತಕ್ಕದ್ದು, ಅವನು ಅದರ ಗುರುತಾಗಿ ನಮೂದಿಗೆ ರಿಜಿಸ್ಟರ್‌ನಲ್ಲಿ ತನ್ನ ಚಿಕ್ಕ ಸಹಿಗಳನ್ನು ಹಾಕತಕ್ಕದ್ದು.

56. ಠೇವಣಿಗಳ ರದ್ದು.- ಅವುಗಳ ಮರುಪಾವತಿಗಳ ವಾಯಿದೆ ಮುಗಿದ ನಂತರವೂ ಮೂರು ಕ್ರಮಾನುಗತ ಆರ್ಥಿಕ ವರ್ಷಗಳವರೆಗೆ ಕ್ಲೇಮು ಮಾಡದೆ ಉಳಿದಿರುವ ಠೇವಣಿಗಳನ್ನು ರದ್ದುಗೊಳಿಸತಕ್ಕದ್ದು. ನಮೂನೆ-XXVI ನಲ್ಲಿನ ಸೂಚನೆಯನ್ನು, ಸಂಬಂಧಪಟ್ಟ ಇಲಾಖೆಯು ಸಿದ್ಧಪಡಿಸತಕ್ಕದ್ದು ಮತ್ತು, ಆಯುಕ್ತರಿಂದ ಅನುಮೋದನೆಯನ್ನು ಪಡೆದುಕೊಂಡ ನಂತರ, ಅದನ್ನು ಲೆಕ್ಕದ ಪುಸ್ತಕಗಳಲ್ಲಿ ಮತ್ತು ಠೇವಣಿ ರಿಜಿಸ್ಟರ್‌ನಲ್ಲಿ ಅಗತ್ಯ ನಮೂದುಗಳನ್ನು ಮಾಡುವುದಕ್ಕಾಗಿ ಲೆಕ್ಕಪತ್ರಗಳ ವಿಭಾಗಕ್ಕೆ ಕಳುಹಿಸತಕ್ಕದ್ದು.

57. ಭದ್ರತಾ ಪತ್ರಗಳ ರಿಜಿಸ್ಟರು.- ಪ್ರಾಧಿಕಾರವು, ಗುತ್ತಿಗೆದಾರರು, ಪ್ರಾಧಿಕಾರದ ನೌಕರರು ಮೊದಲಾದವರು ನಗದು ರೂಪದಲ್ಲಲ್ಲದೆ ಇತರ ಯಾವುದೇ ರೂಪದಲ್ಲಿ ಎಂದರೆ, ಪ್ರಾಧಿಕಾರದ ಹೆಸರಿನಲ್ಲಿ ಒತ್ತೆ ಇಡಲಾದ ಉಳಿತಾಯ ಬ್ಯಾಂಕ್‌ನಲ್ಲಿನ ಠೇವಣಿ, ರಾಷ್ಟ್ರೀಯ ಉಳಿತಾಯ ಪ್ರಮಾಣಪತ್ರಗಳು, ಪ್ರಾಧಿಕಾರದ ಬಾಂಡುಗಳು ಮುಂತಾದವುಗಳ ರೂಪದಲ್ಲಿ ಒದಗಿಸಿದ ಎಲ್ಲಾ ಭದ್ರತಾ ಪತ್ರಗಳನ್ನು ನಮೂನೆ-XXVII ರಲ್ಲಿ ಒಂದು ಪ್ರತ್ಯೇಕ ಭದ್ರತಾ ಪತ್ರಗಳ, ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

58. ಸಾಲಗಳು.- (೧) ಪ್ರಾಧಿಕಾರವು ಪಡೆದ ಎಲ್ಲಾ ಸಾಲಗಳನ್ನು ನಮೂನೆ-XXVIII ನಲ್ಲಿ ಸಾಲಗಳ ರಿಜಿಸ್ಟರಿನಲ್ಲಿ ಪ್ರತಿಯೊಂದು ಪುಟದ ಮೇಲೆ ದಾಖಲಿಸತಕ್ಕದ್ದು. ಸಾಲದ ಪ್ರತಿಯೊಂದು ಕಂತನ್ನು ಅದನ್ನು ತೆಗೆದುಕೊಂಡಿರುವಂತೆಯೇ ಅದರಲ್ಲಿ ದಾಖಲಿಸತಕ್ಕದ್ದು ಮತ್ತು ಸಾಲವನ್ನು ಸಂಪೂರ್ಣವಾಗಿ ಮರುಸಂದಾಯ ಮಾಡುವವರೆಗೆ ಮರುಸಂದಾಯ ಮತ್ತು ಬಡ್ಡಿಯ ವಿವರಗಳನ್ನು ಸಹ ಯುಕ್ತ ಅಂಕಣಗಳಲ್ಲಿ ದಾಖಲಿಸತಕ್ಕದ್ದು.

(2) ಸಾಲಗಳ ಮರುಸಂದಾಯಕ್ಕಾಗಿ ಋಣ ತೀರಿಕೆ ನಿಧಿ - ಸಾಲವನ್ನು ಮುಕ್ತ ಮಾರುಕಟ್ಟೆಯಲ್ಲಿ ಸಂಗ್ರಹಿಸುವಲ್ಲಿ ಮತ್ತು ಋಣ ತೀರಿಕೆ ನಿಧಿಯ ಮೂಲಕ ಮರು ಸಂದಾಯವಾಗಬಹುದಾದಲ್ಲಿ, ಒಂದು ಪ್ರತ್ಯೇಕ ರಿಜಿಸ್ಟರನ್ನು ನಮೂನೆ-XXIXರಲ್ಲಿ ನಿರ್ವಹಿಸತಕ್ಕದ್ದು. ಸಂದಾಯಗಳನ್ನು ಸಾಲದ ನಿಬಂಧನೆಗಳ ಪ್ರಕಾರ ಅಥವಾ ಪ್ರಾಧಿಕಾರವು ನಿರ್ಧರಿಸಲಾದಂತೆ ಋಣ ತೀರಿಕೆ ನಿಧಿಗೆ ಮಾಡತಕ್ಕದ್ದು ಮತ್ತು ಬಾಕಿಯನ್ನು ಸಾರ್ವಜನಿಕ ಭದ್ರತೆಗಳಲ್ಲಿ ಹೂಡಿಕೆ ಮಾಡತಕ್ಕದ್ದು. ಋಣ ತೀರಿಕೆ ನಿಧಿ ಬಾಕಿಯನ್ನು, ಒಂದು ಪ್ರತ್ಯೇಕ ಬ್ಯಾಂಕ್ ಖಾತೆಯಲ್ಲಿ ನಿರ್ವಹಿಸತಕ್ಕದ್ದು.

59. ಸಾಲಗಳು, ವಂತಿಗೆಗಳು ಮತ್ತು ಇತರ ನಿಧಿಗಳ ವಿನಿಯೋಗ.- (೧) ನಿರ್ದಿಷ್ಟ ಉದ್ದೇಶಕ್ಕಾಗಿ ಪಡೆದ ಸಾಲಗಳು, ವಂತಿಗೆಗಳು ಮತ್ತು ಇತರ ನಿಧಿಗಳನ್ನು, ಪ್ರತ್ಯೇಕ ಬ್ಯಾಂಕ್ ಖಾತೆಗಳಲ್ಲಿ ಇಡತಕ್ಕದ್ದು. ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ, ಅಂಥ ನಿಧಿಗಳ ಯಾವುದೇ ಭಾಗವನ್ನು, ಅವುಗಳನ್ನು ಯಾವ ಉದ್ದೇಶಕ್ಕೆ ಸಂಗ್ರಹಿಸಲಾಗಿದೆಯೋ ಅದನ್ನು ಹೊರತುಪಡಿಸಿ ಇತರ ಯಾವುದೇ ಉದ್ದೇಶಕ್ಕೆ ತಾತ್ಕಾಲಿಕವಾಗಿಯೂ ಸಹ ವಿನಿಯೋಗಿಸತಕ್ಕದ್ದಲ್ಲ.

(೨) ನಿರ್ದಿಷ್ಟ ಉದ್ದೇಶಕ್ಕಾಗಿ ನಿಗದಿಮಾಡಲಾದ ನಿಧಿಯನ್ನು ಹೊಂದಿರುವ ಪ್ರಾಧಿಕಾರವು, ಆ ಯಾವ ಉದ್ದೇಶಕ್ಕಾಗಿ ಸೃಜಿಸಲಾಗಿದೆಯೋ ಆ ಉದ್ದೇಶಕ್ಕಾಗಿ ನಿಧಿಯನ್ನು ಬಳಸಿಕೊಳ್ಳಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು, ನಮೂನೆ-XXX ರಲ್ಲಿ ಮೀಸಲಿಟ್ಟ ನಿಧಿಗಳ ಒಂದು ರಿಜಿಸ್ಟರ್‌ನ್ನು ನಿರ್ವಹಿಸತಕ್ಕದ್ದು.

(೩) ಬಂಡವಾಳ ವೆಚ್ಚಕ್ಕಾಗಿ ಬಳಸಿದ ನಂತರ ತಗುಲಿದ ವೆಚ್ಚದ ಮೊಬಲಗಿಗೆ ಸಮನಾದ ಮೊಬಲಗನ್ನು ಮೀಸಲಿಟ್ಟ ನಿಧಿಯಿಂದ ಮೀಸಲಿಟ್ಟ ನಿಧಿ (ಬಳಸಲಾದ) ಖಾತೆಗೆ ವರ್ಗಾಯಿಸತಕ್ಕದ್ದು.

60. ಮುಂಗಡಗಳು.- (೧) ಖಾಯಂ ಮುಂಗಡಗಳನ್ನು ಹೊರತುಪಡಿಸಿದ ಮುಂಗಡಗಳಿಗೆ ನಮೂನೆ-XXXI ರಲ್ಲಿ ಒಂದು ಮುಂಗಡಗಳ ರಿಜಿಸ್ಟರ್‌ನಲ್ಲಿ ಮುಂಗಡಗಳ ಲೆಕ್ಕವನ್ನು ನಿರ್ವಹಿಸತಕ್ಕದ್ದು ಮತ್ತು ವಹಿವಾಟುಗಳನ್ನು, ಈ ರಿಜಿಸ್ಟರ್‌ನಲ್ಲಿ ದಾಖಲಿಸತಕ್ಕದ್ದು ಮತ್ತು ವಸೂಲಿಗಳನ್ನು ಮೇಲ್ವಿಚಾರಣೆ ಮಾಡತಕ್ಕದ್ದು. ಮುಂಗಡಗಳ ರಿಜಿಸ್ಟರನ್ನು ಮಾಸಿಕ ಆಧಾರದ ಮೇಲೆ ಸಂವಾದಿ ಲೆಡ್ಜರು ಲೆಕ್ಕಗಳೊಂದಿಗೆ ಹೊಂದಿಕೆ ಮಾಡತಕ್ಕದ್ದು. ಮುಂಗಡವನ್ನು ನಗದು ರೂಪದಲ್ಲಿ ವಸೂಲಿ ಮಾಡಿದಾಗ ಅಥವಾ ಬಿಲ್‌ನಿಂದ ಕಡಿತಗೊಳಿಸುವ ಮೂಲಕ ಹೊಂದಾಣಿಕೆ ಮಾಡಿದಾಗ, ವಸೂಲಿ ಅಥವಾ ಹೊಂದಾಣಿಕೆ ಮಾಡಿರುವ ತಿಂಗಳಿನ ಅಂಕಣದಲ್ಲಿ ಮೂಲ ಮುಂಗಡದಲ್ಲಿ ಸೂಚಿಸತಕ್ಕದ್ದು. ವಸೂಲಿಗಳಿಗೆ ಮಾಸಿಕ ಅಂಕಣಗಳನ್ನು ತಿಂಗಳ ಕೊನೆಯಲ್ಲಿ ಒಟ್ಟುಗೂಡಿಸತಕ್ಕದ್ದು ಮತ್ತು ಲೆಡ್ಜರ್‌ನಲ್ಲಿನ ಮುಂಗಡಗಳಲ್ಲಿ ಸಂವಾದಿ ಜಮೆಯೊಂದಿಗೆ ಸಂಪೂರ್ಣ ಒಪ್ಪಿಗೆಯಾಗುವಂತಿರತಕ್ಕದ್ದು. ರಿಜಿಸ್ಟರ್‌ನ್ನು ವರ್ಷದ ಕೊನೆಯಲ್ಲಿ ಸಮತೋಲನಗೊಳಿಸಿ ಮತ್ತು ಬರಬೇಕಾಗಿರುವ ಶಿಲ್ಕುಗಳ ವಿವರಗಳನ್ನು, ಮುಂದಿನ ವರ್ಷಕ್ಕೆ ಮುಂದುವರಿಸತಕ್ಕದ್ದು.

(೨) ಮುಂಗಡಗಳನ್ನು ಸಂಬಂಧಪಟ್ಟ ನಿಯಮಗಳಿಗೆ ಅನುಸಾರವಾಗಿ ಮಾಡತಕ್ಕದ್ದು. ಪ್ರಾಧಿಕಾರವು ಅನ್ಯಥಾ ಮುಂಗಡ ಆದೇಶಗಳನ್ನು ಮಂಜೂರು ಮಾಡಿದ ಹೊರತು, ಮುಂಗಡದ ಷರತ್ತುಗಳ ಪ್ರಕಾರ ಅವುಗಳನ್ನು ವಸೂಲಿ ಮಾಡತಕ್ಕದ್ದು ಅಥವಾ ಹೊಂದಾಣಿಕೆ ಮಾಡತಕ್ಕದ್ದು.

61. ಬ್ಯಾಂಕ್ ಹೊಂದಾಣಿಕೆ ವಿವರ ಪತ್ರ.- ಬ್ಯಾಂಕ್ ಪುಸ್ತಕಗಳನ್ನು ಪ್ರತಿದಿನ ಮುಕ್ತಾಯಗೊಳಿಸತಕ್ಕದ್ದು. ಪುಸ್ತಕದಲ್ಲಿನ ನಮೂದುಗಳನ್ನು ಖಜಾನೆ ಅಥವಾ ಬ್ಯಾಂಕ್ ವಿವರ ಪತ್ರದಲ್ಲಿನ ನಮೂದುಗಳೊಂದಿಗೆ

ಬಾಬ್ತುವಾರು ಹೋಲಿಕೆ ಮಾಡತಕ್ಕದ್ದು. ಬ್ಯಾಂಕ್ ಪುಸ್ತಕಗಳಿಗೆ ಅನುಸಾರವಾಗಿ ಮುಕ್ತಾಯಗೊಳುವ ಶಿಲ್ಕನ್ನು, ಮಾಸಿಕ ಆಧಾರದ ಮೇಲೆ ಖಜಾನೆ ಅಥವಾ ಬ್ಯಾಂಕ್ ವಿವರ ಪತ್ರದ ಮುಕ್ತಾಯ ಶಿಲ್ಕಿನೊಂದಿಗೆ ಹೊಂದಿಕೆ ಮಾಡತಕ್ಕದ್ದು.

62. ಅವಧಿ ಅಂತ್ಯದ ಕಾರ್ಯವಿಧಾನಗಳು.- (೧) ಈ ನಿಯಮದಲ್ಲಿ ನಿಯಮಿಸಲಾದ ಅವಧಿ ಅಂತ್ಯ ಕಾರ್ಯವಿಧಾನಗಳನ್ನು ಆಯುಕ್ತರು ಅಥವಾ ಈ ಬಗ್ಗೆ ಅವರನ್ನು ಅಧಿಕೃತಗೊಳಿಸಿದ ಅಧಿಕಾರಿಯು ಕಾರ್ಯಗತಗೊಳಿಸತಕ್ಕದ್ದು.

(೨) ಈ ಮುಂದಿನ ಕಾರ್ಯವಿಧಾನಗಳನ್ನು ಪ್ರತಿದಿನ ನಿರ್ವಹಿಸತಕ್ಕದ್ದು, ಎಂದರೆ:-

(i) ನಗದು ಪುಸ್ತಕ ಮತ್ತು ಬ್ಯಾಂಕ್ ಪುಸ್ತಕವನ್ನು ಮುಕ್ತಾಯಗೊಳಿಸುವುದು;

(ii) ನಗದು ಪುಸ್ತಕದ ಜೊತೆಗೆ ನಗದು ಶಿಲ್ಕಿನ ವಾಸ್ತವಿಕ ಪರಿಶೀಲನೆ; ಮತ್ತು

(iii) ಮೂಲ ನಮೂದುಗಳ ಪುಸ್ತಕಗಳೊಂದಿಗೆ, ಎಂದರೆ, ನಗದು ಪುಸ್ತಕ, ಬ್ಯಾಂಕ್ ಪುಸ್ತಕ ಮತ್ತು ಜರ್ನಲ್ ಪುಸ್ತಕಗಳೊಟ್ಟಿಗೆ ಖಾತಾ ಲೆಕ್ಕಗಳನ್ನು ಪರಿಶೀಲಿಸುವುದು:

(3) ಈ ಮುಂದಿನ ಕಾರ್ಯವಿಧಾನಗಳನ್ನು ಪ್ರತೀ ತಿಂಗಳ ಕೊನೆಯಲ್ಲಿ ಕಾರ್ಯಗತಗೊಳಿಸತಕ್ಕದ್ದು; ಎಂದರೆ:-

(i) ಖಾಯಂ ಮುಂಗಡಗಳ ಸಂಬಂಧದಲ್ಲಿ ವಹಿಸಲಾದ ವೆಚ್ಚಗಳನ್ನು ದಾಖಲಿಸುವುದು;

(ii) ಪ್ರತಿನಿಯೋಜನೆಯ ಮೇಲಿರುವ ನೌಕರರಿಗೆ ಸಂಬಂಧಿಸಿದ ನಿವೃತ್ತಿ ವೇತನ ಕೊಡುಗೆ ಮತ್ತು ರಜಾ ಸಂಬಳ ಕೊಡುಗೆಯ ಸಂದಾಯ ಮಾಡುವುದು;

(iii) ಮಳಿಗೆಗಳ ಬಳಕೆಯನ್ನು ದಾಖಲಿಸುವುದಕ್ಕಾಗಿ, ತಿಂಗಳ ಅವಧಿಯಲ್ಲಿ ಉಪಯೋಗಿಸಿದ ದಾಸ್ತಾನಿನ ವಿವರಗಳನ್ನು ಸಂಕಲಿಸುವುದು;

(iv) ಕಲ್ಯಾಣ ನಿಧಿಗಳಿಗೆ ಸಂಬಂದಪಟ್ಟ ವರ್ಗಾವಣೆ ನಮೂದನ್ನು ದಾಖಲಿಸುವುದು;

(v) ಲೆಡ್ಜರು ಖಾತಾ ಲೆಕ್ಕಗಳನ್ನು ಮುಕ್ತಾಯಗೊಳಿಸುವುದು;

(vi) ಸರ್ಕಾರಕ್ಕೆ ಬರಬೇಕಾದ ಬಾಕಿಗಳ ಸಂದಾಯ (ಸಂಬಂಧಪಟ್ಟ ರಿಜಿಸ್ಟರುಗಳಿಗೆ ಸಂಬಂದಪಟ್ಟಂತೆ ಉಪಕರಗಳು, ಮೂಲದಲ್ಲಿ ಕಡಿತಗೊಳಿಸಿದ ತೆರಿಗೆ, ರಾಯಧನ ಮತ್ತು ಸಾಲ ಇತ್ಯಾದಿ)

(vii) ಮಾಸಿಕ ಜಮೆಗಳು ಮತ್ತು ಸಂದಾಯಗಳ ಲೆಕ್ಕದ ಪ್ರಕಾರ ಒಟ್ಟು ಜಮೆಗಳು ಮತ್ತು ಸಂದಾಯಗಳೊಂದಿಗೆ ಜಮೆಗಳು ಮತ್ತು ಸಂದಾಯಗಳ ವರ್ಗೀಕರಿಸಲಾದ ರಿಜಿಸ್ಟರ್‌ನ ಹೊಂದಾಣಿಕೆ;

(viii) ಸಾಮಾನ್ಯ ಲೆಡ್ಜರ್‌ನಲ್ಲಿನ ಸಂವಾದಿ ಲೆಕ್ಕದೊಂದಿಗೆ ಉಪ-ಲೆಡ್ಜರುಗಳು ಅಥವಾ ರಿಜಿಸ್ಟರುಗಳನ್ನು ಹೊಂದಿಸುವುದು;

(ix) ನಿಗದಿಪಡಿಸಲಾದ ನಿಧಿಗಳು ಮತ್ತು ನಿಗದಿಪಡಿಸಲಾದ ನಿಧಿ (ಬಳಸಿದ) ಖಾತೆಯ ಬಳಕೆಯನ್ನು ಹೊಂದಿಸುವುದು;

(x) ವಹಿಸಲಾದ ವೆಚ್ಚದೊಂದಿಗೆ ಆದಾಯಕ್ಕೆ ರಾಜಸ್ವ ವೆಚ್ಚಕ್ಕಾಗಿ ಬಳಸಲಾದ ನಿರ್ದಿಷ್ಟ ಅನುದಾನಗಳ ವರ್ಗಾವಣೆಯನ್ನು ಹೊಂದಿಸುವುದು; ಮತ್ತು

(xi) ಮುಂದಕ್ಕೆ ಹಾಕಲಾದ ಆದಾಯಕ್ಕೆ ವರ್ಗಾವಣೆಗಳೊಂದಿಗೆ ಬಂಡವಾಳ ವೆಚ್ಚಕ್ಕಾಗಿ ನಿರ್ದಿಷ್ಟ ಅನುದಾನಗಳ ಬಳಕೆಯನ್ನು ಹೊಂದಿಸುವುದು.

(೪) ಈ ಮುಂದಿನ ಕಾರ್ಯವಿಧಾನಗಳನ್ನು ಪ್ರತಿಯೊಂದು ಅರ್ಧ ವರ್ಷದ ಕೊನೆಯಲ್ಲಿ ಕಾರ್ಯಗತಗೊಳಿಸತಕ್ಕದ್ದು; ಎಂದರೆ:-

(i) ಪೂರಕ ದಾಖಲೆಗಳು ಮತ್ತು ರಿಜಿಸ್ಟರ್‌ಗಳೊಂದಿಗೆ ಠೇವಣಿಗಳು, ಮುಂಡಗಳು, ಸ್ವೀಕರಣಿಗಳು ಮತ್ತು ಆದಾಯಗಳ ಹೊಂದಿಸುವುದು;

(ii) ಎರವಲುಗಳ ಮೇಲಿನ ಬಡ್ಡಿಯ ಸಂಚಯ;

(iii) ಸಂದಾಯವಾಗದೆ ಉಳಿದಿರುವ ಬಿಲ್‌ಗಳಿಗಾಗಿ ಉಪಬಂಧವನ್ನು ದಾಖಲಿಸುವುದು;

(iv) ಮುಂಗಡಗಳು ಮತ್ತು ಹೂಡಿಕೆಗಳ ಮೇಲಿನ ಬಡ್ಡಿಯ ಸಂಚಯ;

(v) ದಾಖಲೆಗಳು ಮತ್ತು ರಿಜಿಸ್ಟರ್‌ಗಳೊಂದಿಗೆ ಪ್ರಗತಿಯಲ್ಲಿರುವ ಬೃಹತ್ ಕಾಮಗಾರಿ ಲೆಕ್ಕಗಳನ್ನು ಮರುಹೊಂದಾಣಿಕೆ ಮಾಡುವುದು;

(vi) ಅರ್ಧ ವರ್ಷಕ್ಕಾಗಿ ಸವಕಳಿ ಬಗ್ಗೆ ಉಪಬಂಧ; ಮತ್ತು

(vii) ನಿರ್ದಿಷ್ಟ ಅನುದಾನಗಳು ಅಥವಾ ವಂತಿಗೆಗಳಿಂದ ನಿರ್ಮಿಸಲಾದ ಅಥವಾ ಆರ್ಜಿಸಲಾದ ಸ್ವತ್ತುಗಳ ಸವಕಳಿಯ ಪ್ರಮಾಣಕ್ಕನುಸಾರವಾಗಿ ಆದಾಯಕ್ಕೆ ಮುಂದಕ್ಕೆ ಹಾಕಲಾದ ಆದಾಯದಿಂದ ವರ್ಗಾಯಿಸುವುದು.

(೫) ಈ ಮುಂದಿನ ಕಾರ್ಯವಿಧಾನಗಳನ್ನು ಪ್ರತಿಯೊಂದು ಆರ್ಥಿಕ ವರ್ಷದ ಕೊನೆಯಲ್ಲಿ ಕಾರ್ಯಗತಗೊಳಿಸತಕ್ಕದ್ದು; ಎಂದರೆ:-

(i) ಮಳಿಗೆಗಳ ವಾಸ್ತವಿಕ ಪರಿಶೀಲನೆ ಮತ್ತು ಮರು ಹೊಂದಿಕೆ ಮಾಡುವುದು;

(ii) ಸ್ಥಿರಾಸ್ತಿಗಳ ವಾಸ್ತವಿಕ ಪರಿಶೀಲನೆ ಮಾಡುವುದು;

(iii) ಮುಂಗಡಗಳ ಎಲ್ಲಾ ಪ್ರವರ್ಗಗಳನ್ನು ಸ್ಥಿರೀಕರಿಸುವುದು;

(iv) ಬಾಕಿನಿಂತಿರುವ ಸಾಲಗಳ ಮೇಲೆ ಸರ್ಕಾರದಿಂದ ಮತ್ತು ಸರ್ಕಾರೀ ಏಜೆನ್ಸಿಗಳಿಂದ ಸ್ಥಿರೀಕರಣ;

(v) ಈ ಸಂಬಂಧದಲ್ಲಿ ಕಾರ್ಯ ನೀತಿಗಳಿಗೆ ಅನುಸಾರವಾಗಿ ವಿವಿಧ ಬಗೆಯ ಆಸ್ತಿಗಳ ಮೇಲಿನ ಸವಕಳಿಗೆ ಸಂಬಂದಿಸಿದಂತೆ ಉಪಬಂಧ ಕಲ್ಪಿಸುವುದು;

(vi) ಈ ಸಂಬಂಧದಲ್ಲಿ ಒದಗಿಸಲಾದ ಮಾನದಂಡಗಳಿಗೆ ಅನುಸಾರವಾಗಿ ಸ್ವೀಕಾರಾರ್ಹ ಮೊಬಲಗುಗಳಿಗೆ ಉಪಬಂಧ ಕಲ್ಪಿಸುವುದು; ಮತ್ತು

(vii) ಆದಾಯ ಮತ್ತು ವೆಚ್ಚದ ಖಾತೆಗೆ ವರ್ಗಾವಣೆ ಮಾಡುವ ಮೂಲಕ, ಲೆಡ್ಜರ್‌ನಲ್ಲಿರುವ ರಾಜಸ್ವ ಲೆಕ್ಕಗಳನ್ನು ವಾರ್ಷಿಕವಾಗಿ ಮುಕ್ತಾಯಗೊಳಿಸುವುದು;

63. ಮಾಸಿಕ ಪರೀಕ್ಷಾರ್ಥ ಆಯವ್ಯಯ ಪತ್ರ.- (೧) ವಿವಿಧ ಖಾತೆ ಸಂಕೇತಗಳಲ್ಲಿ ಎಲ್ಲಾ ಲೆಡ್ಜರ್ ಶಿಲ್ಕುಗಳನ್ನು ಹೊರತೆಗೆಯುವ ಮೂಲಕ ಮತ್ತು ತರುವಾಯ ಬರುವ ತಿಂಗಳಿನ 20ನೇ ದಿನದ ಮುಂಚೆ ಆಯುಕ್ತರು ಪ್ರಮಾಣೀಕರಿಸುವ ಮೂಲಕ ಹಣಕಾಸು ಅಧಿಕಾರಿಯು ಪ್ರತ್ಯೇಕವಾಗಿ ಪ್ರತಿಯೊಂದು ನಿಧಿಗೆ ಒಂದು ಮಾಸಿಕ ಪರೀಕ್ಷಾರ್ಥ ಆಯವ್ಯಯ ಪತ್ರವನ್ನು ನಮೂನೆ-XXXIII ರಲ್ಲಿ ಸಿದ್ಧಪಡಿಸತಕ್ಕದ್ದು.

(೨) ಮಾಸಿಕ ಜಮೆಗಳು ಮತ್ತು ಸಂದಾಯಗಳ ಲೆಕ್ಕ ಮತ್ತು ಪರೀಕ್ಷಾರ್ಥ ಆಯವ್ಯಯ ಪತ್ರವನ್ನು ನಂತರ ಬರುವ ತಿಂಗಳಿನ 30ನೇ ದಿನದಿಂದ ಲೆಕ್ಕಪರಿಶೋಧಕರಿಗೆ ಕಳುಹಿಸತಕ್ಕದ್ದು.

64. ವಾರ್ಷಿಕ ಆರ್ಥಿಕ ವಿವರಣಾ ಪಟ್ಟಿಗಳು.- (೧) ಆಯುಕ್ತರು, ಆರ್ಥಿಕ ವರ್ಷದ ಅಂತ್ಯದಿಂದ ಎರಡು ತಿಂಗಳುಗಳೊಳಗೆ, ಪ್ರತಿ ವರ್ಷಕ್ಕೆ, ಆರ್ಥಿಕ ವಿವರಣಾ ಪಟ್ಟಿಗಳನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು,

(೨) ಆರ್ಥಿಕ ವಿವರಣಾಪಟ್ಟಿಗಳು,-

(ಎ) ವರ್ಷದ ಜಮೆಗಳು ಮತ್ತು ಸಂದಾಯಗಳ ಲೆಕ್ಕ (ನಮೂನೆ-XXXII);

(ಬಿ) ವರ್ಷದ ಮಾರ್ಚ್ 31 ರಂದು ಇದ್ದಂತೆ ಜಮಾ-ಖರ್ಚು ಪಟ್ಟಿ (ನಮೂನೆ-XXXIV);

(ಸಿ) ವರ್ಷದ ಆದಾಯ ಮತ್ತು ವೆಚ್ಚದ ಲೆಕ್ಕ (ನಮೂನೆ-XXXV);

(ಡಿ) ಆರ್ಥಿಕ ವಿವರಣಾಪಟ್ಟಿಗಳನ್ನು ಹಾಜರುಪಡಿಸುವಲ್ಲಿ ಅನುಸರಿಸಿದ ಮಹತ್ವಪೂರ್ಣವಾದ ಲೆಕ್ಕದ ನೀತಿಗಳು; ಮತ್ತು

(ಇ) ಅನಿರೀಕ್ಷಿತ ಹೊಣೆಗಾರಿಕೆಗಳನ್ನು ಬಹಿರಂಗಪಡಿಸತಕ್ಕ ಲೆಕ್ಕಪತ್ರಗಳಿಗೆ ಟಿಪ್ಪಣಿಗಳನ್ನು ಮತ್ತು ಸ್ಪಷ್ಟವಾಗಿ ಆರ್ಥಿಕ ವಿವರಪಟ್ಟಿಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಉಪಯುಕ್ತವಾಗಬಹುದಾದಂಥ ಇತರ ಮಾಹಿತಿಯನ್ನು,

- ಒಳಗೊಂಡಿರತಕ್ಕದ್ದು.

(೩) ಈ ನಿಯಮಗಳು ಅನ್ವಯವಾಗುವ ಮೊದಲ ವರ್ಷದ ಸಂದರ್ಭದ ಹೊರತು ಹಿಂದಿನ ಆರ್ಥಿಕ ವರ್ಷದ ಅವಧಿಗೆ ಆರ್ಥಿಕ ವಿವರ ಪಟ್ಟಿಗಳ ಮೇಲಿನ ತೌಲನಿಕ ಮೊಬಲಗುಗಳನ್ನು ನಮೂದಿಸತಕ್ಕದ್ದು.

(೪) ಆಯುಕ್ತರು ಆರ್ಥಿಕ ವಿವರಪಟ್ಟಿಗಳನ್ನು ಸಿದ್ಧಪಡಿಸಿದ ನಂತರ, ಆರ್ಥಿಕ ವರ್ಷದ ಅಂತ್ಯದಿಂದ ಎರಡು ತಿಂಗಳುಗಳೊಳಗೆ ಲೆಕ್ಕಪರಿಶೋಧಕರಿಗೆ ಅವುಗಳನ್ನು ಸಲ್ಲಿಸತಕ್ಕದ್ದು.

(೫) ಆರ್ಥಿಕ ವಿವರಪಟ್ಟಿ ಲೆಕ್ಕಪರಿಶೋಧನೆಯನ್ನು, ಆರ್ಥಿಕ ವರ್ಷದ ಅಂತ್ಯದಿಂದ ನಾಲ್ಕು ತಿಂಗಳುಗಳೊಳಗೆ ಪೂರ್ಣಗೊಳಿಸತಕ್ಕದ್ದು. ಲೆಕ್ಕಪರಿಶೋಧಿತ ಆರ್ಥಿಕ ವಿವರ ಪಟ್ಟಿಗಳನ್ನು ಅಳವಡಿಸಿಕೊಳ್ಳುವುದಕ್ಕಾಗಿ ಪ್ರಾಧಿಕಾರದ ಮುಂದೆ ಇಡತಕ್ಕದ್ದು.

(೬) ಪ್ರಾಧಿಕಾರವು ಆರ್ಥಿಕ ವರ್ಷದ ಅಂತ್ಯದಿಂದ ಐದು ತಿಂಗಳುಗಳೊಳಗೆ ಲೆಕ್ಕಪರಿಶೋಧಿತ ಆರ್ಥಿಕ ವಿವರಪಟ್ಟಿಗಳನ್ನು ಅಳವಡಿಸಿಕೊಳ್ಳತಕ್ಕದ್ದು.

65. ಪ್ರಾಧಿಕಾರದ ಸಿಬ್ಬಂದಿ.- (೧) ಹುದ್ದೆಗಳ ಸಂಖ್ಯೆ, ಹುದ್ದೆಗಳ ಪದನಾಮ, ಪ್ರಾಧಿಕಾರದ ಅಧಿಕಾರಿಗಳ ಮತ್ತು ಸಿಬ್ಬಂದಿಯ ನೇಮಕಾತಿಯ ವಿಧಾನವು ಅನುಸೂಚಿ-I ರಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು ಮತ್ತು ಸಿಬ್ಬಂದಿ ಮತ್ತು ಅಧಿಕಾರಿಗಳ ಯಾವುದೇ ಹೆಚ್ಚಿನ ಅಗತ್ಯತೆಯನ್ನು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅನುಮೋದಿಸತಕ್ಕದ್ದು:

ಪರಂತೂ, ಈ ನಿಯಮಗಳ ಪ್ರಾರಂಭಕ್ಕೂ ಮುಂಚೆ ಸರ್ಕಾರವು ಹೊರಡಿಸಿದ ಯಾವುದೇ ಅಧಿಸೂಚನೆ ಅಥವಾ ಮಾಡಿದ ನೇಮಕಾತಿ ಅಥವಾ ಪ್ರತಿನಿಯೋಜನೆಯನ್ನು ನಿಯಮಗಳಿಗೆ ಅಸಂಗತವಾಗಿರದಿರುವಷ್ಟರ ಮಟ್ಟಿಗೆ ಈ ನಿಯಮಗಳ ಅಡಿಯಲ್ಲಿ ಹೊರಡಿಸಲಾಗಿದೆ ಅಥವಾ ಮಾಡಲಾಗಿದೆ ಎಂದು ಭಾವಿಸತಕ್ಕದ್ದು.

ಮತ್ತೂ ಪರಂತೂ, ಯಾವುದೇ ಹುದ್ದೆಯನ್ನು ನೇರ ನೇಮಕಾತಿ ಅಥವಾ ಮುಂಬಡ್ತಿ ಅಥವಾ ಪ್ರತಿನಿಯೋಜನೆಯ ಮೂಲಕ ಭರ್ತಿ ಮಾಡಲು ಸಾಧ್ಯವಾಗದಿದ್ದಲ್ಲಿ, ಅಂಥ ಹುದ್ದೆಗಳನ್ನು ತಾತ್ಕಾಲಿಕ ಅವಧಿಗಾಗಿ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಬಹುದು.

(೨) ಸೇವಾ ಷರತ್ತುಗಳು ಅನುಸೂಚಿ-II ರಲ್ಲಿ ನಿರ್ದಿಷ್ಟಪಡಿಸಲಾದಂತೆ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯವಾಗಬಹುದಾದ ವಿವಿಧ ಸೇವಾ ನಿಯಮಗಳಿಗೆ ಅನುಸಾರವಾಗಿ ಇರತಕ್ಕದ್ದು.

ಪರಂತೂ, ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ಉಪಬಂಧಗಳನ್ನು, ಅನುಸೂಚಿ- II ರಲ್ಲಿ ನಿರ್ದಿಷ್ಟಪಡಿಸಿದ ಮಾರ್ಪಾಡುಗಳೊಂದಿಗೆ ಪ್ರಾಧಿಕಾರದ ನೌಕರರಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

(೩) ಕಾಲಕಾಲಕ್ಕೆ ಸರ್ಕಾರವು ಹೊರಡಿಸಲಾದಂತೆ ನೇಮಕಾತಿಗಳಲ್ಲಿನ ಮೀಸಲಾತಿಗೆ ಸಂಬಂಧಿಸಿದ ನಿಯಮಗಳು ಮತ್ತು ಆದೇಶಗಳನ್ನು ಪ್ರಾಧಿಕಾರವು ಅನುಸರಿಸತಕ್ಕದ್ದು.

66. ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಒದಗಿಸಬೇಕಾದ ವರದಿಗಳು ಮತ್ತು ವಿವರಪಟ್ಟಿಗಳು.- (೧) ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಒದಗಿಸಬೇಕಾದ ವರದಿಗಳು ಮತ್ತು ವಿವರ ಪಟ್ಟಿಗಳು,-

(ಎ) ನಿಕಟಪೂರ್ವ ವರ್ಷದ ಅವಧಿಗೆ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯ ಎಲ್ಲ ಕಾರ್ಯಚಟುವಟಿಕೆಗಳ ವಿವರಣೆಯನ್ನು;

(ಬಿ) ನಿಕಟಪೂರ್ವದ ವರ್ಷದ ಅವಧಿಗೆ ವಾರ್ಷಿಕ ಲೆಕ್ಕ ಪತ್ರಗಳನ್ನು; ಮತ್ತು

(ಸಿ) ಮುಂದಿನ ವರ್ಷದ ಅವಧಿಗೆ ಕ್ರಿಯಾ ಯೋಜನೆಯನ್ನು ಒಳಗೊಂಡಿರತಕ್ಕದ್ದು.

(೨) ವರದಿಯನ್ನು ಪ್ರತಿ ವರ್ಷದ ಮೇ 1ನೇ ದಿನದ ಮುಂಚೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(೩) ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಅಧಿನಿಯಮದ 25ನೇ ಪ್ರಕರಣದಲ್ಲಿ ಉಪಬಂಧಿಸಲಾದಂತೆ ತನ್ನ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು.

(೪) ಮೇಲಿನವುಗಳ ಜೊತೆಗೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು, ಈ ಬಗ್ಗೆ ಯಾವುದೇ ಹೆಚ್ಚುವರಿ ಕಾರ್ಯಭಾರಗಳನ್ನು ವಹಿಸಿಕೊಡಬಹುದು.

67. ವಾರ್ಷಿಕ ವರದಿಯನ್ನು ಸಿದ್ಧಪಡಿಸುವಿಕೆ :- ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ವಾರ್ಷಿಕ ವರದಿಯು,-

(ಎ) ನಿಕಟ ಪೂರ್ವ ವರ್ಷದ ಅವಧಿಗೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಎಲ್ಲಾ ಕಾರ್ಯಚಟುವಟಿಕೆಗಳ ವಿವರಣೆ;

(ಬಿ) ನಿಕಟ ಪೂರ್ವದ ವರ್ಷದ ಅವಧಿಗೆ ವಾರ್ಷಿಕ ಲೆಕ್ಕಪತ್ರಗಳು; ಮತ್ತು

(ಸಿ) ಮುಂದಿನ ವರ್ಷದ ಅವಧಿಗೆ ಕ್ರಿಯಾ ಯೋಜನೆಯೊಂದಿಗೆ

ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಿರತಕ್ಕದ್ದು.

(2) ವಾರ್ಷಿಕ ವರದಿಯನ್ನು, ಪ್ರತಿಯೊಂದು ವರ್ಷದ ಮೇ ೫ಕ್ಕೂ ಮೊದಲು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(೩) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರವು ಅಧಿನಿಯಮದ 26ನೇ ಪ್ರಕರಣದಡಿಯಲ್ಲಿ ಉಪಬಂಧಿಸಲಾದಂತೆ ತನ್ನ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು.

68. ಸದಸ್ಯರಿಗೆ ಭತ್ಯೆಗಳು.- (೧) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪರಿಷತ್ತಿನ ಸಭೆಗಳಿಗೆ ಹಾಜರಾಗಲು ಸರ್ಕಾರೇತರ ಸದಸ್ಯರಿಗೆ ಸಂದಾಯ ಮಾಡಬೇಕಾದ ಉಪವೇಶನ ಫೀಜು ಅಥವಾ ಪ್ರಯಾಣ ಭತ್ಯೆ ಅಥವಾ ದಿನ ಭತ್ಯೆಗಳು, ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 2015ರ ಪ್ರಯಾಣ ಭತ್ಯೆಯು (ಸಮಿತಿಗಳ, ಆಯೋಗಗಳ ಅಥವಾ ಇತರ ನಿಕಾಯಗಳ ಸರ್ಕಾರೇತರ ಸದಸ್ಯರುಗಳಿಗೆ) ಸಂದಾಯದ ಉಪಬಂಧಗಳಿಗೆ ಅನುಸಾರವಾಗಿರತಕ್ಕದ್ದು.

69. ಮಧ್ಯಮಾವಧಿ ವಿತ್ತೀಯ ಯೋಜನೆ.- (೧) ಪ್ರಾಧಿಕಾರವು, ಮಾರಣಾಂತಿಕ ರಸ್ತೆ ಅಪಘಾತಗಳನ್ನು ಇಳಿಸುವುದಕ್ಕೆ ಸಂಬಂದಪಟ್ಟಂತೆ ಅದು ಸಾಧಿಸತಕ್ಕ ವಾಸ್ತವಿಕ ಗುರಿಯನ್ನು ಆಧರಿಸಿ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ಸಿದ್ಧಪಡಿಸತಕ್ಕದ್ದು.

(೨) ರಸ್ತೆ ಸುರಕ್ಷತಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಗೊತ್ತುಪಡಿಸಲಾದ ಎಲ್ಲಾ ಹಿತಾಸಕ್ತಿದಾರ ಇಲಾಖೆಗಳು ಮಾರಣಾಂತಿಕ ರಸ್ತೆ ಅಪಘಾತಗಳನ್ನು ಇಳಿಸುವುದಕ್ಕೆ ಪರಿಣಾಮಕಾರಿಯಾಗಿ ಕೊಡುಗೆ ನೀಡಬಹುದಾಗಿರುವಂಥ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು ಮತ್ತು ಅದನ್ನು ಪ್ರಾಧಿಕಾರವು ಗೊತ್ತುಪಡಿಸಲಾದಂಥ ದಿನಾಂಕಕ್ಕೆ ಮೊದಲು ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

(೩) ಆಯುಕ್ತರು, ಪ್ರಾಧಿಕಾರದ ಮಧ್ಯಮಾವಧಿ ವಿತ್ತೀಯ ಯೋಜನೆಯ ಎಲ್ಲಾ ಹಿತಾಸಕ್ತಿದಾರ ಇಲಾಖೆಗಳು ಸಲ್ಲಿಸಿದ ಅವುಗಳ ವಾಸ್ತವಿಕ ಮತ್ತು ಆರ್ಥಿಕ ಗುರಿಗಳೊಂದಿಗೆ ಎಲ್ಲಾ ಕಾರ್ಯಕ್ರಮಗಳನ್ನು ಸಂಕಲಿಸತಕ್ಕದ್ದು ಮತ್ತು ಪ್ರಾಧಿಕಾರವು ಗೊತ್ತುಪಡಿಸಲಾದಂಥ ದಿನಾಂಕಕ್ಕೆ ಮೊದಲು ಪ್ರಾಧಿಕಾರದ ಮುಂದೆ ಅದನ್ನು ಅನುಮೋದನೆಗಾಗಿ ಸಲ್ಲಿಸತಕ್ಕದ್ದು.

(೪) ಆಯುಕ್ತರು ಪ್ರಾಧಿಕಾರದ ವಾರ್ಷಿಕ ಬಜೆಟ್ ಅನ್ನು ಸಿದ್ಧಪಡಿಸುವಾಗ, ಪ್ರಾಧಿಕಾರವು ಅನುಮೋದಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಸೂಚಿಸಲಾದ ವಾಸ್ತವಿಕ ಮತ್ತು ಆರ್ಥಿಕ ಗುರಿಗಳಿಗೆ ನಿಷ್ಠನಾಗಿರತಕ್ಕದ್ದು.

(೫) ಪ್ರಾಧಿಕಾರವು ಮಾರಣಾಂತಿಕ ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವುದಕ್ಕೆ ಸಂಬಂಧಪಟ್ಟಂತೆ ನಿಗದಿಪಡಿಸಲಾದ ಗುರಿಗಳನ್ನು ಸಾಧಿಸುವಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ನಿಯತಕಾಲಿಕವಾಗಿ ಪರಿಷ್ಕರಿಸಲು ಪ್ರಾಧಿಕಾರವು ಸಕ್ಷಮವಾಗಿರುವುದು.

70. ಆಯವ್ಯಯ ಪತ್ರವನ್ನು ಮಂಡಿಸುವುದು.- (೧) ಆಯುಕ್ತರು, ಮುಂದಿನ ಆರ್ಥಿಕ ವರ್ಷದ ಅವಧಿಯಲ್ಲಿ ಪ್ರಾಧಿಕಾರದ ನಿರೀಕ್ಷಣಾ ಸ್ವೀಕೃತಿಗಳು ಮತ್ತು ಸಂದಾಯಗಳ ವಾರ್ಷಿಕ ಅಂದಾಜನ್ನು ನಮೂನೆ-XXXVII ನಲ್ಲಿ ಆಯವ್ಯಯ ಪತ್ರ ಸಂಕ್ಷಿಪ್ತ ವಿವರಣಾ ಪಟ್ಟಿಯಲ್ಲಿ ಸಿದ್ಧಪಡಿಸತಕ್ಕದ್ದು ಮತ್ತು ಸರ್ಕಾರದ ಆಯವ್ಯಯ ಪತ್ರ ಕ್ಯಾಲೆಂಡರ್ ಪ್ರಾರಂಭವಾಗುವುದಕ್ಕೆ ಮೊದಲು ನಡೆಯುವ ಸಭೆಯಲ್ಲಿ ಪ್ರಾಧಿಕಾರದ ಮುಂದೆ ಅದನ್ನು ಅನುಮೋದನೆಗಾಗಿ ಇಡತಕ್ಕದ್ದು.

(2) ಆಯವ್ಯಯ ಪತ್ರದ ಸಂಕ್ಷಿಪ್ತ ವಿವರ ಪತ್ರವು ಈ ಕೆಳಗೆ ವಿವರಿಸಿದ ಪೂರಕ ವಿವರಣಾ ಪತ್ರಗಳ ಜೊತೆಗೆ ಇರತಕ್ಕದ್ದು:-

(ಎ) ನಮೂನೆ-XXXVIII ರಲ್ಲಿ ರಾಜಸ್ವ ಜಮೆಗಳ ಅಂದಾಜು;

(ಬಿ) ನಮೂನೆ-XXXIX ರಲ್ಲಿ ರಾಜಸ್ವ ಸಂದಾಯಗಳ ಅಂದಾಜು;

(ಸಿ) ನಮೂನೆ-XL ರಲ್ಲಿ ಬಂಡವಾಳ ಸ್ವೀಕೃತಿಗಳ ಅಂದಾಜು;

(ಡಿ) ನಮೂನೆ-XLI ರಲ್ಲಿ ಬಂಡವಾಳ ಸಂದಾಯಗಳ ಅಂದಾಜು;

(ಇ) ನಮೂನೆ-XLII ರಲ್ಲಿ ಅಸಾಧಾರಣ ಜಮೆಗಳ ಅಂದಾಜು; ಮತ್ತು

(ಎಫ್) ನಮೂನೆ-XLIII ರಲ್ಲಿ ಅಸಾಧಾರಣ ಸಂದಾಯಗಳ ಅಂದಾಜು.

(೩) ಪ್ರಾಧಿಕಾರದ ವಾರ್ಷಿಕ ಬಜೆಟ್‌ಅನ್ನು ಸಿದ್ಧಪಡಿಸುವಲ್ಲಿ ಉಪಯೋಗಿಸಿದ ಬಜೆಟ್ ವಿವರಣಾ ಪತ್ರಗಳ ನಮೂನೆಗಳು, ಈ ನಿಯಮಗಳಿಗೆ ಅನುಬಂಧಿಸಲಾದ ಅನುಸೂಚಿ-III ರಲ್ಲಿ ಉಪಬಂಧಿಸಲಾದಂತೆ ಇರತಕ್ಕದ್ದು.

71. ಆಯವ್ಯಯ ಪತ್ರದ ಅಂದಾಜನ್ನು ಸಿದ್ಧಪಡಿಸುವ ರೀತಿ.- ಅಧಿನಿಯಮದ 15ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅಗತ್ಯತೆಗಳ ಜೊತೆಗೆ, ಆಯುಕ್ತರು ಈ ಮುಂದಿನ ರೀತಿಯಲ್ಲಿ ಆಯವ್ಯಯ ಅಂದಾಜನ್ನು ಸಿದ್ಧಪಡಿಸತಕ್ಕದ್ದು,-

(i) ಆಯವ್ಯಯ ಅಂದಾಜನ್ನು ವರ್ಷದ ಅವಧಿಯಲ್ಲಿ ಸ್ವೀಕರಿಸಲು ಅಥವಾ ಸಂದಾಯ ಮಾಡಲು ನಿರೀಕ್ಷಿಸಿರುವುದಕ್ಕಾಗಿ ಸಿದ್ಧಪಡಿಸತಕ್ಕದ್ದು ಮತ್ತು ವರ್ಷದೊಳಗೆ ಬಾಕಿ ಬೀಳುವ ಸಂಭವವಿರುವ ಬೇಡಿಕೆಗಳು ಅಥವಾ ಹೊಣೆಗಾರಿಕೆಗಳಿಗಾಗಿ ಅಲ್ಲ;

(ii) ಆಯವ್ಯಯ ಪತ್ರವನ್ನು ಯಾವ ವರ್ಷಕ್ಕೆ ಸಿದ್ಧಪಡಿಸಲಾಗುತ್ತಿದೆಯೋ ಆ ವರ್ಷದ ಅವಧಿಯಲ್ಲಿ ಸಂದಾಯ ಮಾಡಬೇಕೆಂದು ನೀರೀಕ್ಷಿಸಲಾಗಿರುವ ಎಲ್ಲಾ ಅಸ್ತಿತ್ವದಲ್ಲಿರುವ ಹೊಣೆಗಾರಿಕೆಗಳನ್ನು ದೃಢಪಡಿಸಿಕೊಳ್ಳತಕ್ಕದ್ದು ಮತ್ತು ಉಪಬಂಧಿಸತಕ್ಕದ್ದು;

(iii) ಒಟ್ಟು ಸ್ವೀಕೃತಿಗಳು ಮತ್ತು ಒಟ್ಟು ಸಂದಾಯಗಳನ್ನು ಆಯವ್ಯಯ ಪತ್ರದಲ್ಲಿ ಪ್ರತಿ ಲೆಕ್ಕ ಶೀರ್ಷಿಕೆಗಾಗಿ ನಮೂದಿಸತಕ್ಕದ್ದು;

(iv) ಬಜೆಟ್‌ನಲ್ಲಿ ನಮೂದಿಸಲಾದ ಅಂಕಿ ಅಂಶಗಳು ಬಜೆಟ್ ವಿವರ ಪತ್ರಗಳಲ್ಲಿ ವಿವಿಧ ಅಂಕಿಅಂಶಗಳಲ್ಲಿ ಬರುವ ಆಧಾರವನ್ನು ತೋರಿಸುವ ಸವಿವರವಾದ ಕಾರ್ಯಪಟ್ಟಿಯನ್ನು ಆಧರಿಸಿರತಕ್ಕದ್ದು;

(v) ಅಗತ್ಯಪಡಿಸಿದ ಪ್ರಮುಖ ವಿವರಣೆಗಳು ಮುಂಬರುವ ವರ್ಷ ಮತ್ತು ಪ್ರಸಕ್ತ ವರ್ಷದ ಅವಧಿಗೆ ಪ್ರಸ್ತಾಪಿಸಲಾದ ಅಂದಾಜುಗಳ ನಡುವಿನ ವ್ಯತ್ಯಾಸಗಳಿಗೆ ಸಂಬಂಧಪಟ್ಟಿರತಕ್ಕದ್ದು. ವಿವರಣೆಯು ಚಿಕ್ಕದಾಗಿರತಕ್ಕದ್ದು ಮತ್ತು ವಸ್ತು ವಿಷಯದೊಂದಿಗೆ ಸುಸಂಗತವಾಗಿರತಕ್ಕದ್ದು;

(vi) ಸರಾಸರಿ ಪ್ರವೃತ್ತಿಗಳಿಂದ ತುಂಬಾ ಭಿನ್ನವಾಗುವ ಸಂಭವವಿರಬಹುದಾದ ಯಾವುದೇ ಅಸಾಮಾನ್ಯ ಜಮೆಗಳು ಅಥವಾ ಸಂದಾಯಗಳಾಗಿದ್ದರೆ, ಅವುಗಳನ್ನು ಬಜೆಟ್‌ನ ವಿವರಣಾತ್ಮಕ ಟಿಪ್ಪಣಿಗಳಲ್ಲಿ ಸಂಪೂರ್ಣವಾಗಿ ವಿವರಿಸಿರಬೇಕು; ಮತ್ತು

(vii) ಬಜೆಟ್ ಅಂದಾಜನ್ನು ತಯಾರಿಸುವಾಗ, ಆಯುಕ್ತರು, ಅದರ ಸಾಮಾನ್ಯ ವೆಚ್ಚವು ಅದರ ಸಾಮಾನ್ಯ ಸ್ವೀಕೃತಿಗಳೊಳಗೆ ಉತ್ತಮವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಮತ್ತು ಜಮೆಗಳು ಮತ್ತು ವೆಚ್ಚದ ಎಲ್ಲಾ ವಿಶೇಷ ಬಾಬ್ತುಗಳನ್ನು ಪ್ರತ್ಯೇಕವಾಗಿ ತೋರಿಸತಕ್ಕದ್ದು. ಸಾಮಾನ್ಯ ಸಂಪನ್ಮೂಲಗಳನ್ನು ಮೀರುವುದನ್ನು ತಪ್ಪಿಸಲು ಸಂಪನ್ಮೂಲಗಳಿಗೆ ಸಂಬಂದಪಟ್ಟಂತೆ ವೆಚ್ಚದ ಯಾವುದೇ ಹೆಚ್ಚಳವನ್ನು ಎಚ್ಚರಿಕೆಯಿಂದ ಪರಿಗಣಿಸತಕ್ಕದ್ದು.

72. ವೆಚ್ಚದ ಬದ್ಧತೆ.- ಅಂಥ ವೆಚ್ಚಕ್ಕಾಗಿ ಸಾಕಷ್ಟು ಆಯವ್ಯಯ ಅವಕಾಶ ಲಭ್ಯವಿದ್ದ ಹೊರತು ಮಂಜೂರಾತಿ ಆದೇಶ ಅಥವಾ ಕೆಲಸದ ಆದೇಶವನ್ನು ಹೊರಡಿಸುವ ಮೂಲಕ ಯಾವುದೇ ವೆಚ್ಚವನ್ನು ಮಾಡತಕ್ಕದ್ದಲ್ಲ.

73. ಪೂರಕ ಅಂದಾಜುಗಳು ಅಥವಾ ಆಯವ್ಯಯದ ಪುನರ್ವಿನಿಯೋಗ.- (1) ಮಂಜೂರಾದ ಬಜೆಟ್‌ನಲ್ಲಿ ಒದಗಿಸಿಲ್ಲದ ವಹಿಸಿದ ಹೆಚ್ಚುವರಿ ವೆಚ್ಚಕ್ಕಾಗಿ ಆಯುಕ್ತರು, ಪೂರಕ ಅಂದಾಜುಗಳ ಮೂಲಕ ಹೆಚ್ಚಿನ ಅನುದಾನಗಳನ್ನು ಅಥವಾ ಪ್ರಾಧಿಕಾರದಿಂದ ಬಜೆಟ್‌ನ ಪುನರ್ವಿನಿಯೋಗವನ್ನು ಕೋರತಕ್ಕದ್ದು ಮತ್ತು ಸಾಕಷ್ಟು ಬಜೆಟ್ ವ್ಯವಸ್ಥೆಯನ್ನು ಮಾಡಿದ ತರುವಾಯ ಮಾತ್ರ ಅವರು ಮಂಜೂರಾತಿ ಆದೇಶ ಅಥವಾ ಕಾರ್ಯಾದೇಶವನ್ನು ಹೊರಡಿಸತಕ್ಕದ್ದು. ಹೆಚ್ಚುವರಿ ಅನುದಾನಗಳು ಅಥವಾ ಬಜೆಟ್‌ನ ಪುನರ್ವಿನಿಯೋಗಕ್ಕಾಗಿ ಯಾವುದೇ ಪ್ರಸ್ತಾವವನ್ನು ಪ್ರಾಧಿಕಾರವು ಅನುಮೋದನೆಗಾಗಿ, ನಮೂನೆ-XLIV ರಲ್ಲಿ ಸಲ್ಲಿಸತಕ್ಕದ್ದು.

(2) ಪ್ರಾಧಿಕಾರವು ಇತರ ಬಜೆಟ್ ಶೀರ್ಷಿಕೆಗಳ ಅಡಿಯಲ್ಲಿ ಸಾಕಷ್ಟು ಉಳಿತಾಯಗಳನ್ನು ತೋರಿಸಿದ ಹೊರತು ಅಥವಾ ಕೋರಲಾದ ಹೆಚ್ಚುವರಿ ಬಜೆಟ್‌ನ್ನು ತುಂಬಲು ಹೆಚ್ಚಿನ ರಾಜಸ್ವ ಕ್ರಮಗಳನ್ನು ತೋರಿಸಿದ ಹೊರತು ಹೆಚ್ಚುವರಿ ಅನುದಾನಗಳಿಗೆ ಮಂಜೂರಾತಿಯನ್ನು ನೀಡತಕ್ಕದ್ದಲ್ಲ.

(3) ಮೇಲಿನ ಉಪ ನಿಯಮ (1) ಅಥವಾ (2) ರ ಪ್ರಕಾರ ಮಂಜೂರಾದ ಹೆಚ್ಚುವರಿ ಅನುದಾನಗಳನ್ನು ಸ್ವೀಕೃತಿಗಳು ಮತ್ತು ಸಂದಾಯಗಳ ಅಂದಾಜುಗಳಲ್ಲಿನ ಸಂಭವನೀಯ ಪರಿಷ್ಕರಣೆಯೊಟ್ಟಿಗೆ, ಸ್ವೀಕೃತಿಗಳು ಮತ್ತು ಸಂದಾಯಗಳ ಆದಷ್ಟೂ ಸಂಭವನೀಯ ಸನ್ನಿವೇಶಗಳನ್ನು ತೋರಿಸುವ ಬಜೆಟ್‌ನ್ನು ಮರುಹೊಂದಾಣಿಕೆ ಮಾಡುವುದಕ್ಕಾಗಿ ಚಾಲ್ತಿ ಆರ್ಥಿಕ ವರ್ಷದ ಬಜೆಟ್ ಕಾರ್ಯ ಚಟುವಟಿಕೆಗಳನ್ನು ವಿನಿಯಮನಗೊಳಿಸುವುದಕ್ಕಾಗಿ ಕ್ಯಾಲೆಂಡರ್‌ನಲ್ಲಿ ಆರ್ಥಿಕ ಇಲಾಖೆಯು ನಿಗದಿಪಡಿಸಿದ ದಿನಾಂಕಕ್ಕೆ ಅನುಗುಣವಾಗಿ ಪರಿಷ್ಕೃತ ಅಂದಾಜುಗಳ ಪರಿಗಣನೆಗಾಗಿ ಪ್ರಾಧಿಕಾರದ ಮುಂದೆ ಇಡತಕ್ಕದ್ದು. ಅಂಥ ಪರಿಷ್ಕೃತ ಅಂದಾಜನ್ನು ಉಪ ನಿಯಮ (1) ರಲ್ಲಿ ಹೇಳಲಾದ ಕಾರ್ಯವಿಧಾನಕ್ಕೆ ಅನುಸಾರವಾಗಿ ಪ್ರಾಧಿಕಾರದ ಮುಂದೆ ಇಡಬೇಕಾದ ಬಜೆಟ್ ಅಂದಾಜಿನಲ್ಲೂ ಸಹ ಸೇರಿಸತಕ್ಕದ್ದು.

74. ಆರ್ಥಿಕ ಇಲಾಖೆಗೆ ಬಜೆಟ್ ಅಂದಾಜುಗಳನ್ನು ಸಲ್ಲಿಸುವಿಕೆ.- ಆಯುಕ್ತರು, 71ನೇ ನಿಯಮದ ಮೇರೆಗೆ ಪ್ರಾಧಿಕಾರವು ಅನುಮೋದಿಸಿದ ಬಜೆಟ್ ಅಂದಾಜುಗಳನ್ನು ಮತ್ತು 74 (ಗ)ನೇ ನಿಯಮದ ಮೇರೆಗೆ ಪ್ರಾಧಿಕಾರವು ಅನುಮೋದಿಸಿದ ಪೂರಕ ಅಂದಾಜುಗಳನ್ನು ಗೊತ್ತುಪಡಿಸಿದಂಥ ದಿನಾಂಕದೊಳಗೆ ಆನಂತರ ಆರ್ಥಿಕ ಇಲಾಖೆಗೆ ಸಲ್ಲಿಸತಕ್ಕದ್ದು.

75. ಅಪೀಲುಗಳು.- (1) ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಅಥವಾ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಧಿನಿಯಮದ 32ನೇ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಕರ್ನಾಟಕ ರಾಜ್ಯ ಸಾರಿಗೆ ಅಪೀಲು ನ್ಯಾಯಾಧಿಕರಣಕ್ಕೆ ಅಂಥ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ಅಪೀಲನ್ನು ಸಲ್ಲಿಸಬಹುದು.

(2) ಅಪೀಲಿನ ವಿವರಣ ಪತ್ರವನ್ನು, ಆಕ್ಷೇಪಣೆಗಳ ಕಾರಣಗಳನ್ನು ಸಂಕ್ಷಿಪ್ತವಾಗಿ ನಿರೂಪಿಸಿ ನಮೂನೆ-XXXVI ರಲ್ಲಿ ತ್ರಿಪ್ರತಿಯಲ್ಲಿ ಸಲ್ಲಿಸತಕ್ಕದ್ದು ಮತ್ತು ಎದುರು ಅಪೀಲು ಹೂಡಿದ ಆದೇಶದ ಪ್ರತಿ ಮತ್ತು ಐದು ನೂರು ರೂಪಾಯಿಗಳ ಶುಲ್ಕದೊಂದಿಗೆ ಪ್ರಮಾಣೀಕೃತ ಪ್ರತಿಯ ಜೊತೆಗೆ ಇರತಕ್ಕದ್ದು;

ಪರಂತೂ, ಅಪೀಲು ವಿವರಣ ಪತ್ರವು, ಒಂದಕ್ಕಿಂತ ಹೆಚ್ಚು ಆದೇಶಗಳಿಗೆ ಸಂಬಂಧಪಟ್ಟಿರತಕ್ಕದ್ದಲ್ಲ ಅಥವಾ ಒಬ್ಬರಿಗಿಂತ ಹೆಚ್ಚು ಪಕ್ಷಕಾರರು ಸಹಿ ಹಾಕಿರತಕ್ಕದ್ದಲ್ಲ.

(3) ವಿರುದ್ಧವಾಗಿ ಅಪೀಲು ಹೂಡಿದ ಆದೇಶವನ್ನು ಹೊರಡಿಸಿರುವ ಪ್ರಾಧಿಕಾರವು, ಅಪೀಲುದಾರನು ಅರ್ಜಿಯನ್ನು ಸಲ್ಲಿಸಿದ ಮೇಲೆ, ಪ್ರತಿ ಪುಟಕ್ಕೆ ಎರಡು ರೂಪಾಯಿಗಳ ಹೆಚ್ಚುವರಿ ಶುಲ್ಕದೊಂದಿಗೆ ಐವತ್ತು ರೂಪಾಯಿಗಳ ಶುಲ್ಕವನ್ನು ಸಂದಾಯ ಮಾಡಿದ ನಂತರ ಆದೇಶದ ಪ್ರಮಾಣೀಕೃತ ಪ್ರತಿ ಅಥವಾ ಯಾವುದೇ ಇತರ ಸಂಬಂಧಪಟ್ಟ ದಸ್ತಾವೇಜನ್ನು ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪುಷ್ಪ ವಿ.ಎಸ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಾರಿಗೆ ಇಲಾಖೆ.

ಅನುಸೂಚಿ-I
[65(1)ನ್ನು ನೋಡಿ]

ಕ್ರಮ ಸಂಖ್ಯೆ	ಹುದ್ದೆಗಳ ಪ್ರವರ್ಗ	ಹುದ್ದೆಗಳ ಸಂಖ್ಯೆ	ನೇಮಕಾತಿ ವಿಧಾನ	ಕನಿಷ್ಠ ವಿದ್ಯಾರ್ಹತೆ
(1)	(2)	(3)	(4)	(5)
1.	ಆಯುಕ್ತರು (1,44,200-2,18,200)	01	ಸಾರಿಗೆ ಇಲಾಖೆಯ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರನ್ನು ಸ್ಥಳ ನಿಯುಕ್ತಿಗೊಳಿಸುವ ಮೂಲಕ	--

2.	ಅಪರ ಆಯುಕ್ತರು (90,500-1,23,300)	01	ಸಾರಿಗೆ ಇಲಾಖೆಯ ಅಪರ ಆಯುಕ್ತರು ಇವರ ನಿಯೋಜನೆಯ ಮೂಲಕ (ಮಂಜೂರಾದ)	--
3.	ಕಾರ್ಯನಿರ್ವಾಹಕ ಇಂಜಿನಿಯರ್ (67,550-1,04,600)	01	ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರನ್ನು ಪ್ರತಿನಿಯೋಜಸುವ ಮೂಲಕ ಮೂರು ವರ್ಷಗಳ ಗರಿಷ್ಠ ಅವಧಿಗಾಗಿ (ಮಂಜೂರಾದುದು)	--
4.	ಹಣಕಾಸು ಅಧಿಕಾರಿ (52,650-97,100)	01	ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ತ ಇಲಾಖೆಯಿಂದ ಗರಿಷ್ಟ ಮೂರು ವರ್ಷಗಳ ಅವಧಿಗಾಗಿ (ಮಂಜೂರಾದ) ಉಪ ಲೆಕ್ಕ ಪರಿಶೋಧಕರನ್ನು ಪ್ರತಿ ನಿಯೋಜಿಸುವ ಮೂಲಕ	--
5.	ಪೊಲೀಸ್ ಉಪ ಅಧೀಕ್ಷಕರು (52,650-97,100)	01	ಮೂರು ವರ್ಷಗಳ ಗರಿಷ್ಠ ಅವಧಿಗಾಗಿ ಪೊಲೀಸ್ ಇಲಾಖೆಯಿಂದ (ಮಂಜೂರಾದ) ಪೊಲೀಸ್ ಉಪ ಅಧೀಕ್ಷಕರನ್ನು ನಿಯೋಜಿಸುವ ಮೂಲಕ	--
6.	ಆರೋಗ್ಯ ಉಪ ನಿರ್ದೇಶಕರು (52,650-97,100)	01	ಮೂರು ವರ್ಷಗಳ ಗರಿಷ್ಠ ಅವಧಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ (ಮಂಜೂರಾದ) ಜಿಲ್ಲಾ ಆರೋಗ್ಯ ಅಧಿಕಾರಿ ಅಥವಾ ಉಪ ನಿರ್ದೇಶಕರನ್ನು ಪ್ರತಿನಿಯೋಜನೆ ಮಾಡುವ ಮೂಲಕ	--
7.	ಶಿಕ್ಷಣಾಧಿಕಾರಿ (52,650-97,100)	01	ಮೂರು ವರ್ಷಗಳ ಗರಿಷ್ಠ ಅವಧಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆಯಿಂದ (ಮಂಜೂರಾದ) ವಿಭಾಗ ಶಿಕ್ಷಣಾಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ	--

8.	ಯೋಜನಾಧಿಕಾರಿ (52,650-97,100)	01	ಮೂರು ವರ್ಷಗಳ ಗರಿಷ್ಠ ಅವಧಿಗೆ ಯೋಜನೆ, ಕಾರ್ಯಕ್ರಮ ಮೇಲ್ವಿಚಾರಣೆ ಮತ್ತು ಅಂಕಿಅಂಶ ಇಲಾಖೆಯಿಂದ (ಮಂಜೂರಾದ) ಸಮಾನ ವೃಂದದಲ್ಲಿನ ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ.	--
9.	ಅಧೀಕ್ಷಕ (37,900-70,850)	01	ಸಂಯೋಜಿತ ಜ್ಯೇಷ್ಠತೆಯ ಆಧಾರದ ಮೇಲೆ ಪ್ರಥಮ ದರ್ಜೆ ಸಹಾಯಕ/ ಶೀಘ್ರಲಿಪಿಗಾರರ ಪದವೃಂದದಿಂದ ಪ್ರತಿನಿಯೋಜನೆ ಮಾಡುವ ಮೂಲಕ: ಪರಂತು ಯಾರೇ ಮುಂಬಡ್ತಿಯ ಮೂಲಕ ಸೂಕ್ತ ಅಧಿಕಾರಿಗಳು ಲಭ್ಯವಿಲ್ಲದಿದ್ದರೆ, ಆಗ ಸಾರಿಗೆ ಇಲಾಖೆಯಿಂದ ಸಮಾನ ಪದವೃಂದದಲ್ಲಿನ ಅಧಿಕಾರಿಗೆ ಮುಂಬಡ್ತಿ ನೀಡುವ ಮೂಲಕ.	ಮುಂಬಡ್ತಿಗಾಗಿ: ಅಂಕಣ (4) ರಲ್ಲಿ ನಿರ್ದಿಷ್ಟಪಡಿಸಲಾದ ಪದವೃಂದಗಳಲ್ಲಿ ಐದು ವರ್ಷಗಳಿಗೆ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರಬೇಕು.
10.	ಪ್ರಥಮ ದರ್ಜೆ ಸಹಾಯಕ (27,650-52,650)	02	ದ್ವಿತೀಯ ದರ್ಜೆ ಸಹಾಯಕನ ಪದವೃಂದದಿಂದ ಮುಂಬಡ್ತಿ ನೀಡುವ ಮೂಲಕ: ಪರಂತು ಯಾರೇ ಸೂಕ್ತ ಅಧಿಕಾರಿಗಳು ಮುಂಬಡ್ತಿಯ ಮೂಲಕ ಲಭ್ಯವಿಲ್ಲದಿದ್ದರೆ, ಆಗ ನೇರ ನೇಮಕಾತಿಯ ಮೂಲಕ.	ಮುಂಬಡ್ತಿಗಾಗಿ: ದ್ವಿತೀಯ ದರ್ಜೆ ಸಹಾಯಕನ ಪದವೃಂದದಲ್ಲಿ ಐದು ವರ್ಷಗಳಿಗೆ ಕಡಿಮೆಯಿರದ ಸೇವೆಯನ್ನು ಸಲ್ಲಿಸಿರಬೇಕು. ನೇರ ನೇಮಕಾತಿಯ ಮೂಲಕ:- ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯದಿಂದ ಪದವಿಯನ್ನು ಪಡೆದವನಾಗಿರಬೇಕು.

11.	ಶೀಘ್ರಲಿಪಿಗಾರರು (27,650-52,650)	05	ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರ ಮತ್ತು ದತ್ತಾಂಶ ನಮೂದು ಸಹಾಯಕರು) ನಿಯಮಗಳು, 1983 ಕ್ಕೆ ಅನುಸಾರವಾಗಿ ನೇರ ನೇಮಕಾತಿ ಮಾಡುವ ಮೂಲಕ.	ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರ ಮತ್ತು ದತ್ತಾಂಶ ನಮೂದು ಸಹಾಯಕ) ನಿಯಮಗಳು, 1983 ಕ್ಕೆ ಅನುಸಾರವಾಗಿ.
12.	ದ್ವಿತೀಯ ದರ್ಜೆ ಸಹಾಯಕ (21,400-42,000)	02	ನೇರ ನೇಮಕಾತಿಯ ಮೂಲಕ.	ಪದವಿ-ಪೂರ್ವ ಪರೀಕ್ಷೆ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಉತ್ತೀರ್ಣರಾಗಿರಬೇಕು.
13.	ಚಾಲಕರು (21,400-42,000)	07	ನೇರ ನೇಮಕಾತಿಯ ಮೂಲಕ.	ಕನ್ನಡ ವಿಷಯವಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ಪ್ರಸ್ತುತ ಎಲ್ ಎಮ್‌ವಿ ಚಾಲನಾ ಪರವಾನಗಿಯನ್ನು ಹೊಂದಿರಬೇಕು.
14.	ಗುಂಪು-ಡಿ (17,000-28,950)	05	ನೇರ ನೇಮಕಾತಿಯ ಮೂಲಕ.	ಕನ್ನಡ ವಿಷಯ ಹೊಂದಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು

ಅನುಸೂಚಿ–II

[65(2) ನೇ ನಿಯಮವನ್ನು ನೋಡಿ]

ಕ್ರಮ ಸಂಖ್ಯೆ	ಹುದ್ದೆಗಳ ಪ್ರವರ್ಗ	ನೇಮಕಾತಿ ಪ್ರಾಧಿಕಾರ	ಶಿಸ್ತು ಪ್ರಾಧಿಕಾರ	ದಂಡ	ಅಪೀಲು ಪ್ರಾಧಿಕಾರ
(1)	(2)	(3)	(4)	(5)	(6)
1.	ಆಯುಕ್ತರು (ಪದನಿಮಿತ್ತ ಹುದ್ದೆ)	ರಾಜ್ಯ ಸರ್ಕಾರ	ರಾಜ್ಯ ಸರ್ಕಾರ	ಅಖಿಲ ಭಾರತ ಸೇವಾ ನಿಯಮಗಳ ಮೇರೆಗೆ ನಿಯಮಿಸಲಾದಂತೆ	ರಾಜ್ಯ ಸರ್ಕಾರ

2.	ಅಪರ ಆಯುಕ್ತರು (ಈಗಾಗಲೇ ಮಂಜರಾದ ಹುದ್ದೆ)	ರಾಜ್ಯ ಸರ್ಕಾರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ ಇವರು ಪ್ರತಿನಿಧಿಸುವರು.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ, ಸಾರಿಗೆ ಇಲಾಖೆ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ರಾಜ್ಯ ಸರ್ಕಾರ
3.	ಹಣಕಾಸು ಅಧಿಕಾರಿ (ಮಂಜೂರು ಮಾಡಿದ ಹುದ್ದೆ)	ರಾಜ್ಯ ಸರ್ಕಾರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಮೂಲಕ ಪ್ರತಿನಿಧಿತವಾದ.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ರಾಜ್ಯ ಸರ್ಕಾರ
4.	ಕಾರ್ಯನಿರ್ವಾಹಕ ಇಂಜಿನಿಯರ್ (ಮಂಜೂರಾದ ಹುದ್ದೆ)	ರಾಜ್ಯ ಸರ್ಕಾರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ಇವರು ಪ್ರತಿನಿಧಿಸುವರು.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ರಾಜ್ಯ ಸರ್ಕಾರ
5.	ಪೊಲೀಸ್ ಉಪ ಅಧೀಕ್ಷಕರು (ಮಂಜೂರಾದ ಹುದ್ದೆ)	ರಾಜ್ಯ ಸರ್ಕಾರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಗೃಹ ಇಲಾಖೆ ಇವರ ಮೂಲಕ ಪ್ರತಿನಿಧಿತವಾದ.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಗೃಹ ಇಲಾಖೆ ಇಲಾಖೆ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ರಾಜ್ಯ ಸರ್ಕಾರ

6.	ಉಪ ನಿರ್ದೇಶಕರು – ಆರೋಗ್ಯ (ಮಂಜೂರಾದ ಹುದ್ದೆ)	ರಾಜ್ಯ ಸರ್ಕಾರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಮೂಲಕ ಪ್ರತಿನಿಧಿತವಾದ.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ರಾಜ್ಯ ಸರ್ಕಾರ
7.	ಶಿಕ್ಷಣಾಧಿಕಾರಿ (ಮಂಜೂರಾದ ಹುದ್ದೆ)	ರಾಜ್ಯ ಸರ್ಕಾರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ /ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆ ಇವರ ಮೂಲಕ ಪ್ರತಿನಿಧಿತವಾದ.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ /ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಶಿಕ್ಷಣ ಇಲಾಖೆ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ರಾಜ್ಯ ಸರ್ಕಾರ
8.	ಯೋಜನಾಧಿ-ಕಾರಿ (ಮಂಜೂರಾದ ಹುದ್ದೆ)	ರಾಜ್ಯ ಸರ್ಕಾರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ ಇವರ ಮೂಲಕ ಪ್ರತಿನಿಧಿತವಾದ.	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ /ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ರಾಜ್ಯ ಸರ್ಕಾರ
9.	ಅಧೀಕ್ಷಕರು	ಬಡ್ತಿ ಪಡೆದವರಿಗೆ ಸಂಬಂದಪಟ್ಟಂತೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು ಮತ್ತು ಸಾರಿಗೆ ಇಲಾಖೆಯಿಂದ	ಬಡ್ತಿ ಪಡೆದವರಿಗೆ ಸಂಬಂದಪಟ್ಟಂತೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು ಮತ್ತು ಸಾರಿಗೆ ಇಲಾಖೆಯಿಂದ ಪ್ರತಿನಿಯೋಜನೆ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ಮುಂಬಡ್ತಿ ಪಡೆದವರ ಸಂದರ್ಭದಲ್ಲಿ ಪ್ರಾಧಿಕಾರ/ ಪ್ರತಿನಿಯೋಜನೆಯ ಸಂದರ್ಭದಲ್ಲಿ ಸಾರಿಗೆ ಇಲಾಖೆ

		ಪ್ರತಿನಿಯೋಜನೆ ಗೊಂಡ ಅಧಿಕಾರಿಗಳಿಗೆ ಸಂಬಂದಪಟ್ಟಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು.	ಗೊಂಡ ಅಧಿಕಾರಿಗಳಿಗೆ ಸಂಬಂದಪಟ್ಟಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು.		
10.	ಪ್ರಥಮ ದರ್ಜೆ ಸಹಾಯಕ (ಮಂಜೂರಾದ ಹುದ್ದೆ)	ಬಡ್ತಿ ಪಡೆದವರಿಗೆ ಸಂಬಂದಪಟ್ಟಂತೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು ಮತ್ತು ಸಾರಿಗೆ ಇಲಾಖೆಯಿಂದ ಪ್ರತಿನಿಯೋಜನೆ ಗೊಂಡ ಅಧಿಕಾರಿಗಳಿಗೆ ಸಂಬಂದಪಟ್ಟಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು.	ಬಡ್ತಿ ಪಡೆದವರಿಗೆ ಸಂಬಂದಪಟ್ಟಂತೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು ಮತ್ತು ಸಾರಿಗೆ ಇಲಾಖೆಯಿಂದ ಪ್ರತಿನಿಯೋಜನೆ ಗೊಂಡ ಅಧಿಕಾರಿಗಳಿಗೆ ಸಂಬಂದಪಟ್ಟಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು.	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ಮುಂಬಡ್ತಿ ಪಡೆದವರ ಸಂದರ್ಭದಲ್ಲಿ ಪ್ರಾಧಿಕಾರ/ ಪ್ರತಿನಿಯೋಜನೆಯ ಸಂದರ್ಭದಲ್ಲಿ ಸಾರಿಗೆ ಇಲಾಖೆ
11.	ಶೀಘ್ರಲಿಪಿಗಾರರು	ಆಯುಕ್ತರು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ	ಆಯುಕ್ತರು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ	ಕರ್ನಾಟಕ ಸಿವಿ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ಪ್ರಾಧಿಕಾರ

12.	ದ್ವಿತೀಯ ದರ್ಜೆ ಸಹಾಯಕ (ಮಂಜೂರಾದ ಹುದ್ದೆ)	ಮುಂಬಡ್ತಿ ಪಡೆದವರಿಗೆ ಸಂಬಂಧಪಟ್ಟಂತೆ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದ ಆಯುಕ್ತರು ಮತ್ತು ಸಾರಿಗೆ ಇಲಾಖೆಯಿಂದ ಪ್ರತಿನಿಯೋಜನೆ ಗೊಂಡ ಅಧಿಕಾರಿಗಳಿಗೆ ಸಂಬಂದಪಟ್ಟಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು.	ಮುಂಬಡ್ತಿ ಪಡೆದವರಿಗೆ ಸಂಬಂಧಪಟ್ಟಂತೆ ಆಯುಕ್ತರು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಸಾರಿಗೆ ಇಲಾಖೆಯಿಂದ ಪ್ರತಿನಿಯೋಜನೆ ಗೊಂಡ ಅಧಿಕಾರಿಗಳಿಗೆ ಸಂಬಂಧಪಟ್ಟಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತರು.	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ಮುಂಬಡ್ತಿ ಪಡೆದವರ ಸಂದರ್ಭದಲ್ಲಿ ಪ್ರಾಧಿಕಾರ/ ಪ್ರತಿನಿಯೋಜನೆಯ ಸಂದರ್ಭದಲ್ಲಿ ಸಾರಿಗೆ ಇಲಾಖೆ
13.	ಚಾಲಕ	ಆಯುಕ್ತರು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ	ಆಯುಕ್ತರು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ಪ್ರಾಧಿಕಾರ
14.	ಗ್ರೂಪು ಡಿ	ಆಯುಕ್ತರು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ	ಆಯುಕ್ತರು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ	ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ ಮೇರೆಗೆ ನಿಯಮಿಸಲಾದಂತೆ;	ಪ್ರಾಧಿಕಾರ

ಅನುಸೂಚಿ–III

[16 ನೇ ನಿಯಮವನ್ನು ನೋಡಿ]

ನಮೂನೆ ಸಂಖ್ಯೆ.	ವಿಷಯಗಳು	ನಿಯಮ ಸಂಖ್ಯೆ.
1	ನಗದು ಪುಸ್ತಕ	19(1)
2	ನಗದು ತೆಗೆಯುವ ಮತ್ತು ಬಟವಾಡೆ ರಿಜಿಸ್ಟರ್	19(3)
3	_____ಬ್ಯಾಂಕ್‌ನ ಬ್ಯಾಂಕ್ ಪುಸ್ತಕ, ಖಾತೆ ಸಂಖ್ಯೆ.	20(1)
4	ದಿನಚರಿ ಪುಸ್ತಕ	21(2)
5	ಸಾಮಾನ್ಯ ಲೆಡ್ಜರ್ ಮತ್ತು ಉಪ-ಲೆಡ್ಜರ್	22(2)
6	ಸ್ವೀಕೃತಿಗಳು ಮತ್ತು ಸಂದಾಯಗಳ ವರ್ಗೀಕೃತ ರಿಜಿಸ್ಟರ್	23(2)
7	ಸ್ವೀಕೃತಿ ಮತ್ತು ಸಂದಾಯಗಳ ಮಾಸಿಕ ವರ್ಗೀಕೃತ ಸಾರಾಂಶ	23(2)
8	ಸ್ವೀಕೃತಿ ವೋಚರ್	24(2)
9	ಸಂದಾಯ ವೋಚರ್	24(3)
10	ಪ್ರತಿ ವೋಚರ್	24(4)
11	ದಿನಚರಿ ವೋಚರ್	24(5)
12	ವೋಚರ್ ಸಂಖ್ಯೆ ರಿಜಿಸ್ಟರ್	25(2)
13	ಹಣ ಸ್ವೀಕರಿಸಿರುವುದಕ್ಕಾಗಿ ಸ್ವೀಕೃತಿ	29(1) ಮತ್ತು 30(1)
14	ಚೆಕ್‌ಗಳನ್ನು ಸ್ವೀಕರಿಸಿದ ರಿಜಿಸ್ಟರ್	30(2)
15	ಸಿವಿಲ್ ದಾವೆಗಳ ರಿಜಿಸ್ಟರ್	35
16	ಡಿಕ್ರಿಗಳ ರಿಜಿಸ್ಟರ್	35
17	ಶಾಖೆಗಳಲ್ಲಿ ಸ್ವೀಕರಿಸಿದ ಬಿಲ್ಲುಗಳ ರಿಜಿಸ್ಟರ್	38(3)
18	ಸಂದಾಯದ ಆದೇಶ	38(4)
19	ಲೆಕ್ಕಪತ್ರಗಳ ಶಾಖೆಗಳಲ್ಲಿ ಸ್ವೀಕರಿಸಿದ ಬಿಲ್ಲುಗಳ ರಿಜಿಸ್ಟರ್	38(5)
20	ಮಂಜೂರಾತಿ ರಿಜಿಸ್ಟರ್	53(2)
21	ಸಾಲ ಸಲಹೆ ಪುಸ್ತಕ	54(ಬಿ)(2)(ii)
22	ವೆಚ್ಚದ ಮಾಸಿಕ ವಿವರಣೆ ಮತ್ತು ಕಾಮಗಾರಿಗಳ ಮೇಲಿನ ಪ್ರಗತಿ	54(ಬಿ)(2)(iv)
23	ಠೇವಣಿಗಳ ರಿಜಿಸ್ಟರ್	55(1)
24	ಬ್ಯಾಂಕು ಖಾತರಿಗಳ ರಿಜಿಸ್ಟರ್	55(2)
25	ಸಂಕೀರ್ಣ ಮಾರಾಟ ಅಥವಾ ಹರಾಜಿನ ರಿಜಿಸ್ಟರ್	55(3)
26	ಠೇವಣಿ ಮರುಪಾವತಿ/ ಹೊಂದಾಣಿಕೆ/ ನಿಂತುಹೋದ ಸಲಹೆ	56
27	ಭದ್ರತಾಪತ್ರಗಳ ರಿಜಿಸ್ಟರ್	58
28	ಸಾಲಗಳ ರಿಜಿಸ್ಟರ್	59 (1)
29	ಋಣ ತೀರಿಕೆ ನಿಧಿ ರಿಜಿಸ್ಟರ್	59 (2)
30	ಮೀಸಲಿಟ್ಟ ನಿಧಿ ರಿಜಿಸ್ಟರ್	60(2)

31	ಮುಂಗಡಗಳ ರಿಜಿಸ್ಟರ್	61(1)
32	ಮಾಸಿಕ ಜಮೆಗಳು ಮತ್ತು ಸಂದಾಯಗಳ ಲೆಕ್ಕ	65 (2) (ಎ)
33	ಮಾಸಿಕ ವಿಚಾರಣಾ ಬಾಕಿ	64
34	ಜಮಾ ಖರ್ಚು ಪಟ್ಟಿ	65 (2) (ಬಿ)
35	ಆದಾಯ ಮತ್ತು ವೆಚ್ಚದ ವಿವರಪಟ್ಟಿ	65 (2) (ಸಿ)

ಬಿಎಸ್ ನಮೂನೆ ಸಂಖ್ಯೆ.	ವಿಷಯಗಳು	ನಿಯಮ ಸಂಖ್ಯೆ.
1	ಆರ್ಥಿಕ ವರ್ಷದ ಅವಧಿಗೆ ಬಜೆಟ್‌ನ ಸಂಕ್ಷಿಪ್ತ ವಿವರಣೆ	74 (1)
2	ಆರ್ಥಿಕ ವರ್ಷದ ಅವಧಿಗೆ ರಾಜಸ್ವ ಜಮೆಯ ಅಂದಾಜು	74 (2) (ಎ)
3	ಆರ್ಥಿಕ ವರ್ಷದ ಅವಧಿಗೆ ಕಂದಾಯ ಸಂದಾಯಗಳ ಅಂದಾಜು	74 (2) (ಬಿ)
4	ಆರ್ಥಿಕ ವರ್ಷದ ಅವಧಿಗೆ ಬಂಡವಾಳ ಸ್ವೀಕೃತಿಗಳ ಅಂದಾಜು	74 (2) (ಸಿ)
5	ಆರ್ಥಿಕ ವರ್ಷದ ಅವಧಿಗೆ ಬಂಡವಾಳ ಸಂದಾಯಗಳ ಅಂದಾಜು	74 (2) (ಡಿ)
6	ಆರ್ಥಿಕ ವರ್ಷದ ಅವಧಿಗೆ ಅಸಾಧಾರಣ ಸ್ವೀಕೃತಿಗಳ ಅಂದಾಜು	74 (2) (ಇ)
7	ಆರ್ಥಿಕ ವರ್ಷದ ಅವಧಿಗೆ ಅಸಾಧಾರಣ ಸಂದಾಯಗಳ ಅಂದಾಜುಗಳು	74 (2) (ಎಫ್)

ಅನುಸೂಚಿ - IV

ವಾರ್ಷಿಕ ವರದಿಗಾಗಿ ನಮೂನೆ

(ನಿಯಮ 67ನ್ನು ನೋಡಿ)

ಭಾಗ - ಎ

ಪ್ರಾಧಿಕಾರದ ವಾರ್ಷಿಕ ವರದಿಯು, -

(ಎ) ಪೀಠಿಕೆ ಮತ್ತು ಆಡಳಿತಾತ್ಮಕ ಸಿದ್ಧತೆ: ಹಿನ್ನೆಲೆ, ದೃಷ್ಟಿ ಮತ್ತು ಧ್ಯೇಯೋದ್ದೇಶ, ಉದ್ದೇಶಗಳು ಮತ್ತು

ಗುರಿಗಳು, ಸಾಂಸ್ಥಿಕ ರಚನೆ, ಅಧಿಕಾರಿಗಳು ಮತ್ತು ಸಿಬ್ಬಂದಿ, ಪಾತ್ರಗಳು ಮತ್ತು ಜವಾಬ್ದಾರಿಗಳು.

(ಬಿ) ರಸ್ತೆ ಅಪಘಾತಗಳಲ್ಲಿನ ಪ್ರವೃತ್ತಿಗಳು.

(ಸಿ) ವಾಹನ ಅಂಕಿಅಂಶಗಳು.

(ಡಿ) ಜಾರಿ ವಿವರಗಳು.

(ಇ) ಆರ್ಥಿಕ ವರ್ಷದ ಅವಧಿಗೆ ನಿಗದಿಪಡಿಸಿದ ಧ್ಯೇಯೋದ್ದೇಶಗಳು.

(ಎಫ್) ಆರ್ಥಿಕ ವರ್ಷದಲ್ಲಿ ಪ್ರಾಧಿಕಾರವು ಕೈಗೊಂಡ ಕ್ರಮ ಮತ್ತು ಸಾಧನೆಗಳು.

ಭಾಗ - ಬಿ

(ಎ) ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ, ಅದರ ಧ್ಯೇಯೋದ್ದೇಶಗಳು ಮತ್ತು ಪ್ರಕಾರ್ಯಗಳು.

(ಬಿ ಆರ್ಥಿಕ ವರ್ಷದಲ್ಲಿ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿಯು ಕೈಗೊಂಡ ಕ್ರಮ ಮತ್ತು ಸಾಧನೆಗಳು.

(ಸಿ) ಸಮಿತಿಗಳು ಮತ್ತು ರಚಿಸಲಾದ ಉಪ-ಸಮಿತಿಗಳು ಯಾವುವಾದರೂ ಇದ್ದರೆ, ಅವುಗಳ ವಿವರಗಳು.

ನಮೂನೆ-I
(18(1)ನೇ ನಿಯಮವನ್ನು ನೋಡಿ)

ನಗದು ಪುಸ್ತಕ

ಜಮೆಗಳು (ಬಟವಾಡೆಗಳು)									ಸಂದಾಯಗಳು (ಜಮೆ)								
ದಿನಾಂಕ	ವೋಚರ್ ಸಂ.	ವಿವರಗಳು	ಖಾತೆ ಸಂಕೇತ	ಖಾತಾ/ಪುಟ	ನಗದು	ಕೈಯಲ್ಲಿರುವ ಚೆಕ್ಕು	ಬಜೆಟ್ ಸಂಕೇತ	ಹಣ ಕಾಸಿನ ಮೂಲಗಳು	ದಿನಾಂಕ	ವೋಚರ್ ಸಂ.	ವಿವರಗಳು	ಖಾತೆ ಸಂಕೇತ	ಖಾತಾ/ಪುಟ	ನಗದು	ಚೆಕ್ಕು	ಬಜೆಟ್ ಸಂಕೇತ	ಹಣ ಕಾಸಿನ ಮೂಲಗಳು
1	2	3	4	5	6	7	8	9	10	11	12	13	14	15	16	17	18

ನಮೂನೆ-II

(18(3)ನೇ ನಿಯಮವನ್ನು ನೋಡಿ)

ನಗದು ತೆಗೆಯುವ ಮತ್ತು ಬಟವಾಡೆ ಮಾಡುವ ರಿಜಿಸ್ಟರ್

ದಿನಾಂಕ:

ಸ್ವೀಕರಿಸಿದ ನಗದು			**ಬಟವಾಡೆ ಮಾಡಿದ ನಗದು**				**ಷರಾ**
ಚೆಕ್ ಸಂ/ ದಿನಾಂಕ	**ಉದ್ದೇಶ**	**ಮೊಬಲಗು**	**ಸ್ವೀಕರ್ತನ ಹೆಸರು**	**ಬಿಲ್ ಸಂ/ ದಿನಾಂಕ**	**ವಿವರಗಳು**	**ಮೊಬಲಗು**	
1	2	3	4	5	6	7	8
ಪ್ರಾರಂಭದ ಶಿಲ್ಕು ತೆಗೆದ ನಗದು ಒಟ್ಟು		....		**ಬಟವಾಡೆ ಮಾಡಿದ ನಗದು ಮುಕ್ತಾಯಗೊಂಡ ಶಿಲ್ಕು ಒಟ್ಟು**		....	
_____ ರವರಿಂದ ನಮೂದಿಸಲಾಗಿದೆ _____ರವರಿಂದ ಪರಿಶೀಲಿಸಲಾಗಿದೆ (ಕ್ಯಾಷಿಯರ್) (ಹಣಕಾಸು ಅಧಿಕಾರಿ)							

ಸೂಚನೆಗಳು:

1. ರಿಜಿಸ್ಟರ್ ಅನ್ನು ಕ್ಯಾಷಿಯರ್ ನಿರ್ವಹಿಸತಕ್ಕದ್ದು.
2. ಹಣಕಾಸು ಅಧಿಕಾರಿಯು ಈ ರಿಜಿಸ್ಟರಿನಲ್ಲಿನ ನಮೂದುಗಳ ಸಮೇತ ಮತ್ತು ಕ್ಯಾಷಿಯರನ ಬಳಿಯಿರುವ ನಗದು ಶಿಲ್ಕಿನೊಂದಿಗೆ ಬಿಲ್‌ಗಳನ್ನು ಪರಿಶೀಲಿಸತಕ್ಕದ್ದು ಮತ್ತು ಸಂದಾಯದ ವೋಚರನ್ನು ಸಿದ್ಧಪಡಿಸತಕ್ಕದ್ದು.

ಳೆ ಸಂದಾಯಕ್ಕೆ ಬಾಕಿಯಿರುವ ಒಟ್ಟು ಬಿಲ್ಲನ್ನು, ಮುಕ್ತಾಯದ ನಗದು ಶಿಲ್ಕಿನೊಟ್ಟಿಗೆ ಕ್ಯಾಷಿಯರ್ ಮತ್ತು ಹಣಕಾಸು ಅಧಿಕಾರಿ ತಾಳೆ ಮಾಡತಕ್ಕದ್ದು.

ನಮೂನೆ- III

(19(1) ನೇ ನಿಯಮವನ್ನು ನೋಡಿ)

_____ ಬ್ಯಾಂಕ್‌ನ ಬ್ಯಾಂಕ್ ಪುಸ್ತಕ

ಬ್ಯಾಂಕ್ ಖಾತೆ ಸಂಖ್ಯೆ_____

ಜಮೆಗಳು (ಬಟವಾಡೆಗಳು)							ಸಂದಾಯಗಳು (ಜಮೆ)								ಷರಾ
ದಿನಾಂಕ	ವೋಚರ್ ಸಂ.	ವಿವರಗಳು	ಲೆಕ್ಕ ಶೀರ್ಷಿಕೆ	ಖಾತಾ ಪುಟ	ಮೊಬಲಗು (ರೂ.ಗಳು)	ಹಣಕಾಸಿನ ಮೂಲ	ದಿನಾಂಕ.	ವೋಚರ್ ಸಂ.	ವಿವರಗಳು	ಚೆಕ್ ಸಂ/ ದಿನಾಂಕ	ಲೆಕ್ಕ ಶೀರ್ಷಿಕೆ.	ಖಾತಾ ಪುಟ	ಮೊಬಲಗು (ರೂ.ಗಳು)	ಹಣಕಾಸಿನ ಮೂಲ	
1	2	3	4	5	6	7	8	9	10	11	12	13	14	15	16
ಸಿದ್ಧಪಡಿಸಿದವರು : ಕ್ಯಾಷಿಯರ್							ಪರಿಶೀಲಿಸಿದವರು: ಹಣಕಾಸು ಅಧಿಕಾರಿ ಅಪರ ಆಯುಕ್ತರು								

ಸೂಚನೆಗಳು:

1. ನಿಧಿಯ ಪ್ರತಿಯೊಂದು ಮೂಲಕ್ಕೆ ಒಂದು ಪ್ರತ್ಯೇಕ ಬ್ಯಾಂಕ್ ಪುಸ್ತಕವನ್ನು ಬಳಸತಕ್ಕದ್ದು.
2. ಬ್ಯಾಂಕ್ ಪುಸ್ತಕವನ್ನು ಪ್ರತಿ ದಿನದ ಕೊನೆಯಲ್ಲಿ ಸಮತೋಲನ ಮಾಡತಕ್ಕದ್ದು ಮತ್ತು ಪ್ರತಿ ದಿನದ ಮುಕ್ತಾಯದ ಶಿಲ್ಕನ್ನು ಮುಂದಿನ ದಿನಕ್ಕೆ ಮುಂದುವರಿಸತಕ್ಕದ್ದು.
3. ಲೆಕ್ಕ ಶೀರ್ಷಿಕೆ ಮತ್ತು ವಿವರಣೆ ಮತ್ತು ಸ್ವೀಕರ್ತರ ಹೆಸರನ್ನು ವಿವರಗಳ ಅಂಕಣಗಳಲ್ಲಿ ದಾಖಲಿಸತಕ್ಕದ್ದು.

ನಮೂನೆ- IV

(20(2)ನೇ ನಿಯಮವನ್ನು ನೋಡಿ)

ದಿನಚರಿ ಪುಸ್ತಕ

ಹಣಕಾಸಿನ ಮೂಲ.....

ದಿನಾಂಕ	ವೋಚರ್ ಸಂ.	ವಿವರಗಳು	ಲೆಕ್ಕ ಶೀರ್ಷಿಕೆ	ಖಾತಾ ಪುಟ	ಖರ್ಚು ಮೊಬಲಗು (ರೂ.ಗಳು)	ಜಮೆ ಮೊಬಲಗು (ರೂ.ಗಳು)	ಷರಾ
1	2	3	4	5	6	7	8
ಸಿದ್ಧಪಡಿಸಿದವರು : (ಹಣಕಾಸು ಅಧಿಕಾರಿ)				ಪರಿಶೀಲಿಸಿದವರು: ಅಪರ ಆಯುಕ್ತರು			

ಸೂಚನೆಗಳು:

1. ಒಂದು ಪ್ರತ್ಯೇಕ ದಿನಚರಿ ಪುಸ್ತಕವನ್ನು ಹಣಕಾಸಿನ ಪ್ರತಿಯೊಂದು ಮೂಲಕ್ಕೆ ಬಳಸತಕ್ಕದ್ದು.
2. ವಿವರಣೆಯನ್ನು ವಿವರಗಳ ಅಂಕಣಗಳಲ್ಲಿ ದಾಖಲಿಸತಕ್ಕದ್ದು.

ನಮೂನೆ- V

(21(2)ನೇ ನಿಯಮವನ್ನು ನೋಡಿ)

ಸಾಮಾನ್ಯ ಲೆಡ್ಜರ್ ಮತ್ತು ಉಪ-ಲೆಡ್ಜರ್

ಹಣಕಾಸಿನ ಮೂಲ .....

ಬಟವಾಡೆಗಳು						ಜಮೆ						ಷರಾ
ದಿನಾಂಕ	ವೋಚರ್ ಸಂ.	ವಿವರಗಳು	ಲೆಕ್ಕ ಶೀರ್ಷಿಕೆ	ಖಾತೆ ಪುಟ	ಮೊಬಲಗು (ರೂ.ಗಳು)	ದಿನಾಂಕ	ವೋಚರ್ ಸಂಖ್ಯೆ	ವಿವರಗಳು	ಲೆಕ್ಕ ಶೀರ್ಷಿಕೆ	ಖಾತೆ ಪುಟ	ಮೊಬಲಗು	
1	2	3	4	5	6	7	8	9	10	11	12	
ಸಿದ್ಧಪಡಿಸಿದವರು; ಪರಿಶೀಲಿಸಿದವರು: ಹಣಕಾಸು ಅಧಿಕಾರಿ ಅಪರ ಆಯುಕ್ತರು												

ಸೂಚನೆಗಳು:

1. ಒಂದು ಪ್ರತ್ಯೇಕ ಲೆಡ್ಜರ್ ಅನ್ನು ಹಣಕಾಸಿನ ಪ್ರತಿಯೊಂದು ಮೂಲಕ್ಕೆ ನಿರ್ವಹಿಸತಕ್ಕದ್ದು.
2. ಪ್ರತಿ ನಮೂದುಗಳನ್ನು ಹೊರತುಪಡಿಸಿ, ನಗದು ಪುಸ್ತಕ, ಬ್ಯಾಂಕ್ ಪುಸ್ತಕ ಮತ್ತು ದಿನಚರಿ ಪುಸ್ತಕದಿಂದ ಎಲ್ಲಾ ನಮೂದುಗಳನ್ನು
ಲೆಡ್ಜರ್ನಲ್ಲಿ ಆಯಾಯ ಲೆಕ್ಕಪತ್ರಗಳಿಗೆ ಅಂಟಿಸತಕ್ಕದ್ದು.
3.ಲೆಡ್ಜರ್ನಲ್ಲಿನ ಪ್ರತಿಯೊಂದು ಲೆಕ್ಕವನ್ನು ಪ್ರತಿಯೊಂದು ತಿಂಗಳಿನ ಕೊನೆಯಲ್ಲಿ ಸಮತೋಲನಗೊಳಿಸತಕ್ಕದ್ದು ಮತ್ತು ಶಿಲ್ಕನ್ನು ಮುಂದಿನ ತಿಂಗಳಿಗೆ ಮುಂದುವರಿಸತಕ್ಕದ್ದು.

ನಮೂನೆ-VI

(22(2) ನೇ ನಿಯಮ ನೋಡಿ)

ಸ್ವೀಕೃತಿಗಳು ಮತ್ತು ಪಾವತಿಗಳ ವರ್ಗೀಕೃತ ರಿಜಿಸ್ಟರು

ತಿಂಗಳು.....

ನಮೂನೆ-**VI**

(22(2)ನೇ ನಿಯಮ ನೋಡಿ)

ವರ್ಗೀಕೃತ ಸ್ವೀಕೃತಿಗಳು ಮತ್ತು ಪಾವತಿಗಳ ತಃಖ್ತೆ

ತಿಂಗಳು.....

ಸ್ವೀಕೃತಿಗಳು [ ] ಪಾವತಿಗಳು [ ] (ಅನ್ವಯಿಸುವುದನ್ನು ಗುರುತಿಸಿ)									
ಆದಾಯ ಖಾತೆ [ ] ಬಂಡವಾಳ ಖಾತೆ [ ] ಅಸಾಧಾರಣ ಖಾತೆ [ ]									
ದಿನಾಂಕ	ರಸೀದಿ ಸಂ.	ಬಜೆಟ್ ಶೀರ್ಷಿಕೆ							ಷರಾ
		ಬಜೆಟ್ ಶೀರ್ಷಿಕೆ	ಬಜೆಟ್ ಶೀರ್ಷಿಕೆ	ಬಜೆಟ್ ಶೀರ್ಷಿಕೆ	ಬಜೆಟ್ ಶೀರ್ಷಿಕೆ	ಬಜೆಟ್ ಶೀರ್ಷಿಕೆ	ಬಜೆಟ್ ಶೀರ್ಷಿಕೆ	ಬಜೆಟ್ ಶೀರ್ಷಿಕೆ	
1	2	3	4	5	6	7	8	9	10
ಮಾಸಿಕ ಮೊತ್ತ									
ಸಿದ್ಧಪಡಿಸಿದವರು ಹಣಕಾಸು ಅಧಿಕಾರಿ					ಪರಿಶೀಲಿಸಿದವರು ಅಪರ ಆಯುಕ್ತರು				

ಸೂಚನೆಗಳು:

